ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 2 ಬುಧವಾರ 2024

ಸಂಪುಟ: 45 | ಸಂಚಿಕೆ: 167 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಈಶ್ವರ ಅಲ್ಲಾ
ತೇರೇ ನಾಮ್
ಸಬ್ ಕೋ ಸನ್ಮತಿ
ದೇ ಭಗವಾನ್

ಕರ್ನಾಟಕದ ಕಾಂಗ್ರೆಸ್‌ನಲ್ಲಿ
'ರೇವಂತ್‌ರೆಡ್ಡಿ'ಗೆ ಶೋಧ!?



ಬೆಂಗಳೂರು, ಅ. 1(ಕೆಎಂಶಿ)– ಸರಣಿ ಹಗರಣಗಳ ಸುಳಿಗೆ ಸಿಲುಕಿರುವ ಸಿದ್ದರಾಮಯ್ಯ ಅವರ ನಾಯಕತ್ವ ಬದಲಾವಣೆಗೆ ಕಾಂಗ್ರೆಸ್ ಮುಂದಾಗಿದೆ.

ಸಿದ್ದರಾಮಯ್ಯ ನಂತರ ಯಾರು ಎಂಬ ಯಕ್ಷಪ್ರಶ್ನೆ ವರಿಷ್ಠರಿಗೆ ಎದುರಾಗಿದ್ದು, ಇದಕ್ಕಾಗಿ ಸಮರ್ಥ ನಾಯಕನೊಬ್ಬನ ಆಯ್ಕೆಗೆ ಮುಂದಾಗಿದ್ದಾರೆ. ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಅವರಂತಹ ವರ್ಚಸ್ವಿ ಹಾಗೂ ಕೇಂದ್ರ ಸರ್ಕಾರವನ್ನು ಜೊತೆಗೆ ತೆಗೆದುಕೊಂಡು ಹೋಗುವಂತಹ ನಾಯಕನನ್ನು ಕರ್ನಾಟಕದಲ್ಲೂ ಹುಡುಕುತ್ತಿದೆ.

ಮುಖ್ಯಮಂತ್ರಿ ಸ್ಥಾನಕ್ಕಾಗಿ ಡಿಸಿಎಂ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ. ಪರಮೇಶ್ವರ್, ಹಿರಿಯ ಶಾಸಕ ಆರ್.ವಿ. ದೇಶಪಾಂಡೆ ಸೇರಿದಂತೆ ಹಲವರು ಆಕಾಂಕ್ಷಿಗಳಾಗಿದ್ದಾರೆ. ರೇವಂತ ರೆಡ್ಡಿ ಗುಣವುಳ್ಳ ವ್ಯಕ್ತಿ ಆಯ್ಕೆಗಾಗಿ ಎಐಸಿಸಿ ಕಸರತ್ತು ನಡೆಸಿದೆ.

ಮುಡಾ ಬಿಡಿ ನಿವೇಶನಗಳಿಗೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಮತ್ತು ಅವರ ಕುಟುಂಬದ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಹಣ ದುರ್ಬಳಕೆ ಆರೋಪದ ಮೇಲೆ ಇಡಿ ಪ್ರಕರಣ ದಾಖಲಿಸಿದೆ. ಕಾನೂನು ಇಕ್ಕಟ್ಟಿಗೆ ಸಿಲುಕಿರುವ ಸಿದ್ದರಾಮಯ್ಯ ವಿರುದ್ಧ ಕಠಿಣ ಕ್ರಮಕ್ಕೆ ಕೇಂದ್ರ ಸರ್ಕಾರ ಹಿಂಜರಿಯುವುದಿಲ್ಲ. ಕೇಂದ್ರದ ವಿರುದ್ಧ ಜಿದ್ದಾಜಿದ್ದಿಗೆ ಬಿದ್ದಿರುವ ಸಿದ್ದರಾಮಯ್ಯ ಅವರನ್ನು ಕಾನೂನು ಇಕ್ಕಟ್ಟಿಗೆ ಸಿಲುಕಿಸಲು ಹೊರಟಿರುವುದು ಎಐಸಿಸಿ ವರಿಷ್ಠರಿಗೆ ಆತಂಕ ತಂದಿದೆ. ಇಂತಹ ಆರೋಪಗಳ ಮೇಲೆ ದೆಹಲಿ ಮತ್ತು ಜಾರ್ಖಂಡ್ ಮುಖ್ಯಮಂತ್ರಿಗಳನ್ನೂ ಜೈಲಿಗೆ ಕಳುಹಿಸಲಾಗಿತ್ತು, ಅವರು ಅಧಿಕಾರ ತ್ಯಜಿಸಿದ್ದಾರೆ.

ಇಂತಹ ಸನ್ನಿವೇಶದಲ್ಲಿ ರಾಷ್ಟ್ರೀಯ ಪಕ್ಷಕ್ಕೆ ಮುಜುಗರ ಆಗದಿರಲು ಸಿದ್ದರಾಮಯ್ಯ ಅವರಿಂದ ರಾಜೀನಾಮೆ ಕೊಡಿಸಿ ಹೊಸಬರ ನೇಮಕಾತಿಗೆ ಮುಂದಾಗಿದೆ. ವರಿಷ್ಠರು, ಮತ್ತೊಂದೆಡೆ ಸಿದ್ದರಾಮಯ್ಯ ಮನವೊಲಿಸಿ ಅಧಿಕಾರದಿಂದ ಕೆಳಗಿಳಿಸಲು ನಿರ್ಧರಿಸಿದ್ದಾರೆ.

ಸಿಎಂ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತ ತನಿಖೆ ಆರಂಭ

ಪಾರ್ವತಿ ಅವರಿಗೆ ದಾನವಾಗಿ ಬಂದ ಕೆಸರೆ ಗ್ರಾಮದ ಭೂಮಿ ಮಹಜರು

- ಆರೂವರೆ ಗಂಟೆ ಕಾಲ ನಡೆದ ಪಂಚನಾಮೆ; ಸರ್ವೆ, ಭೂ ದಾಖಲೆ ಇಲಾಖೆ ಅಧಿಕಾರಿಗಳು ಭಾಗಿ
- ನಕ್ಷೆ, ಚೆಕ್ಕುಬಂಧಿ ಉಲ್ಲೇಖ; ಅಕ್ಟೋಬರ್ 4 ರಂದು 14 ನಿವೇಶನಗಳಿರುವ ವಿಜಯನಗರದಲ್ಲಿ ಸರ್ವೆ



ಮೈಸೂರಿನ ಕೆಸರೆಯ ಸರ್ವೆ ನಂಬರ್ 464 ರ ಭೂಮಿಯಲ್ಲಿ ಮಂಗಳವಾರ ಲೋಕಾಯುಕ್ತ ಪೊಲೀಸರು ದೂರುದಾರ ಸ್ನೇಹಮಯಿ ಕೃಷ್ಣ ಸಮ್ಮುಖದಲ್ಲಿ ಸರ್ವೆ ಮಾಡಿದರು.

ಮೈಸೂರು, ಅ.1(ಬಿಎಲ್‌ಯು)– ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಲೋಕಾಯುಕ್ತ ತನಿಖೆ ಆರಂಭವಾಗಿದೆ. ಇದು ಅವರ ಪತ್ನಿ ಪಾರ್ವತಿ ಅವರಿಗೆ ತವರಿನಿಂದ ದಾನವಾಗಿ ಬಂದ ಮೈಸೂರಿನ ಕೆಸರೆ ಬಳಿಯ ಭೂಮಿಯನ್ನು ದೂರುದಾರ ಸ್ನೇಹಮಯಿ ಕೃಷ್ಣ ಸಮಕ್ಷಮದಲ್ಲಿ ಮಹಜರು ನಡೆಸಲಾಯಿತು.

ಲೋಕಾಯುಕ್ತ ಪೊಲೀಸರು ನೋಟಿಸ್ ನೀಡಿದ ಹಿನ್ನೆಲೆಯಲ್ಲಿ ಸ್ನೇಹ ಮಯಿ ಕೃಷ್ಣ ಇಂದು ಬೆಳಗ್ಗೆ 7.30ಕ್ಕೆ ಮೈಸೂರಿನ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿಗೆ ಆಗಮಿಸಿದರು. ಈ ವೇಳೆ ಅವರನ್ನು ವಿಚಾರಣೆಗೊಳಪಡಿಸಿದ ಲೋಕಾಯುಕ್ತ ಅಧಿಕಾರಿಗಳು, ನಿಮಗೆ ಈ ವಿಚಾರ ಹೇಗೆ ತಿಳಿಯಿತು ಎಂಬುದು ಸೇರಿದಂತೆ ಹಲವು ಪ್ರಶ್ನೆಗಳನ್ನು ಕೇಳಿದರು. ತರುವಾಯ ಲೋಕಾಯುಕ್ತ ಪೊಲೀಸರು, ಸ್ನೇಹಮಯಿ ಕೃಷ್ಣ ಜೊತೆ ಮೈಸೂರಿನ ರಿಂಗ್ ರಸ್ತೆಯ ಕೆಸರೆ ಸರ್ವೇ ನಂಬರ್ 464ರಲ್ಲಿ ಮಹ ಜರು ಕಾರ್ಯ ಆರಂಭಿಸಿದರು. ■6ನೇ ಪುಟಕ್ಕೆ

ತಡೆಯಾಜ್ಞೆಗೆ ಮುಂದಾದರೆ ಕಾನೂನಾತ್ಮಕ ಹೋರಾಟ

ಇಡಿ (ಜಾರಿ ನಿರ್ದೇಶನಾಲಯ)ಯಲ್ಲಿ ದಾಖಲಾಗಿರುವ ಪ್ರಕರಣಕ್ಕೆ ತಡೆಯಾಜ್ಞೆ ತರಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಾದರೆ ನಾನು ಕೂಡ ಕಾನೂನಾತ್ಮಕ ಹೋರಾಟ ಮಾಡುತ್ತೇನೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದರು. ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು 14 ನಿವೇಶನಗಳನ್ನು ಮುಡಾಗೆ ವಾಪಸ್ ನೀಡಿದಾಕ್ಷಣ ಈ ಪ್ರಕರಣ ಮುಕ್ತಾಯಗೊಳ್ಳುವುದಿಲ್ಲ. ಕಾನೂನು ಕುಣಿಕೆಯಿಂದ ಪಾರಾಗಲು ಸಾಧ್ಯವಿಲ್ಲ. ಈ ಕ್ರಮದಿಂದ ಶಿಕ್ಷೆ ಪ್ರಮಾಣ ಕಡಿಮೆ ಆಗಬಹುದೇ ಹೊರತು, ಸಂಪೂರ್ಣ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂದರು. ಮುಡಾ ಪ್ರಕರಣದಲ್ಲಿ ನಿವೇಶನಗಳ ವಾಪಸು ನೀಡಿದರೂ, ಈಗಾಗಲೇ ಇಡಿಯಲ್ಲಿ ಪ್ರಕರಣ ದಾಖಲಾಗಿರುವ ಕಾರಣ ಅವರು ತನಿಖೆ ಮಾಡುತ್ತಾರೆ. ಆದರೆ ಯಾವಾಗ ತನಿಖೆಗೆ ಬರುತ್ತೇವೆ ಎಂದು ಇಡಿಯಿಂದ ಈ ತನಕ ನನಗೆ ಯಾವುದೇ ಮಾಹಿತಿ ಬಂದಿಲ್ಲ ಎಂದು

ಖ್ಯಾತ ಶಹನಾಯ್ ವಾದಕ ಪಂಡಿತ್ ಬಸವರಾಜ ಭಜಂತ್ರಿ ಹೆಡಿಗ್ಗೊಂಡ ರಾಜ್ಯ ಸಂಗೀತ ವಿದ್ವಾನ್



ಮೈಸೂರು, ಅ.1(ಆರ್‌ಕೆ)– ಖ್ಯಾತ ಶಹನಾಯ್ ವಾದಕ ಪಂಡಿತ್ ಬಸವರಾಜ ಭಜಂತ್ರಿ ಹೆಡಿಗ್ಗೊಂಡ ಅವರು 2024–25ರ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರಕಟಿಸಿದ್ದು, ಅಕ್ಟೋಬರ್ 3ರಂದು ಮೈಸೂರು ದಸರಾ ಮಹೋತ್ಸವ ಉದ್ಘಾಟನೆ ದಿನ ಸಂಜೆ ಅರಮನೆ ಆವರಣದಲ್ಲಿ ನಡೆಯಲಿರುವ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿಗಳು ಪಂಡಿತ್ ಬಸವರಾಜ ಭಜಂತ್ರಿ ಹೆಡಿಗ್ಗೊಂಡ ಅವರಿಗೆ ಪ್ರಶಸ್ತಿ ಪ್ರದಾನ ಮಾಡುವರು. ಹಾವೇರಿ ಜಿಲ್ಲೆ, ಬ್ಯಾಡಗಿ ತಾಲೂಕು ಹೆಡಿಗೊಂಡ ಗ್ರಾಮದ ಪಂಡಿತ್ ತಿರುಕಪ್ಪ ಮತ್ತು ಶ್ರೀಮತಿ ಸಾವಿತ್ರಮ್ಮ ದಂಪತಿಯ ■6ನೇ ಪುಟಕ್ಕೆ

ಸಿದ್ದರಾಮಯ್ಯ ಪತ್ನಿ ಹಿಂದಿರುಗಿಸಿದ ನಿವೇಶನಗಳ ಕ್ರಯಪತ್ರ ರದ್ದತಿಗೆ ಮುಡಾ ಆಯುಕ್ತ ಆದೇಶ

ನ್ಯಾ.ದೇಸಾಯಿ ಆಯೋಗದ ತನಿಖೆ ನಂತರ ಉಳಿದ ನಿವೇಶನ ಸಂಬಂಧ ನಿರ್ಧಾರ



ಮೈಸೂರು, ಅ.1(ಆರ್‌ಕೆ)–ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಶ್ರೀಮತಿ ಬಿ.ಎಂ. ಪಾರ್ವತಿ ಹೆಸರಿಗೆ 50:50ರ ಅನುಪಾತದಡಿ ಮಂಜೂರಾಗಿದ್ದ 14 ನಿವೇಶನಗಳ ಕ್ರಯ ಪತ್ರ (Sale Deed) ರದ್ದುಪಡಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಆಯುಕ್ತ ಎ.ಎನ್.ರಘುನಂದನ್, ಇಂದು ಸಂಜೆ ಆದೇಶ ಹೊರಡಿಸಿದ್ದಾರೆ. ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿ ಕ್ರಿಯೆ ನೀಡಿದ ಅವರು, ಬಿ.ಎಂ.ಪಾರ್ವತಿ ಅವರು ಸ್ವ-ಇಚ್ಛೆಯಿಂದ ತಮಗೆ ಹಂಚಿಕೆಯಾಗಿ ರುವ ನಿವೇಶನಗಳನ್ನು ವಾಪಸ್ ಪಡೆಯುವಂತೆ ಲಿಖಿತ ರೂಪದಲ್ಲಿ ಮನವಿ ಮಾಡಿರುವುದರಿಂದ ಇಂದು ಕ್ರಯಪತ್ರ ರದ್ದುಗೊಳಿಸುವ ಬಗ್ಗೆ ಆದೇಶ ಹೊರಡಿಸಿದ್ದೇನೆ ಎಂದರು. ಈ ಆದೇಶದಂತೆ ಮುಡಾ ಕಚೇರಿಯಲ್ಲಿರುವ ■6ನೇ ಪುಟಕ್ಕೆ

ತನಿಖಾ ಹಂತದಲ್ಲಿ ಆಸ್ತಿಯ ಸ್ವರೂಪ ಬದಲಾವಣೆ ಕ್ರಮಬದ್ಧವಲ್ಲ

ತನಿಖೆಗೆ ಒಳಪಟ್ಟ ಆಸ್ತಿಯಾಗಿರುವುದರಿಂದ ಈ ಹಂತದಲ್ಲಿ ನಿವೇಶನಗಳನ್ನು ನೇರವಾಗಿ ಮುಡಾ ಹಿಂಪಡೆಯುವುದು ಕ್ರಮಬದ್ಧವಾಗುವುದಿಲ್ಲ. ತನಿಖೆ ವೇಳೆ ಆಸ್ತಿಯ ಸ್ವರೂಪ ಬದಲಿಸುವಂತಿಲ್ಲ. ಮುಡಾ ನೇರವಾಗಿ ನಿವೇಶನಗಳನ್ನು ಹಿಂಪಡೆದರೆ ಸದರಿ ಆಸ್ತಿಯ ಮಾಲೀಕತ್ವವೇ ಬದಲಾಗುತ್ತದೆ. ಪ್ರಕರಣ ದಾಖಲಾದ ವೇಳೆ ಪಾರ್ವತಿಯವರು ಆಸ್ತಿ ಮಾಲೀಕರಾಗಿದ್ದರು. ಆ ನಿವೇಶನಗಳ ಹಿಂಪಡೆದಿದ್ದರೆ ಮುಡಾ ಮಾಲೀಕತ್ವಕ್ಕೆ ಒಳಪಡುತ್ತದೆ. ನಿವೇಶನಗಳನ್ನು ಹಿಂಪಡೆಯುವ ಬಗ್ಗೆ ತನಿಖಾಧಿಕಾರಿಗಳಿಗೆ ತಿಳಿಸಿ, ನ್ಯಾಯಾಲಯದ ಅನುಮತಿ ಪಡೆದು ಮುಂದುವರೆಯಬೇಕು. ಹೀಗೆ ಮಾಡದೆ ಪಾರ್ವತಿಯವರಿಂದ ನಿವೇಶನಗಳನ್ನು ಮುಡಾ ನೇರವಾಗಿ ಹಿಂಪಡೆದಿದ್ದರೆ ಅದು ಕ್ರಮಬದ್ಧ ಎನ್ನಲಾಗದು.

– ಜಿ.ವಿ.ರಾಮಮೂರ್ತಿ, ಹಿರಿಯ ವಕೀಲರು

ಮೈಸೂರು ಮಿತ್ರ ಬುಧವಾರ 2 ಅಕ್ಟೋಬರ್ 2024

ಚೆಸ್ ಪಂದ್ಯಾವಳಿಯಲ್ಲಿ ಸಂತ ಜೋಸೆಫರ ಕೇಂದ್ರೀಯ ಶಾಲೆಯ ವಿದ್ಯಾರ್ಥಿಗಳು ರಾಷ್ಟ್ರ ಮಟ್ಟಕ್ಕೆ ಆಯ್ಕೆ



ಚೆಸ್ ಪಂದ್ಯಾವಳಿಯಲ್ಲಿ ಮೈಸೂರು ವಿಜಯನಗರದ ಸಂತ ಜೋಸೆಫರ ಕೇಂದ್ರೀಯ ಶಾಲೆಯ ವಿದ್ಯಾರ್ಥಿಗಳು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಮೈಸೂರು, ಅ. 1-ಸಿಬಿಎಸ್‌ಸಿ ದಕ್ಷಿಣ ವಲಯ ಚೆಸ್ ಚಾಂಪಿಯನ್‌ಶಿಪ್ 2024-25ನೇ ಸಾಲಿನ ರಾಜ್ಯ ಮಟ್ಟದ ಸ್ಪರ್ಧೆಯು ದಾವಣಗೆರೆಯ ಹರಪನ ಹಳ್ಳಿಯಲ್ಲಿ ಇತ್ತೀಚೆಗೆ ನಡೆಯಿತು.

ಸ್ಪರ್ಧೆಯಲ್ಲಿ ಕೇರಳ, ಮಹಾರಾಷ್ಟ್ರ, ಗೋವಾ, ಕರ್ನಾಟಕ ಇನ್ನು ಮುಂತಾದ ರಾಜ್ಯಗಳ ಸಿಬಿಎಸ್ಸಿ ಶಾಲೆಗಳ 275ಕ್ಕೂ ಹೆಚ್ಚು ಶಾಲಾ ತಂಡಗಳು ವಿವಿಧ ವಯೋಮಾನ ಶ್ರೇಣಿಯ ಸ್ಪರ್ಧೆಯಲ್ಲಿ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗ ವಹಿಸಿದ್ದರು. ಸ್ಪರ್ಧೆಯಲ್ಲಿ ಮೈಸೂರಿನ ವಿಜಯನಗರದ ಸಂತ ಜೋಸೆಫರ ಕೇಂದ್ರೀಯ ಶಾಲೆಯ ವಿದ್ಯಾರ್ಥಿಗಳಾದ ಯಶಿಕಾ ಆರ್ ಜೋಶಿ, ಗಂಭೀರ್, ಎನ್ ಸಿ ವಿಹಾನ್, ವೇಣುಗೋಪಾಲ್ ಮತ್ತು ಕೌಸ್ತುಭ್ ತೇಜ ಕುಮಾರ್ ವಿದ್ಯಾರ್ಥಿಗಳು ಭಾಗವಹಿಸಿ 17 ವರ್ಷದೊಳಗಿನ ಮಿಶ್ರ ಚೆಸ್ ಚಾಂಪಿಯನ್‌ಶಿಪ್ ಅನ್ನು ಗೆದ್ದು, ಪಂಜಾಬ್ ರಾಜ್ಯದ ಜಲಂಧರ್‌ನಲ್ಲಿ ನಡೆಯುವ ರಾಷ್ಟ್ರಮಟ್ಟದ ಚೆಸ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಎಂಡಿಇಎಸ್‌ನ ಕಾರ್ಯದರ್ಶಿ ರೆ. ಫಾ ಎಡ್ವರ್ಡ್ ವಿಲಿಯಂ ಸಲ್ಡಾನ್ಹಾ, ಖಜಾಂಚಿ ಫಾ. ನವೀನ್‌ಕುಮಾರ್, ಪ್ರಾಂಶುಪಾಲರಾದ ಶ್ರೀಮತಿ ಎಲಿಜಬೆತ್ ಎಸ್ ಥಾಮಸ್, ಶೈಕ್ಷಣಿಕ ಪ್ರಾಂಶುಪಾಲರಾದ ಶ್ರೀಮತಿ ಮೇರಿ ಮಾರ್ಗರೇಟ್ ನಿರ್ಮಲ, ಶಾಲೆ ಶಿಕ್ಷಕರು ಉಪಸ್ಥಿತರಿದ್ದರು.

ಕರ್ನಾಟಕ ಸೇನಾಪಡೆ ವತಿಯಿಂದ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಆಚರಣೆ



ಕರ್ನಾಟಕ ಸೇನಾ ಪಡೆ ವತಿಯಿಂದ ಮೈಸೂರಿನ ಅಗ್ರಹಾರ ವೃತ್ತದಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಆಚರಿಸಲಾಯಿತು.

ಮೈಸೂರು, ಅ. 1-ಕರ್ನಾಟಕ ಸೇನಾ ಪಡೆ ವತಿಯಿಂದ ಮಂಗಳವಾರ ಮೈಸೂರಿನ ಅಗ್ರಹಾರ ವೃತ್ತದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಆಚರಿಸಲಾಯಿತು. ಮಹನೀಯರ ಭಾವಚಿತ್ರಗಳಿಗೆ ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಪುಷ್ಪಾರ್ಚನೆ ಮಾಡಿದರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಕರ್ನಾಟಕ ಸೇನಾಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಪ್ರಭು ಶಂಕರ್, ಕೃಷ್ಣಪ್ಪ ಸುರೇಶ್ ಗೋಲ್ಡ್, ಮೊಗಣ್ಣಾಚಾರ್, ಪ್ರಭಾಕರ್, ಹನು ಮಂತಯ್ಯ, ಶಿವಲಿಂಗಯ್ಯ, ಲಕ್ಷ್ಮೀ ದೇವಿ, ಸುಶೀಲಾ ನಂಜಪ್ಪ ನೇಹಾ, ಲಕ್ಷ್ಮೀ, ಭಾಗ್ಯಮ್ಮ, ಇಂದಿರಾ, ಬಸವರಾಜು, ರಘು ರಾಜ್, ಮಹಾದೇವಸ್ವಾಮಿಗೌಡ, ಸುಬ್ಬೇ ಗೌಡ, ಗಣೇಶ್ ಪ್ರಸಾದ್, ರವಿನಾಯಕ್, ವಿಷ್ಣು ಇನ್ನಿತರರು ಉಪಸ್ಥಿತರಿದ್ದರು.

ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್‌ನಲ್ಲಿ ಶರವನ್ನರಾತ್ರಿ ಮಹೋತ್ಸವ

TRAYINYAS

ಮೈಸೂರು, ಅ.1(ಎಸ್‌ಬಿಡಿ)- ಮೈಸೂರಿನ ಜಯಲಕ್ಷ್ಮೀಪುರಂ ಮೂರನೇ ಬ್ಲಾಕ್, 7ನೇ ಮುಖ್ಯರಸ್ತೆಯಲ್ಲಿನ ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ ಆವರಣದಲ್ಲಿ 28ನೇ ವರ್ಷದ ಶರನ್ನವರಾತ್ರಿ ಮಹೋತ್ಸವ ಹಮ್ಮಿಕೊಳ್ಳಲಾಗಿದೆ. ಅ.3ರಿಂದ 11ರವರೆಗೆ ನಿತ್ಯ ಬೆಳಗ್ಗೆ 8.30ಕ್ಕೆ ವಿಶೇಷ ಪೂಜಾ ಕೈಂಕರ್ಯಗಳು ಹಾಗೂ ಸಂಜೆ 5.30ಕ್ಕೆ ಹೋಮ-ಹವನ ನೆರವೇರಲಿದೆ. ಅ.3ರಂದು ಸಂಜೆ ಶ್ರೀ ಮಹಾಮೃತ್ಯುಂಜಯ ಹೋಮ, ಅ.4ರಂದು ಶ್ರೀ ನವದುರ್ಗಾಹೋಮ ಮತ್ತು ಶ್ರೀ ಮಹಾಪ್ರತ್ಯಂಗೀರಾ ಹೋಮ, ಅ.5ರಂದು ಶ್ರೀ ಮಹಾವಿಷ್ಣು ದಶಾವತಾರ ಹೋಮ ಮತ್ತು ಮಹಾ ಧನ್ವಂತರಿ ಹೋಮ, ಅ.6ರಂದು ಶ್ರೀ ದಶಗಣಪತಿ ಹೋಮ, ಅ.7ರಂದು ಶ್ರೀ ಲಲಿತಾ ಮಹಾಯಾಗ ಮತ್ತು ಶ್ರೀ ದಶಮಹಾವಿದ್ಯಾ ಹೋಮ, ಅ.8ರಂದು ಶ್ರೀ ಸುಬ್ರಹ್ಮಣ್ಯ ಆವರಣಾಂಗ ಹೋಮ ಮತ್ತು ಶ್ರೀ ದಶವಾರಾಹಿ ಹೋಮ, ಅ.9ರಂದು ಶ್ರೀ ಬಾಲಾ ತ್ರಿಪುರಸುಂದರೀ ಮತ್ತು ಶ್ರೀ ದಶಶ್ಯಾಮಲಾ ಹೋಮ, ಅ.10ರಂದು ಶ್ರೀ ವಿದ್ಯಾ ಷೋಡಶದುರ್ಗಾ ಜಗದ್ಧಾತ್ರಿ ಹೋಮ, ಅ.11ರಂದು ಬೆಳಗ್ಗೆ 5ಕ್ಕೆ ಶ್ರೀ ವಾಂಛಾಕಲ್ಪಲತಾ ಶ್ರೀವಿದ್ಯಾ ಗಣೇಶ ಪರ್ಯಾಯ ಹೋಮ, ಸಗ್ರಹಮಖ ನವಚಂಡಿಯಾಗ, ಪೂರ್ಣಾಹುತಿ, ಬಲಿಹರಣ ಮುಂತಾದ ಪೂಜಾ ಕೈಂಕರ್ಯ ಜರುಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ

ಸಿ.ರವಿಕುಮಾರ್



ಮೈಸೂರು,ಅ.1-ಮೈಸೂರಿನ ದಟ್ಟಗಳ್ಳಿ ನಿವಾಸಿ, ಉದ್ಯಮಿ ಹಾಗೂ ಸಮಾಜ ಸೇವಕ ಸಿ.ರವಿಕುಮಾರ್ (ರವಿಗೌಡ) ಇಂದು ನಿಧನರಾದರು. ಅವರಿಗೆ 59 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ ಡಾ.ಎಲ್.ಸವಿತಾ (ಶಿಕ್ಷಣ ತಜ್ಞೆ), ಪುತ್ರ ಅಭಿಷೇಕ್ (ವಕೀಲ) ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ರವಿಕುಮಾರ್ ಅವರ ದೇಹವನ್ನು ಮೈಸೂರು ಮೆಡಿಕಲ್ ಕಾಲೇಜಿಗೆ ದಾನ ಮಾಡಲಾಗಿದೆ.

ಎ.ವಿ. ಸ್ಟೀಫನ್



ಮೈಸೂರಿನ ಹಿನಕಲ್‌ನ ಮಾನಸ ಅಪಾರ್ಟ್‌ಮೆಂಟ್ ನಿವಾಸಿ ಎ.ವಿ.ಸ್ಟೀಫನ್ (64) ಮಂಗಳವಾರ ನಿಧನರಾದರು. ಮೃತರು ಪತ್ನಿ ಜೆಸ್ಸಿ, ಪುತ್ರ ಜೆಫ್ಟಿನ್, ಪುತ್ರಿ ಹೀನಾ ಮೇರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಹಿನಕಲ್‌ನ ಇನ್‌ಫ್ಯಾಂಟ್ ಜೀಸಸ್ ಕೆಥೆಡ್ರಲ್‌ನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಲ್‌ಹಾಜ್ ಫಮಿದಾ ಖಾನಂ



ಮೈಸೂರಿನ ಗಾಂಧಿನಗರದ ಕರುಣಾಪುರ ಮುಖ್ಯ ರಸ್ತೆ ನಿವಾಸಿ ದಿವಂಗತ ಸೈಯದ್ ಕಬೀರ್ ಅವರ ಪತ್ನಿ ಅಲ್‌ಹಾಜ್ ಫಮಿದಾ ಖಾನಂ (60) ಸೋಮವಾರ ನಿಧನರಾದರು. ಮೃತರು ಜೆಡಿಎಸ್ ಮುಖಂಡ ಸೈಯದ್ ತಬ್ರೇಜ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಟೇಲ್ ಎ. ಶಂಕರೇಗೌಡ



ಪಾಂಡವಪುರ: ಮೈಸೂರಿನ ವಿಜಯನಗರದ ನೆಸ್ಟ್‌ನ ಟ್ರಸ್ಟಿ, ಪಾಂಡವಪುರ ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷರು ಹಾಗೂ ತಾಲೂಕಿನ ಕನಗನಮರಡಿ ಗ್ರಾಮದ ನಿವಾಸಿ ಪಟೇಲ್ ಎ. ಶಂಕರೇಗೌಡ (74) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಪುತ್ರ ಸುರೇಂದ್ರ, ಪುತ್ರಿ ಸುಚಿತ್ರ, ಅಳಿಯ ಸತೀಶ್, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕನಗನಮರಡಿ ಗ್ರಾಮದಲ್ಲಿ ಇಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕ್ಯಾಮರಾ ಕಣ್ಗಾವಲಲ್ಲಿ ನಾಳೆ ಪಿಎಸ್‌ಐ ನೇಮಕಾತಿ ಪರೀಕ್ಷೆ

● ಬೆಂಗಳೂರು ಸೇರಿ ಆರು ಜಿಲ್ಲೆಯ 163 ಪರೀಕ್ಷಾ ಕೇಂದ್ರಗಳಲ್ಲಿ 66,990 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ● ಪರೀಕ್ಷಾ ಅಕ್ರಮ ತಡೆಗೆ ವ್ಯಾಪಕ ಮುನ್ನೆಚ್ಚರಿಕೆ; ಕಿವಿಯಲ್ಲಿ ಎಲೆಕ್ಟ್ರಾನಿಕ್ ಉಪಕರಣ ಪತ್ತೆಗೆ ಪ್ರತಿ ಕೇಂದ್ರಕ್ಕೆ ಓರ್ವ ಇಎನ್‌ಟಿ ತಜ್ಞ ವೈದ್ಯರ ನಿಯೋಜನೆ





ಬೆಂಗಳೂರು, ಅ. 1(ಕೆಎಂಶಿ)- 402 ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಹುದ್ದೆಗಳ ನೇಮಕಾತಿಗೆ ಅ.3ರಂದು ಕ್ಯಾಮರಾ ಕಣ್ಗಾವಲಿನಲ್ಲಿ ಲಿಖಿತ ಪರೀಕ್ಷೆ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವ್ಯಾಪಕ ಸಿದ್ಧತೆ ಮಾಡಿಕೊಂಡಿದೆ.

ಬೆಂಗಳೂರು, ವಿಜಯಪುರ, ಶಿವಮೊಗ್ಗ, ಕಲಬುರಗಿ, ಧಾರವಾಡ ಮತ್ತು ದಾವಣಗೆರೆಯಲ್ಲಿ ಒಟ್ಟು 163 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ಬೆಂಗಳೂರಿನಲ್ಲಿ ಅತೀ ಹೆಚ್ಚು ಅಂದರೆ 21,875 ಮಂದಿ ಸೇರಿದಂತೆ ಒಟ್ಟು 66,990 ಅಭ್ಯರ್ಥಿಗಳು ವಿವಿಧ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲಿದ್ದಾರೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪರೀಕ್ಷಾ ಅಕ್ರಮಗಳಿಗೆ ಅವಕಾಶ ಇಲ್ಲದಂತೆ ಬಿಗಿಕ್ರಮ ಕೈಗೊಳ್ಳಲಾಗಿದೆ, ಪರೀಕ್ಷೆ ಆರಂಭಕ್ಕೆ ಅರ್ಧ ಗಂಟೆ ಮೊದಲು ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದೊಳಗೆ ಕಡ್ಡಾಯವಾಗಿ ಇರಬೇಕು. ಪರೀಕ್ಷಾ ಕೇಂದ್ರಕ್ಕೆ ಅಭ್ಯರ್ಥಿಗಳು ಬೇಗ ಆಗಮಿಸಿ ಪೊಲೀಸರ ತಪಾಸಣೆಗೆ ಒಳಪಡಬೇಕು, ತಡವಾಗಿ ಬರುವವರಿಗೆ ಪ್ರವೇಶ ಇರುವುದಿಲ್ಲ, ವಸ್ತ್ರ ಸಂಹಿತೆ ಕಡ್ಡಾಯವಾಗಿ ಪಾಲಿಸಬೇಕು. ಪ್ರತಿಯೊಂದು ಪರೀಕ್ಷಾ ಕೊಠಡಿಯಲ್ಲೂ ಕ್ಯಾಮರಾ ಅಳವಡಿಸಿದ್ದು, ವೆಬ್‌ಕಾಸ್ಟಿಂಗ್ ಮೂಲಕ ಎಲ್ಲ ಬೆಳವಣಿಗೆ ವೀಕ್ಷಿಸುವ ವ್ಯವಸ್ಥೆ ಮಾಡಲಾಗಿದೆ, ಪ್ರತಿ ಕೇಂದ್ರದಲ್ಲಿ ಜಾಮರ್ ಅಳವಡಿಸಲು ಕ್ರಮ ತೆಗೆದುಕೊಂಡಿದ್ದು, ಆಸುಪಾಸಿನಲ್ಲಿ ಬ್ಲೂಟೂಥ್ ಸೇರಿದಂತೆ ಯಾವುದೇ ಎಲೆಕ್ಟ್ರಾನಿಕ್ ವಸ್ತುಗಳು ಕಾರ್ಯನಿರ್ವಹಿಸದಂತೆ ಮಾಡಲಾಗಿದೆ.

ಬೆಂಗಳೂರಿನ ಕೆಇಎ ಕಚೇರಿಯಲ್ಲಿ ರಾಜ್ಯಮಟ್ಟದ ಕಮಾಂಡ್ ಸೆಂಟರ್ ಸ್ಥಾಪಿಸಿದ್ದು, ಪ್ರತಿಯೊಂದು ಪರೀಕ್ಷಾ ಕೊಠಡಿಯಲ್ಲಿ ಆಗುವ ಬೆಳವಣಿಗೆ ಗಮನಿಸಲು ಟಿವಿಗಳನ್ನು ಅಳವಡಿಸಲಾಗಿದೆ, ಜಿಲ್ಲಾ ಮಟ್ಟದಲ್ಲೂ ಒಂದು ನಿಯಂತ್ರಣ ಕೊಠಡಿ ಕಾರ್ಯ ನಿರ್ವಹಿಸಲಿದೆ.

ಪ್ರಶ್ನೆ ಪತ್ರಿಕೆ ಸ್ವೀಕಾರ ಮತ್ತು ಅದರ ಬಂಡಲ್ ತೆರೆಯುವ ಎಲ್ಲ ಪ್ರಕ್ರಿಯೆಯನ್ನೂ ವೆಬ್ ಕಾಸ್ಟಿಂಗ್ ಮಾಡಲಾಗುತ್ತದೆ. ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಪ್ರವೇಶಿಸುವ ಸಂದರ್ಭದಲ್ಲಿ ಅವರ ಬೆರಳಚ್ಚು ಮತ್ತು ಭಾವಚಿತ್ರ ತೆಗೆದುಕೊಂಡು, ಅವರು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಲಗತ್ತಿಸಿರುವ ಚಿತ್ರದ ಜತೆಗೆ ಸ್ಥಳದಲ್ಲೇ ಆನ್‌ಲೈನ್‌ನಲ್ಲಿ ಹೊಂದಾಣಿಕೆ ಮಾಡುವ ವ್ಯವಸ್ಥೆ ಮಾಡಲಾಗಿದೆ, ಇದರಿಂದ ಯಾರದೋ ಹೆಸರಿನಲ್ಲಿ ಇನ್ಯಾರೋ ಪರೀಕ್ಷೆ ಬರೆಯುವುದನ್ನು ತಡೆಯಬಹುದು.

ಬೇರೆ ಜಿಲ್ಲೆಗಳ ವಿಶೇಷ ವೀಕ್ಷಕರನ್ನೂ ನಿಯೋಜಿಸಿದ್ದು, ಅವರು ಪರೀಕ್ಷಾ ಕೇಂದ್ರಗಳಲ್ಲಿ ಕಟ್ಟುನಿಟ್ಟಿನ ನಿಗಾ ವಹಿಸಲಿದ್ದಾರೆ, ಈ ಹಿಂದೆ ಕಿವಿಯೊಳಗೆ ಅತಿಸೂಕ್ಷ್ಮ ಎಲೆಕ್ಟ್ರಾನಿಕ್ ಸಾಧನಗಳನ್ನು ಇಟ್ಟುಕೊಂಡು ಪರೀಕ್ಷೆಯಲ್ಲಿ ಅಕ್ರಮ ಎಸಗಲು ಪ್ರಯತ್ನಿಸಿದ ಪ್ರಕರಣಗಳು ವರದಿಯಾದ ಹಿನ್ನೆಲೆಯಲ್ಲಿ ಪ್ರತಿ ಪರೀಕ್ಷಾ ಕೇಂದ್ರದಲ್ಲೂ ಒಬ್ಬ ಇಎನ್‌ಟಿ ವೈದ್ಯರನ್ನು ನಿಯೋಜಿಸಿದ್ದು, ಅವರು ಅಭ್ಯರ್ಥಿಗಳ ಮೇಲೆ ನಿಗಾ ಇಡಲಿದ್ದಾರೆ. ಪರೀಕ್ಷೆ ನಡೆಯುವ ಎಲ್ಲಾ ಆರು ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆ ವಿಡಿಯೊ ಸಂವಾದ ನಡೆಸಿ ಬಿಗಿ ಕ್ರಮಗಳ ಬಗ್ಗೆ ವಿವರಿಸಲಾಗಿದೆ ಎಂದಿದ್ದಾರೆ.

ಟೆನ್ನಿಸ್ ಪಂದ್ಯಾವಳಿ ಉದ್ಘಾಟನೆ



ಗಾರ್ಡನ್ ಟೆನ್ನಿಸ್ ಕ್ಲಬ್, ಅಖಿಲ ಭಾರತ ಟೆನ್ನಿಸ್ ಅಸೋಸಿಯೇಷನ್ ಮತ್ತು ಪ್ರೊ ಸ್ಪೋರ್ಟ್ಸ್ ಟೆನ್ನಿಸ್ ಅಕಾಡೆಮಿ ಸಂಯುಕ್ತ ಆಶ್ರಯದಲ್ಲಿ ಮೈಸೂರಿನ ನಜರ್‌ಬಾದ್‌ನ ಗಾರ್ಡನ್ ಟೆನ್ನಿಸ್ ಅಕಾಡೆಮಿಯಲ್ಲಿ ಆಯೋಜಿಸಿದ್ದ 14ರ ವಯೋಮಾನದ ಬಾಲಕರು ಮತ್ತು ಬಾಲಕಿಯರ ಟೆನ್ನಿಸ್ ಪಂದ್ಯಾವಳಿಯನ್ನು ಕರ್ನಾಟಕ ಪೊಲೀಸ್ ಅಕಾಡೆಮಿ ಉಪನಿರ್ದೇಶಕ ಚನ್ನಬಸವಣ್ಣ ಉದ್ಘಾಟಿಸಿದರು. ಈ ವೇಳೆ ಜಿಎಸ್‌ಟಿ ಕಮೀಷನರ್ ಸೆಂಟ್ರಲ್ (ಆಡಿಟ್) ಮನೀಶ್ ತಪ್ಲಿಯಾಲ್, ಸಹಾಯಕ ಆಯುಕ್ತ ಕೆ.ಆರ್.ರಕ್ಷಿತ್, ಗಾರ್ಡನ್ ಟೆನ್ನಿಸ್ ಕ್ಲಬ್ ಅಧ್ಯಕ್ಷ ಎನ್. ಧ್ರುವರಾಜ್, ಕಾರ್ಯದರ್ಶಿ ಎಂ.ಎನ್.ನಂದೀಶ್ ಮತ್ತು ಪಂದ್ಯಾವಳಿ ನಿರ್ದೇಶಕ ಎಲ್.ಪಿ.ಆದಿಶೇಷ್ ಇನ್ನಿತರರು ಉಪಸ್ಥಿತರಿದ್ದರು.

ರಕ್ತದಾನ ಆರೋಗ್ಯವಂತ ವ್ಯಕ್ತಿಯ ಕರ್ತವ್ಯವಾಗಲಿ

ಮೈಸೂರು: ಸ್ವಯಂಪ್ರೇರಣೆಯಿಂದ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಮಾಡುವ ರಕ್ತದಾನ ಅತ್ಯಂತ ಪವಿತ್ರ ಕಾರ್ಯ. ಒಬ್ಬನ ರಕ್ತದಾನದಿಂದ ಮೂವರು ರೋಗಿಗಳಿಗೆ ಜೀವದಾನ ಮಾಡಲು ಅವಕಾಶವಿದೆ. ರಕ್ತದಾನ ಮಾಡುವುದು ಪ್ರತಿಯೊಬ್ಬ ಆರೋಗ್ಯವಂತ ವ್ಯಕ್ತಿಯ ಕರ್ತವ್ಯವಾಗಲಿ ಎಂದು ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಹೇಳಿದರು.

ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಎಂಎಂಕೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥ ಮಹಿಳಾ ಮಹಾವಿದ್ಯಾಲಯ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಜೀವಧಾರ ರಕ್ತನಿಧಿ ಕೇಂದ್ರ ವತಿಯಿಂದ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆ ಅಂಗವಾಗಿ 50ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಸ್ವಯಂಪ್ರೇರಿತ ರಕ್ತದಾನ ಮಾಡಿದರು. ಈ ಸಂದರ್ಭದಲ್ಲಿ ಹೆಚ್ಚು ಸ್ವಯಂಪ್ರೇರಿತ ರಕ್ತದಾನ ಮಾಡಿದ 20 ವಿದ್ಯಾರ್ಥಿನಿಯರಿಗೆ ಅಭಿನಂದಿಸಿ, ಮಾತನಾಡಿದ ಅವರು ಆರೋಗ್ಯವಂತ ವ್ಯಕ್ತಿಗಳು ರಕ್ತದಾನ ಮಾಡುವುದರಿಂದ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ. ಯುವಕರು ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡಲು ಮುಂದೆ ಬರಬೇಕು ಎಂದು ಹೇಳಿದರು.

ರಕ್ತದಾನ ಮಾಡಿದರೆ ಆಗುವ ಉಪಯೋಗಗಳ ಬಗ್ಗೆ ಹಾಗೂ ರಕ್ತದಾನದ ಜಾಗೃತಿಯನ್ನು ವಿದ್ಯಾರ್ಥಿನಿಯರಿಗೆ ಜಿಲ್ಲಾ ಏಡ್ಸ್ ಅಂಡ್ ಜಿಲ್ಲಾ ಪ್ರತಿಬಂಧಕ ಮತ್ತು ನಿಯಂತ್ರಣ ಅಧಿಕಾರಿ ಡಾ.ಜಯಂತ್ ತಿಳಿಸಿದರು. ಕಾಲೇಜಿನ ಉಪ ಪ್ರಾಂಶುಪಾಲ ಸುಕೃತ್ ಕೆ, ಎನ್‌ಎಸ್‌ಎಸ್ ಅಧಿಕಾರಿ ಅನಿತಾ ಪಿ.ಜಯರಾಮ್, ಜಿಲ್ಲಾ ಮೇಲ್ವಿಚಾರಕಿ ಸವಿತಾ, ಸದಸ್ಯರಾದ ಪ್ರತಿಮಾ, ಭಾರ್ಗವಿ, ವಾಣಿ, ಸಂಧ್ಯಾ, ಅರುಣ್‌ಕುಮಾರ್, ಕಾಲೇಜಿನ ಶಿಕ್ಷಕ ವೃಂದ ಹಾಜರಿದ್ದರು.



ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿದ ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಎಂಎಂಕೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥ ಮಹಿಳಾ ಮಹಾವಿದ್ಯಾಲಯದ ವಿದ್ಯಾರ್ಥಿಗಳನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮಧ್ಯ ಪ್ರಾಚ್ಯದಲ್ಲಿ ಹೆಚ್ಚಾದ ಉದ್ವಿಗ್ನತೆ

ಇಸ್ರೇಲ್ ಮೇಲೆ ಇರಾನ್ ಕ್ಷಿಪಣಿ ದಾಳಿ: ಅಮೆರಿಕ ಎಚ್ಚರಿಕೆ

ವಾಷಿಂಗ್ಟನ್: ಮಧ್ಯ ಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚಾಗುತ್ತಿರುವಂತೆಯೇ ಇಸ್ರೇಲ್ ವಿರುದ್ಧ ಇರಾನ್ ಖಂಡಾಂತರ ಕ್ಷಿಪಣಿ ದಾಳಿ ಆರಂಭಿಸಿದೆ. ಈ ಮಧ್ಯೆ ಅಮೆರಿಕಾ ಇಸ್ರೇಲ್ ರಕ್ಷಣೆಗೆ ನಿಂತಿದೆ.

ಕಳೆದ ವಾರ ಇಸ್ರೇಲಿ ವೈಮಾನಿಕ ದಾಳಿಯಲ್ಲಿ ಹಸನ್ ನಸ್ರಲ್ಲಾ ಹತ್ಯೆಯಾಗಿದ್ದ. ಇರಾನ್ ಬೆಂಬಲಿತ ಹಿಜ್ಬುಲ್ಲಾ ಸಂಘಟನೆಯನ್ನು ಗುರಿಯಾಗಿಸಲು ಲೆಬನಾನ್‌ನಲ್ಲಿ ನೆಲದ ದಾಳಿ ಆರಂಭಿಸಿರುವುದಾಗಿ ಇಸ್ರೇಲ್ ಹೇಳಿದ್ದ ಬೆನ್ನಲ್ಲೇ ಇರಾನ್ ಖಂಡಾಂತರ ಕ್ಷಿಪಣಿ ದಾಳಿ ಆರಂಭಿಸಿದೆ.

ಈ ದಾಳಿಯ ವಿರುದ್ಧ ಇಸ್ರೇಲ್ ಅನ್ನು ರಕ್ಷಿಸಲು ನಾವು ರಕ್ಷಣಾತ್ಮಕ ಸಿದ್ಧತೆಗಳನ್ನು ಸಕ್ರಿಯವಾಗಿ ಬೆಂಬಲಿಸುತ್ತಿದ್ದೇವೆ ಎಂದು ಶ್ವೇತಭವನದ ಹಿರಿಯ ಅಧಿಕಾರಿಯೊಬ್ಬರು AFP ಗೆ ತಿಳಿಸಿದ್ದಾರೆ.

ಇರಾನಿ ಕ್ಷಿಪಣಿ ದಾಳಿಯಿಂದ ವಿರುದ್ಧ ಇಸ್ರೇಲ್ ರಕ್ಷಿಸಲು ಅಮೆರಿಕ ಮತ್ತಿತರ ಪಾಶ್ಚಿಮಾತ್ಯ ಮಿತ್ರರಾಷ್ಟ್ರಗಳು ಮುಂದಾಗಿವೆ. ಡಮಾಸ್ಕಸ್‌ನಲ್ಲಿರುವ ಇರಾನಿನ ರಾಯಭಾರ ಕಚೇರಿ ಮೇಲೆ ಇಸ್ರೇಲಿ ದಾಳಿಗೆ ಪ್ರತೀಕಾರವಾಗಿ ಇರಾನ್ ಖಂಡಾಂತರ ಕ್ಷಿಪಣಿ ದಾಳಿ ನಡೆಸಿದೆ.

ಇಸ್ರೇಲ್ ಅನ್ನು ಎದುರಿಸಲು ಸೈನಿಕರನ್ನು ನಿಯೋಜಿಸುವುದಿಲ್ಲ ಎಂದು ಇರಾನ್ ವಿದೇಶಾಂಗ ಸಚಿವಾಲಯ ಸೋಮವಾರ ಹೇಳಿದ್ದರೂ, ನಸ್ರಲ್ಲಾ ಹತ್ಯೆಯು ಇಸ್ರೇಲ್ ವಿನಾಶ ಉಂಟು ಮಾಡಲಿದೆ ಎಂದು ಇರಾನ್ ಹೇಳಿದೆ. ಈ ಮಧ್ಯೆ ಮಧ್ಯಪ್ರಾಚ್ಯ ಇಸ್ರೇಲ್ ಇರಾನ್ ಕ್ಷಿಪಣಿ ದಾಳಿಯ ಹಿನ್ನೆಲೆಯಲ್ಲಿ ಇಸ್ರೇಲ್‌ನಲ್ಲಿ ಸೈರನ್ ಸದ್ದು ವ್ಯಾಪಕವಾಗಿ ಕೇಳಿ ಬರುತ್ತಿದ್ದು, ಜನರನ್ನು ಬಂಕರ್‌ಗಳಿಗೆ ಸ್ಥಳಾಂತರಿಸುವ ಕಾರ್ಯ ಭರದಿಂದ ನಡೆದಿದೆ. ಈ ಮಧ್ಯೆ ಇಬ್ಬರು ಭಯೋತ್ಪಾದಕರು ಇಸ್ರೇಲ್‌ನ ಜಾಫಾ ನಗರದ ರೈಲ್ವೆ ನಿಲ್ದಾಣದಲ್ಲಿ ಗುಂಡಿನ ದಾಳಿ ನಡೆಸಿದ್ದು, ನಾಲ್ವರು ಸತ್ತು ಹಲವು ಗಾಯಗೊಂಡಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

02.10.2024 ಬುಧವಾರ, ಮಳೆ ನಕ್ಷತ್ರ: ಹಸ್ತ, 27.09.2024 ರಿಂದ 09.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ: ಉತ್ತರಾ, ರಾಹುಕಾಲ : ಮಧ್ಯಾಹ್ನ 12 ರಿಂದ 1.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9 ರಿಂದ ಶರದ್ ವಿರೇಚನ-ಪಂಚಕರ್ಮ ಚಿಕಿತ್ಸಾ ಶಿಬಿರ, ಕಾಮಾಲೆ ಮತ್ತು ಯಕೃತ್ತಿನ ಸಮಸ್ಯೆಗೆ ಚಿಕಿತ್ಸಾ ಶಿಬಿರ, ಬೆಳಗ್ಗೆ 6.30 ರಿಂದ ದೇಹ-ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** 155ನೇ ಮಹಾತ್ಮ ಗಾಂಧಿ ಜಯಂತಿ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಪುಷ್ಪಾರ್ಚನೆ : ಕರಾಮುವಿವಿ ಕುಲಸಚಿವ ಪ್ರೊ. ಕೆ.ಬಿ. ಪ್ರವೀಣ, ಡೀನ್ ಪ್ರೊ. ಎನ್. ಲಕ್ಷ್ಮೀ, ಕುಲಸಚಿವ ಡಾ.ಹೆಚ್. ವಿಶ್ವನಾಥ್, ಹಣಕಾಸು ಅಧಿಕಾರಿ ಶ್ರೀಮತಿ ಹೆಚ್.ವಿ. ಶ್ವೇತ, ಪ್ರೊ. ಎಂ. ರಾಮನಾಥಂ ನಾಯುಡು, ಪ್ರಾಸ್ತಾವಿಕ ನುಡಿ : ಮಹಾತ್ಮ ಗಾಂಧಿ ಅಧ್ಯಯನ ಪೀಠ ನಿರ್ದೇಶಕ ಡಾ.ಆರ್.ಹೆಚ್. ಪವಿತ್ರ, ಸ್ಥಳ: ಗಾಂಧಿ ವನ, ಕರಾಮುವಿವಿ, ಬೆಳಗ್ಗೆ 8ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ:** ಮಹಾತ್ಮ ಗಾಂಧಿ ಜಯಂತಿ ಪ್ರಾರ್ಥನಾ ಸಭೆ, ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಉಪಸ್ಥಿತರು: ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್, ಶಾಸಕರಾದ ಅನಿಲ್‌ಕುಮಾರ್, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕರಾದ ತನ್ವೀರ್‌ಸೇಠ್, ಜಿ.ಟಿ. ದೇವೇಗೌಡ; ಹೆಚ್. ವಿಶ್ವನಾಥ್, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಡಿ. ರವಿಶಂಕರ್, ಜಿ.ಡಿ. ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್. ಶ್ರೀವತ್ಸ, ಡಾ. ಎಸ್. ಯತೀಂದ್ರ, ಕೆ. ವಿವೇಕಾನಂದ, ಸ್ಥಳ:ಪುರಭವನ, ಬೆಳಗ್ಗೆ 8.30ಕ್ಕೆ.

■ **ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ವಿದ್ಯಾಲಯ, ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕ :** ರಾಷ್ಟ್ರೀಯ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಸ್ವಯಂಪ್ರೇರಿತ ರಕ್ತದಾನ ಶಿಬಿರ ಹಾಗೂ ರಕ್ತದಾನಿಗಳಿಗೆ ಸನ್ಮಾನ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಕಾಲೇಜು ಪ್ರಿನ್ಸಿಪಾಲ್ ಶ್ರೀಮತಿ ಭಾರತಿ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕದ ಅಧಿಕಾರಿ ಡಾ. ಬಿ.ಎನ್. ಜಯಂತ್, ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ಮ್ಯಾನೇಜಿಂಗ್ ಡೈರೆಕ್ಟರ್ ಗಿರೀಶ್, ಸ್ಥಳ: ವಿದ್ಯಾಲಯ ಆವರಣ, ಬೆಳಗ್ಗೆ 9ಕ್ಕೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಮಹಾತ್ಮ ಗಾಂಧಿ ಜಯಂತಿ ಆಚರಣೆ, ಬೆಳಗ್ಗೆ 9.30ಕ್ಕೆ ರಾಮಸ್ವಾಮಿ ವೃತ್ತದಿಂದ ಶಾಸಕ ತನ್ವೀರ್ ಸೇಠ್‌ರಿಂದ ಚಾಲನೆ, ಬೆಳಗ್ಗೆ 11ಕ್ಕೆ ಕಾಂಗ್ರೆಸ್ ಭವನದಲ್ಲಿ ಕಾರ್ಯಕ್ರಮ ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮುಖ್ಯ ಭಾಷಣ : ಚಿಂತಕ ಪ್ರೊ. ಜಯಪ್ರಕಾಶ್‌ಗೌಡ, ಅಧ್ಯಕ್ಷತೆ : ಸಮಿತಿ ಅಧ್ಯಕ್ಷ ಆರ್. ಮೂರ್ತಿ, ಉಪಸ್ಥಿತರು : ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಸ್ಥಳ: ಮೈಸೂರು ನಗರ ಕಾಂಗ್ರೆಸ್ ಭವನ.

■ **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು :** 155ನೇ ಮಹಾತ್ಮ ಗಾಂಧಿ ಜಯಂತಿ ಪ್ರಯುಕ್ತ ವಿಶ್ವ ಅಹಿಂಸಾ ದಿನಾಚರಣೆ, ಸರ್ವಧರ್ಮ ಪ್ರಾರ್ಥನೆ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು : ಹಿರಿಯ ಗಾಂಧಿ ಮಾರ್ಗಿ ಡಾ. ಕೆ.ಟಿ. ವೀರಪ್ಪ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಗಾಂಧಿ ಅಧ್ಯಯನ ಕೇಂದ್ರ, ಗಾಂಧಿ ಭವನ, ರಾಷ್ಟ್ರೀಯ ಸೇವಾ ಯೋಜನೆ ಘಟಕ, ಮಹಾರಾಜ ಕಾಲೇಜು :** ಮಹಾತ್ಮ ಗಾಂಧಿ ಅವರ 156ನೇ ಜಯಂತಿ ಅಂಗವಾಗಿ ವಿಶ್ವ ಅಹಿಂಸಾ ದಿನಾಚರಣೆ ಮತ್ತು ಗಾಂಧೀಜಿ ಅವರ ಜಾತ್ಯಾತೀತ ವ್ಯಕ್ತಿತ್ವ ವಿಶೇಷ ಉಪನ್ಯಾಸ, ಉದ್ಘಾಟನೆ : ಗಾಂಧಿ ಮಾರ್ಗಿ ಶ್ರೀಮತಿ ವೇದಾಂಬ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ವಿಶೇಷ ಉಪನ್ಯಾಸ : ಡಾ. ಬಿ. ಸುಜಯ್ ಕುಮಾರ್, ವಿಶೇಷ ಆಹ್ವಾನಿತರು: ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಉಪಸ್ಥಿತರು : ಕಾಲೇಜು ಪ್ರಾಂಶುಪಾಲ ಪ್ರೊ. ಹೆಚ್.ಸಿ. ದೇವರಾಜೇಗೌಡ, ಸ್ಥಳ: ಗಾಂಧಿ ಭವನ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ, ನವ ವಿಶ್ವಮಾನವ ಟ್ರಸ್ಟ್ :** ಗಾಂಧಿ ಪ್ರತಿಮೆಗೆ ಮಾಲಾರ್ಪಣೆ, ಮುಖ್ಯ ಅತಿಥಿಗಳು: ಹಣಕಾಸು ಅಧಿಕಾರಿ ರೇಖಾ, ಸಹಾಯಕ ಪೊಲೀಸ್ ಆಯುಕ್ತ ಹೆಚ್.ಬಿ.ರಮೇಶ್‌ಕುಮಾರ್, ಮೈ.ವಿ.ರವಿಶಂಕರ್, ಬಿ.ಎಸ್.ರವಿಶಂಕರ್, ಪ್ರೊ.ಎಸ್.ಶಿವರಾಜಪ್ಪ, ಡಿ.ಎನ್.ಕೃಷ್ಣಮೂರ್ತಿ, ಸ್ಥಳ: ಗಾಂಧಿ ಪ್ರತಿಮೆ ನ್ಯಾಯಾಲಯದ ಮುಂಭಾಗ, ಬೆಳಗ್ಗೆ 11ಕ್ಕೆ

■ **ಜನನಿ ಸೇವಾ ಟ್ರಸ್ಟ್ :** ರಾಷ್ಟ್ರಪಿತ ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ ಪ್ರವಾಸಿಗರಿಗೆ ಮೈಸೂರು ಪಾಕ್, ವೀಳ್ಯದೆಲೆ, ರಸಬಾಳೆ, ಮಹಿಳೆಯರಿಗೆ ಬಳೆ ತೊಡಿಸಿ, ಸುಗಂಧ ದ್ರವ್ಯ ಸಿಂಪಡಿಸಿ, ಆರತಿ ಎತ್ತಿ ದಸರಾ ಮಹೋತ್ಸವಕ್ಕೆ ಆಹ್ವಾನಿಸುವ ಕಾರ್ಯಕ್ರಮ, ಚಾಲನೆ: ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ, ಉಪಸ್ಥಿತರು: ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ವಿಶ್ರಾಂತ ಕುಲಪತಿ ಡಾ.ಅಂಬಳಿಕೆ ಹಿರಿಯಣ್ಣ, ಸುಗಮ ಸಂಗೀತ ಗಾಯಕಿ ಶ್ರೀಮತಿ ಹೆಚ್.ಆರ್. ಲೀಲಾವತಿ, ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಅರಮನೆ ಆಡಳಿತ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಮಣ್ಯ, ಲೇಖಕಿ ಉಷಾ ನರಸಿಂಹನ್, ಪಾರಂಪರಿಕ ತಜ್ಞ ಎನ್.ಎಸ್. ರಂಗರಾಜ್, ಎಸ್.ನಾಗರತ್ನ, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷ ಎಂ.ಕೆ.ಅಶೋಕ, ಸ್ಥಳ: ಅರಮನೆ ಆಡಳಿತ ಮಂಡಳಿ ಕಚೇರಿ ಮುಂಭಾಗ, ಮೈಸೂರು ಅರಮನೆ, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ವಾದ್ಯ ವೈಭವ-ಸಂಗೀತ ವಾದ್ಯಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಚೈತ್ರಿಕಾ. ಎಸ್, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ-ಶಾಂತಲಾ ವಟ್ಟಂ, ವ್ಯಾಖ್ಯಾನ-ಪ್ರೊ.ಮಾ.ವರದರಾಜು, 6.50 ರೈತರಿಗೆ ಸಲಹೆ, 7.15 ವಾತ್ಸಲ್ಯವಾಣಿ-ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಮಕ್ಕಳ ರಕ್ಷಣೆ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, 8.30 ಮೈಸೂರು ದಸರಾ ಮಹೋತ್ಸವದ ನಿಯೋಜಿತ ಉದ್ಘಾಟಕರಾದ ಹಿರಿಯ ಸಾಹಿತಿ ನಾಡೋಜ ಡಾ. ಹಂಪಾ ನಾಗರಾಜಯ್ಯ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಟಿ.ವಿ. ವಿದ್ಯಾಶಂಕರ, 8.45 ಚಿತ್ರಗೀತೆಗಳು, 9.00 ನಂದನ-ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, ವಿಷಯ: ಪ್ರಸವ ಪೂರ್ವ ಆರೈಕೆ ಬಗ್ಗೆ ಇರುವ ತಪ್ಪು ಕಲ್ಪನೆಗಳು ಭಾಗವಹಿಸುವ ತಜ್ಞರು : ಗೈನಕಾಲಜಿಸ್ಟ್ ಮತ್ತು ಫರ್ಟಿಲಿಟಿ ಸ್ಪೆಷಲಿಸ್ಟ್ ಡಾ. ಮಾಧುರಿ. ಎನ್., ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ದಸರಾ ಪ್ರಯುಕ್ತ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೃತಿಗಳನ್ನೊಳಗೊಂಡ ವಿಶೇಷ ಸಂಗೀತ ಸರಣಿ-ನಮೋ ಜಗತ್ತಾರಿಣಿ, ನಿರ್ಮಾಣ-ಮೈಸೂರು. ಎಸ್. ರಾಜಲಕ್ಷ್ಮೀ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.30 ಆಯುಷ್ ವಾಣಿ-ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.35 ದೇವರನಾಮ-ರಂಗನಾಥ್. ಎಂ.ಜಿ., 12.45 ಜನಪದ ಸಂಗೀತ, 1.20 ಭಾವಗೀತೆಗಳು-ಸೌಮ್ಯ. ಬಿ.ಪಿ., 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ-ದಸರಾ ಬಂತು ದಸರಾ-ಕೇಳುಗರ ಜೊತೆ ಸಂವಾದ, ಪ್ರಸ್ತುತಿ : ಸಹನ ಮತ್ತು ಕೀರ್ತನ, 4.45 ಹಿಂದಿ ಪಾಠ-ಡಾ. ಮಾಧವಿ ಭಂಡಾರಿ, 6.50 ಕೃಷಿರಂಗ : ಕೃಷಿ ದೀವಿಗೆ, ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕೃಷಿಯಲ್ಲಿ ಸೂಕ್ಷ್ಮ ನೀರಾವರಿ ತಾಂತ್ರಿಕತೆಗಳು. ಈ ಕುರಿತು ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಪಿ.ತಿಮ್ಮೇಗೌಡ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಗಾಂಧೀಜಿ ಅವರ ಖಾದಿ ಚಳುವಳಿಯ ಪ್ರಸ್ತುತತೆ. ಈ ಬಗ್ಗೆ ಮಾತನಾಡುತ್ತಾರೆ: ಬಾಳೆಲೆ. ಜೆ.ಸೋಮಣ್ಣ, 8.00 ಕ್ಷಿತಿಜ ಲಿಟರರಿ ಗುರು- ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಮೈಸೂರು ದಸರಾ ಮಹೋತ್ಸವದ ಪೂರ್ವ ಸಿದ್ಧತೆ ಕುರಿತು ಕಾರ್ಯಕ್ರಮ, 10.30 ಸವಿನೆನಪು

ದಕ್ಷಿಣ ವಲಯದ 6ನೇ ವಲಯ ಮಟ್ಟದ ಪೊಲೀಸ್ ಕರ್ತವ್ಯಕೂಟ ಸಮಾರೋಪ

ಕ್ರಿಮಿನಲ್ ಪ್ರಕರಣಗಳ ತನಿಖೆಯಲ್ಲಿ ಹೆಚ್ಚು ಹೆಚ್ಚು ವೈಜ್ಞಾನಿಕ ವಿಧಾನ ಅಳವಡಿಕೆ ಅನಿವಾರ್ಯ

ಪೊಲೀಸ್ ಅಧಿಕಾರಿ, ಸಿಬ್ಬಂದಿ ವರ್ಗಕ್ಕೆ ದಕ್ಷಿಣ ವಲಯ ಡಿಐಜಿಪಿ ಡಾ.ಬೋರಲಿಂಗಯ್ಯ ಸಲಹೆ




ಮೈಸೂರಿನ ಕೆಪಿಎ ಹೊಸ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 6ನೇ ವಲಯ ಮಟ್ಟದ ಪೊಲೀಸ್ ಕರ್ತವ್ಯಕೂಟದ ಸಮಾರೋಪ ಸಮಾರಂಭದಲ್ಲಿ ಮಂಡ್ಯ ಜಿಲ್ಲಾ ಪೊಲೀಸ್ ತಂಡ ಸಮಗ್ರ ಪ್ರಶಸ್ತಿ ಸ್ವೀಕರಿಸಿತು. ಮತ್ತೊಂದು ಚಿತ್ರದಲ್ಲಿ ಕರ್ತವ್ಯಕೂಟದ ಅತ್ಯುತ್ತಮ ಶ್ವಾನವಾಗಿ ಹೊರಹೊಮ್ಮಿದ ಕಾಪರ್‌ನೊಂದಿಗೆ ಡಾಗ್ ಹ್ಯಾಂಡ್ಲರ್ ಬಿ.ಪಿ.ಮನಮೋಹನ್ ಬಹುಮಾನ ಸ್ವೀಕರಿಸುತ್ತಿರುವುದನ್ನು ಕಾಣಬಹುದು.

ಮೈಸೂರು,ಅ.1(ಪಿಎಂ)– ಕ್ರಿಮಿನಲ್ ಪ್ರಕರಣದ ತನಿಖೆಯಲ್ಲಿ ನಾವು ಹೆಚ್ಚು ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುವ ಮೂಲಕ ಸಂತ್ರಸ್ತರಿಗೆ ನ್ಯಾಯ ಕೊಡಿಸಲು ಸಾಧ್ಯವಾಗಲಿದೆ. ಹಾಗಾಗಿಯೇ ಹೊಸ ಕ್ರಿಮಿನಲ್ ಕಾನೂನುಗಳಲ್ಲಿ ವೈಜ್ಞಾನಿಕ ತನಿಖಾ ವಿಧಾನಕ್ಕೆ ವಿಶೇಷ ಒತ್ತು ನೀಡಲಾಗಿದೆ ಎಂದು ದಕ್ಷಿಣ ವಲಯ ಪೊಲೀಸ್ ಉಪ ಮಹಾನಿರೀಕ್ಷಕ ಡಾ.ಎಂ.ಬಿ.ಬೋರಲಿಂಗಯ್ಯ ಹೇಳಿದರು.

ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯ (ಕೆಪಿಎ) ಹೊಸ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪೊಲೀಸ್ ಇಲಾಖೆಯ ದಕ್ಷಿಣ ವಲಯದ 6ನೇ ವಲಯ ಮಟ್ಟದ ಪೊಲೀಸ್ ಕರ್ತವ್ಯಕೂಟ–2024ರ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯಾವುದೇ ಪ್ರಕರಣದ ತನಿಖೆಯಲ್ಲಿ ಮೌಖಿಕ ಪುರಾವೆಗಳಿಗಿಂತ ವೈಜ್ಞಾನಿಕ ಸಾಕ್ಷ್ಯಗಳು ಮುಖ್ಯವಾಗಿದ್ದು, ಅವುಗಳ ಮೇಲೆ ಹೆಚ್ಚಿನ ಆಸಕ್ತಿ ಮತ್ತು ಅಧ್ಯಯನವನ್ನು ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿ ಕೈಗೊಳ್ಳಬೇಕು. ಕರ್ತವ್ಯದಲ್ಲಿ ದಕ್ಷತೆ ತರುವ ನಿಟ್ಟಿನಲ್ಲಿ ನಮ್ಮ ಇಲಾಖೆಯಲ್ಲಿ ಕ್ರೀಡೆ ಸೇರಿದಂತೆ ಕೆಲ ಚಟುವಟಿಕೆಗಳಿಗೆ ವಿಶೇಷ ಒತ್ತು ನೀಡಲಾಗುತ್ತದೆ. ಕ್ರೀಡೆ ಚಟುವಟಿಕೆಯಿಂದ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದಲ್ಲಿ ದೈಹಿಕ ಸದೃಢತೆ ವೃದ್ಧಿಸಲಿದೆ. ಇದರಿಂದ ಇಲಾಖೆಯ ಕಾರ್ಯವೈಖರಿಯಲ್ಲಿ ಸಕಾರಾತ್ಮಕ ಪರಿಣಾಮ ಉಂಟಾಗಲಿದೆ ಎಂದರು.

ಅದೇ ರೀತಿ ಕ್ರಿಮಿನಲ್ ಪ್ರಕರಣಗಳನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವಲ್ಲಿ ನಾವು ಮಹತ್ವದ ಜವಾಬ್ದಾರಿ ನಿಭಾಯಿಸಬೇಕಿದೆ. ಕ್ರಿಮಿನಲ್ ಪ್ರಕರಣ ದಾಖಲಾದಾಗ ತನಿಖೆ ಮಾಡಿ, ಸಾಕ್ಷ್ಯಗಳನ್ನು ಸಂಗ್ರಹಿಸುವುದನ್ನು ಸಮರ್ಥವಾಗಿ ಕೈಗೊಳ್ಳಬೇಕು. ಆ ಬಳಿಕ ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸುವುದು ಪ್ರಮುಖ ಅಂಶ. ನಂತರ ಸರ್ಕಾರಿ ಅಭಿಯೋಜಕರು ನಮ್ಮ ಪರವಾಗಿ ವಾದ ಮಂಡಿಸಿ ನ್ಯಾಯಾಧೀಶರಿಗೆ ಮನವರಿಕೆ ಮಾಡಲಿದ್ದಾರೆ. ಈ ಎಲ್ಲಾ ಹಂತದಲ್ಲಿ ಸಮರ್ಥವಾಗಿ ಕರ್ತವ್ಯ ನಿರ್ವಹಿಸಿದರೆ, ಆರೋಪಿಗಳ ಅಪರಾಧ ಸಾಬೀತಾಗುವ ಮೂಲಕ ಅವರಿಗೆ ಶಿಕ್ಷೆಯಾಗಿ ಸಂತ್ರಸ್ತರಿಗೆ ನ್ಯಾಯ ದೊರೆಯಲಿದೆ ಎಂದು ಹೇಳಿದರು.

ಯಾವುದೇ ತನಿಖೆಯಾಗಲಿ ಹೆಚ್ಚಿನ ಆಸಕ್ತಿಯಿಂದ ಕಾರ್ಯ ನಿರ್ವಹಿಸಬೇಕು. ಅದಕ್ಕಾಗಿ ತನಿಖೆಯಲ್ಲಿ ಡಾಗ್ ಫೋರ್ಸ್, ಘಟನೆ ನಡೆದ ಸ್ಥಳದ ಪರಿಶೀಲನೆ, ಫೋಟೋಗ್ರಫಿ, ಡಿಎನ್‌ಎ, ಫಿಂಗರ್ ಪ್ರಿಂಟ್ ಎಲ್ಲಾ ವರದಿಗಳನ್ನು ವೈಜ್ಞಾನಿಕ ಪುರಾವೆಗಳಾಗಿ ತೆಗೆದುಕೊಳ್ಳಬೇಕು. ಇವುಗಳಲ್ಲಿ ತನಿಖಾ ಸಿಬ್ಬಂದಿ ಪರಿಣತಿ ಸಾಧಿಸಬೇಕು. ಈ ನಿಟ್ಟಿನಲ್ಲಿ ಕರ್ತವ್ಯಕೂಟ ಸಹಕಾರಿಯಾಗಲಿದೆ ಎಂದರು.

ಇನ್ನಷ್ಟು ಬಲಿಷ್ಠಗೊಳ್ಳಬೇಕು: ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ಶಿಕ್ಷೆಯಾಗುವುದು ಕನಿಷ್ಠ ಪ್ರಮಾಣದಲ್ಲಿದ್ದು, ವಿಶೇಷವಾಗಿ ದೌರ್ಜನ್ಯ ಪ್ರಕರಣದಲ್ಲಿ ನ್ಯಾಯ ಲಭಿಸುವುದು ಶೇ.2ರಿಂದ 3ರಷ್ಟು ಮಾತ್ರವಿದೆ. ಹಾಗಾಗಿ ನಾವು ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ಸಂತ್ರಸ್ತರಿಗೆ ನ್ಯಾಯ ದೊರಕಿಸಿ ಕೊಡುವ ನಿಟ್ಟಿನಲ್ಲಿ ನಾವು ಮತ್ತಷ್ಟು ಬಲಿಷ್ಠವಾಗಬೇಕು ಎಂದು ಡಾ.ಬೋರಲಿಂಗಯ್ಯ ಹೇಳಿದರು.

ಇದಕ್ಕೂ ಮುನ್ನ ಕರ್ತವ್ಯಕೂಟದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗೆ ಬಹುಮಾನಗಳನ್ನು ವಿತರಣೆ ಮಾಡಲಾಯಿತು. ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ, ಕರ್ನಾಟಕ ಪೊಲೀಸ್ ಅಕಾಡೆಮಿ ಉಪ ನಿರ್ದೇಶಕ ಎಸ್.ಎಲ್.ಚನ್ನಬಸವಣ್ಣ, ಬೆಂಗಳೂರು ಎಸ್‌ಸಿಆರ್‌ಬಿ ಸಿಸ್ಟಂ ಅನಾಲಿಸ್ಟ್ ಎನ್.ನಾಗೇಶ್, ಮೈಸೂರು ಆರ್‌ಎಫ್‌ಎಸ್‌ಎಲ್‌ನ ಉಪನಿರ್ದೇಶಕ ಚಂದ್ರಶೇಖರ್, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ನಾಗೇಶ್ ಮತ್ತಿತರರು ಹಾಜರಿದ್ದರು. ದಕ್ಷಿಣ ವಲಯ ಡಿವೈಎಸ್‌ಪಿ ಜಿ.ನಿಖಿತಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಿಎಆರ್ ಡಿವೈಎಸ್‌ಪಿ ಹೆಚ್.ವಿ.ವೀರಣ್ಣ ಸ್ವಾಗತಿಸಿದರೆ, ಸೆನ್ ಪೊಲೀಸ್ ಠಾಣೆ ಡಿಎಸ್‌ಪಿ ರಘು ವಂದಿಸಿದರು. ಎಸ್‌ಪಿ ಕಚೇರಿಯ ಪಿಎಸ್‌ಐ ಸುನಿಲ್ ಮಿರ್ಲೆ ಕಾರ್ಯಕ್ರಮ ನಿರೂಪಿಸಿದರು.

ಮಂಡ್ಯ ಜಿಲ್ಲಾ ಪೊಲೀಸ್‌ಗೆ ಸಮಗ್ರ ಪ್ರಶಸ್ತಿ ; ಅತ್ಯುತ್ತಮ ಶ್ವಾನವಾಗಿ ಹೊರಹೊಮ್ಮಿದ ಕೊಡಗು ಡಿಎಆರ್ ಘಟಕದ ಕಾಪರ್

ಮೈಸೂರು,ಅ.1(ಪಿಎಂ)– ಎರಡು ದಿನಗಳ ಕಾಲ (ಸೆ.30ರಿಂದ ಅ.1ರವರೆಗೆ) ಕೆಪಿಎನಲ್ಲಿ ನಡೆದ ಕರ್ತವ್ಯ ಕೂಟದಲ್ಲಿ 59 ಅಂಕಗಳು ಹಾಗೂ 17 ಪದಕಗಳನ್ನು ಪಡೆದ ಮಂಡ್ಯ ಜಿಲ್ಲಾ ಪೊಲೀಸ್ ಅತ್ಯುತ್ತಮ ತಂಡವಾಗಿ ಹೊರಹೊಮ್ಮುವ ಮೂಲಕ ಸಮಗ್ರ ಪ್ರಶಸ್ತಿಗೆ ಭಾಜನವಾಗಿ ಟ್ರೋಫಿಯನ್ನು ಸ್ವೀಕರಿಸಿತು. ಅಂತೆಯೇ ಕರ್ತವ್ಯಕೂಟದ ಅತ್ಯುತ್ತಮ ಶ್ವಾನವಾಗಿ ಕೊಡಗು ಡಿಎಆರ್ ಘಟಕದ ಕಾಪರ್ ಹೊರಹೊಮ್ಮಿತು. ಡಾಗ್ ಹ್ಯಾಂಡ್ಲರ್ ಬಿ.ಪಿ.ಮನಮೋಹನ್ ಅವರು ಕಾಪರ್ ಶ್ವಾನದೊಂದಿಗೆ ಬಂದು ಅತಿಥಿಗಳಿಂದ ಬಹುಮಾನ ಸ್ವೀಕರಿಸಿದರು. ಸೈಂಟಿಫಿಕ್ ಎಡ್ ಟು ಇನ್‌ವೆಸ್ಟಿಗೇಷನ್, ಕಂಪ್ಯೂಟರ್ ಅವೇರ್‌ನೆಸ್, ಪೊಲೀಸ್ ಫೋಟೋಗ್ರಫಿ ಟೆಸ್ಟ್, ಪೊಲೀಸ್ ವಿಡಿಯೋಗ್ರಫಿ ಟೆಸ್ಟ್, ಆಂಟಿ ಸಬೊಟೇಜ್ ಚೆಕ್ ಟೆಸ್ಟ್, ಡಾಗ್ಸ್ ಟೆಸ್ಟ್ ಎಂಬ ಪ್ರಮುಖ ವಿಭಾಗದ ಸ್ಪರ್ಧೆಗಳು ಸೇರಿದಂತೆ ಕರ್ತವ್ಯದಲ್ಲಿ ದಕ್ಷತೆ ತರುವುದಕ್ಕೆ ಪೂರಕವಾದ ವಿವಿಧ ಸ್ಪರ್ಧೆಗಳಲ್ಲಿ ಮೈಸೂರು, ಕೊಡಗು, ಮಂಡ್ಯ, ಹಾಸನ ಹಾಗೂ ಚಾಮರಾಜನಗರ ಜಿಲ್ಲೆಯ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಪಾಲ್ಗೊಂಡಿತ್ತು. ಕಳೆದ ಸಾಲಿನ ಕರ್ತವ್ಯಕೂಟದಲ್ಲೂ ಮಂಡ್ಯ ಜಿಲ್ಲಾ ಪೊಲೀಸ್ ಸಮಗ್ರ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತ್ತು.

ಶಾಸಕ ಹರೀಶ್‌ಗೌಡರೂ 50:50ರಡಿ ಪರಿಹಾರ ನೀಡದಂತೆ ಪತ್ರ ನೀಡಿದ್ದರು

ಪತ್ರಿಕಾಗೋಷ್ಠಿಯಲ್ಲಿ ಮುಡಾ ಅಧ್ಯಕ್ಷ ಮರೀಗೌಡರ ಹೇಳಿಕೆ


ಕೆ.ಮರೀಗೌಡ


ಕೆ.ಹರೀಶ್‌ಗೌಡ

ಮೈಸೂರು, ಅ.1– ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ಮಾರಗೌಡನಹಳ್ಳಿ ಸರ್ವೆ ನಂ.77, 57ರ 8 ಎಕರೆ ಹಾಗೂ ಕಸಬಾ ಹೋಬಳಿ ಸರ್ವೆ ನಂ.86ರ ಭೂಮಿಗೆ 50:50 ಅನುಪಾತದಡಿ ಯಾವುದೇ ಕಾರಣಕ್ಕೂ ಪರಿಹಾರವಾಗಿ ನಿವೇಶನ ಮಂಜೂರು ಮಾಡದಂತೆ ನನಗೆ ಪತ್ರ ನೀಡಿದ್ದರು ಎಂದು ಮುಡಾ ಅಧ್ಯಕ್ಷ ಕೆ.ಮರೀಗೌಡರು ತಿಳಿಸಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ, ಮುಡಾದಲ್ಲಿ 50:50ರ ಅನುಪಾತ ಹಾಗೂ ಪ್ರೋತ್ಸಾಹಕ ಯೋಜನೆಯಡಿ ಪ್ರಾಧಿಕಾರದ ಅನುಮೋದನೆ ಪಡೆಯದೆ ನಿವೇಶನ ಹಂಚಿಕೆ ಮಾಡಿದ್ದರ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ಪ್ರಾಧಿಕಾರದ ಸಭೆಯ ಅನುಮೋದನೆ ಪಡೆಯದೆಯೇ ಯಾವುದೇ ನಿವೇಶನ ಹಂಚಿಕೆ ಮಾಡಬಾರದು ಎಂದು ಟಿಪ್ಪಣಿ ಮುಖೇನ ಸೂಚನೆ ನೀಡುವುದರೊಂದಿಗೆ ಮುಡಾ ಅಧ್ಯಕ್ಷನಾಗಿ ಪ್ರಾಧಿಕಾರದ ಹಿತಾಸಕ್ತಿ ಕಾಪಾಡಿದ್ದೇನೆ. ಈ ನನ್ನ ಕಾರ್ಯದಲ್ಲಿ ಶಾಸಕ ಕೆ.ಹರೀಶ್‌ಗೌಡರೂ ಪತ್ರ ಬರೆದು ಸಹಕರಿಸಿದ್ದರು. ಅವರೂ ಮುಡಾ ಹಿತಾಸಕ್ತಿ ಕಾಪಾಡುವಲ್ಲಿ ನೆರವಾಗಿದ್ದಾರೆ ಎಂದರು.

ಮನೆ ಬೀಗ ಮುರಿದು ಲಕ್ಷಾಂತರ ಮೌಲ್ಯದ ಚಿನ್ನಾಭರಣ, ನಗದು ಕಳವು

ಮೈಸೂರು, ಅ.1(ಎಸ್‌ಬಿಡಿ)– ಮನೆಯೊಂದರ ಬೀಗ ಮುರಿದು ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಹಾಗೂ ನಗದು ದೋಚಿರುವ ಘಟನೆ ಮೈಸೂರಿನ ವಿಜಯನಗರದಲ್ಲಿ ನಡೆದಿದೆ.

ವಿಜಯನಗರ 4ನೇ ಹಂತ, 2ನೇ ಘಟ್ಟದ ರಾಜಮ್ಮ(60) ಅವರ ಮನೆಗೆ ನುಗ್ಗಿರುವ ಖದೀಮರು, ಸುಮಾರು 20.85 ಲಕ್ಷ ರೂ. ಮೌಲ್ಯದ 300 ಗ್ರಾಂ ಚಿನ್ನಾಭರಣ ಹಾಗೂ 13 ಲಕ್ಷ ರೂ. ನಗದನ್ನು ದೋಚಿದ್ದಾರೆ.

ರಾಜಮ್ಮನವರು ಪುತ್ರಿ, ಅಳಿಯ ಹಾಗೂ ಮೊಮ್ಮಗಳೊಂದಿಗೆ ಕಳೆದ 10 ತಿಂಗಳಿಂದ ಈ ಮನೆಯಲ್ಲಿ ವಾಸವಿದ್ದಾರೆ. ಸೆ.28ರಂದು ಮಧ್ಯಾಹ್ನ ಮನೆಗೆ ಬೀಗ ಹಾಕಿಕೊಂಡು ಎಲ್ಲರೂ ಪಿರಿಯಾಪಟ್ಟಣ ತಾಲೂಕು ಆಲನಹಳ್ಳಿಯಲ್ಲಿರುವ ರಾಜಮ್ಮ ಅವರ ತವರು ಮನೆಗೆ ಹೋಗಿದ್ದರು. ಸೆ.29ರಂದು ರಾತ್ರಿ ವಾಪಸ್ ಬಂದಾಗ ಮನೆಯ ಮುಂಬಾಗಿಲಿನ ಬೀಗದ ಬಳಿ ಯಾವುದೋ ಚೂಪಾದ ಆಯುಧದಿಂದ ಮೀಟಿರುವ ಗುರುತುಗಳು ಕಾಣಿಸಿದವು. ಗಾಬರಿಯಿಂದ ಬೀಗ ತೆಗೆದು ಒಳಹೋದಾಗ ಕೊಠಡಿಯಲ್ಲಿ ಬೀರುವಿನ ಬಾಗಿಲು ತೆಗೆದಿತ್ತು. ಅದರಲ್ಲಿದ್ದ ಬಟ್ಟೆಗಳೆಲ್ಲಾ ನೆಲದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಡ್ರಾಯರ್ ತೆಗೆದು ನೋಡಿದಾಗ ಅದರಲ್ಲಿದ್ದ ಚಿನ್ನಾಭರಣ ಹಾಗೂ ಹಣ ಕಳವುವಾಗಿತ್ತು. ಈ ಸಂಬಂಧ ರಾಜಮ್ಮ ಅವರು ನೀಡಿದ ದೂರಿನನ್ವಯ ವಿಜಯನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಖದೀಮರ ಪತ್ತೆಗೆ ಕ್ರಮ ವಹಿಸಿದ್ದಾರೆ.

ಕ್ರಿಪ್ಟೋ ಕರೆನ್ಸಿ ಹೂಡಿಕೆ ನೆಪದಲ್ಲಿ ಶಿಕ್ಷಕಿಗೆ 14.13 ಲಕ್ಷ ವಂಚನೆ

ಮೈಸೂರು, ಅ.1(ಎಸ್‌ಬಿಡಿ)– ಕ್ರಿಪ್ಟೋ ಕರೆನ್ಸಿ ಹೂಡಿಕೆ ನೆಪದಲ್ಲಿ ಶಿಕ್ಷಕಿಯೊಬ್ಬರಿಗೆ 14.13 ಲಕ್ಷ ರೂ. ವಂಚಿಸಲಾಗಿದೆ.

ಮೈಸೂರಿನ ಹೆಬ್ಬಾಳು ಬಡಾವಣೆಯಲ್ಲಿ ವಾಸವಿರುವ ಶಿಕ್ಷಕಿ, ಅಧಿಕ ಲಾಭದಾಸೆಯಿಂದ ಹಣ ಹೂಡಿಕೆ ಮಾಡಿ ಮೋಸ ಹೋಗಿದ್ದಾರೆ. ಟೆಲಿಗ್ರಾಂನಲ್ಲಿ ಬಂದ ಟಾಸ್ಕ್ ಪೂರೈಸಿದರೆ ಹಣ ಬರುವುದೆಂಬ ಸಂದೇಶವನ್ನು ನಂಬಿದ ಶಿಕ್ಷಕಿ, ಒಂದಷ್ಟು ದಿನ ಟಾಸ್ಕ್ ಮಾಡಿದ್ದಾರೆ. ಅದಕ್ಕೆ ಸ್ವಲ್ಪ ಹಣ ನೀಡಿ, ನಂಬಿಕೆ ಮೂಡಿಸಿದ ಸೈಬರ್ ವಂಚಕರು, ಕ್ರಿಪ್ಟೋ ಕರೆನ್ಸಿ(ಡಿಜಿಟಲ್ ಕರೆನ್ಸಿ)ಯಲ್ಲಿ ಹೂಡಿಕೆ ಮಾಡಿದರೆ ಕಡಿಮೆ ಅವಧಿಯಲ್ಲೇ ದುಪ್ಪಟ್ಟಾಗುತ್ತದೆ ಎಂದು ವಿವರಣೆ ನೀಡಿದ್ದಾರೆ. ಇದನ್ನು ನಂಬಿದ ಶಿಕ್ಷಕಿ ಎರಡು ಬ್ಯಾಂಕ್ ಖಾತೆಗಳಿಂದ ಒಟ್ಟು 14.13 ಲಕ್ಷ ರೂ. ಹಣ ಕಳುಹಿಸಿ, ವಂಚನೆಗೊಳಗಾಗಿದ್ದಾರೆ. ಈ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕ್ಕರೆ ಅದೇ ಸ್ವರ್ಗ

ಮಗ : ಅಮ್ಮಾ, ಎದುರುಗಡೆ ಮನೆ ಆಂಟಿ ಹೆಸರೇನು?
ಅಮ್ಮ : ಸಾನಿಯಾ ಕಣೋ!
ಮಗ : ಅಮ್ಮಾ, ಅಪ್ಪನಿಗೆ ಅದು ಕೂಡ ಗೊತ್ತಿಲ್ಲ. ಆ ಆಂಟಿಯನ್ನು ಡಾರ್ಲಿಂಗ್, ಚಿನ್ನು, ಬಂಗಾರ ಅಂತಾ ಕರೀತಾರೆ.

ಮೈಸೂರು ಮಿತ್ರ

ಬುಧವಾರ, 2 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಸಮಯ ಓಡುತ್ತಿದೆ. ನೀನು ನಡೆಯುತ್ತಿದ್ದಿಯಾ ಅನ್ನೋದನ್ನ ಅರ್ಥ ಮಾಡಿಕೊಂಡ ಕ್ಷಣ ನಿನ್ನಲ್ಲಿ ಸಾಧಿಸುವ ಛಲ ಬರುತ್ತೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಇತರರ ಕಣ್ಣಿನ ಕಸ ಕಾಣುವುದು, ತನ್ನ ಕಣ್ಣಿನ ಕಸ ಕಾಣುವುದಿಲ್ಲ.

ನಿಮ್ಮ ಪತ್ರಗಳು

ದಿಢೀರನೆ ಆಹಾರ ನಿಲ್ಲಿಸಬಹುದೇ?

ಮಾನ್ಯರೆ,

ಅರಮನೆಯ ಮುಂಭಾಗದಲ್ಲಿ ಪಾರಿವಾಳಗಳಿಗೆ ಆಹಾರ ಹಾಕುವುದನ್ನು ಯಾವುದೇ ಮುಂದಾಲೋಚನೆ ಮಾಡದೆ ನಿಷೇಧಿಸಿರುವುದು ಅವೈಜ್ಞಾನಿಕ ಎನಿಸುತ್ತಿದೆ. ದಶಕಗಳಿಂದ ಹಾಕುತ್ತಿದ್ದ ಆಹಾರವನ್ನು ತಕ್ಷಣವೇ ನಿಲ್ಲಿಸಿದರೆ ಅವುಗಳು ಎಲ್ಲಿ ತಾನೇ ಹೋಗುತ್ತವೆ? ಇದೇ ಆಹಾರವನ್ನು ಸೇವಿಸುತ್ತಾ ಅವುಗಳ ಸಂಖ್ಯೆ ಅಸ್ವಾಭಾವಿಕವಾಗಿ ಹೆಚ್ಚಾಗಿ ಹೋಗಿದೆ. ಈ ಕಾಳುಗಳನ್ನೇ ನಂಬಿ ಅವು ಬದುಕುತ್ತಿದ್ದು, ಈಗಿರುವ ಅಸಂಖ್ಯಾತ ಪಾರಿವಾಳಗಳಿಗೆ ಪ್ರಾಕೃತಿಕವಾಗಿ ಆಹಾರ ಸಿಗುವುದು ಸಾಧ್ಯವಿಲ್ಲ. ಬೆಳಗಾದರೆ ಆಹಾರ ಸಿಗುವ ಆಸೆಯಿಂದ ಬರುತ್ತಿರುವ ಪಾರಿವಾಳಗಳಿಗೆ ಏನೂ ಸಿಗದೆ ಇರುವುದು, ನಾವು ಕೊರೊನಾ ಸಂದರ್ಭದಲ್ಲಿ ಅನುಭವಿಸಿದ ಲಾಕ್‌ಡೌನ್‌ನಂತೆಯೇ ಸರಿ. ಇದರಿಂದ ಕ್ರಮೇಣ ಅವುಗಳಲ್ಲಿ ಬಹುಪಾಲು ಸಾಯಬಹುದು. ಅವುಗಳು ಕೇಳದಿದ್ದರೂ ಕಾಳುಗಳನ್ನು ಹಾಕಿದ್ದು ನಮ್ಮ ತಪ್ಪು. ಈಗ ಏಕಾಏಕಿ ನಿಲ್ಲಿಸುವುದೂ ನಮ್ಮ ಇನ್ನೊಂದು ತಪ್ಪಾಗುತ್ತದೆ. ಹೌದು, ಅವುಗಳ ಹಿಕ್ಕೆಯಿಂದ ಉಂಟಾಗುತ್ತಿರುವ ಸಮಸ್ಯೆ ನಿಜವಿರಬಹುದು. ಹಾಗಂತ ತಕ್ಷಣವೇ ಜಾರಿಗೆ ಬರುವಂತೆ ಹೀಗೆ ಆದೇಶಿಸಿದರೆ ಮನುಷ್ಯತ್ವ ಮರೆತಂತೆ ಆಗುತ್ತದೆ. ಆದ್ದರಿಂದ ಆಹಾರ ಹಾಕುವ ಪ್ರಮಾಣವನ್ನು ಕಾಲ ಕ್ರಮೇಣ ಕಡಿಮೆ ಮಾಡುತ್ತಾ ಕೊನೆಗೆ ಕೆಲವು ತಿಂಗಳುಗಳ ನಂತರ ನಿಲ್ಲಿಸಿದರೆ ಒಳಿತು. ಇದರಿಂದ ಪಾರಿವಾಳಗಳು ಆಹಾರಕ್ಕಾಗಿ ಬೇರೆ ಮೂಲವನ್ನು ಹುಡುಕಿಕೊಳ್ಳಲು ಸಮಯ ನೀಡಿದಂತಾಗುವುದು.

–ಎಂ.ಎಸ್. ಗುರುರಾಜ್, ಮೈಸೂರು.

ಕಳ್ಳತನ ಕಳ್ಳತನವೇ... ಅಲ್ಲವೇ...?

ಮಾನ್ಯರೆ,

ಒಂದು ಮನೆಯಲ್ಲಿ ಕಳ್ಳತನವಾಗುತ್ತದೆ. ಹಲವು ದಿನಗಳ ನಂತರ ಮನೆ ಮಾಲೀಕ ತನ್ನ ಮನೆಯ ಸಂಪತ್ತು ಕಳ್ಳತನವಾಗಿದೆ ಎಂದು ಪೊಲೀಸರಿಗೆ ದೂರು ನೀಡುತ್ತಾರೆ. ಹಲವು ವರ್ಷಗಳ ನಂತರ ಕಳ್ಳ ಸಿಕ್ಕಿ ಬೀಳುತ್ತಾನೆ. ಆಗ ಕಳ್ಳ ತಾನು ಮೊದಲಿಗೆ ಕಳ್ಳತನ ಮಾಡಿಲ್ಲ ಎಂದು ವಾದಿಸುತ್ತಾನೆ. ಪೊಲೀಸ್ ತನಿಖೆ ಚುರುಕಾಗುತ್ತದೆ. ಆಗ ಕಳ್ಳ ತಾನು ಕದ್ದಿದ್ದ ಎಲ್ಲಾ ವಸ್ತುಗಳನ್ನು ಹಿಂದಿರುಗಿಸುತ್ತೇನೆ. ನನ್ನ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳಬೇಡಿ. ನನ್ನನ್ನು ಕಳ್ಳ ಎನ್ನಬೇಡಿ ಬಿಟ್ಟು ಬಿಡಿ ಎನ್ನುತ್ತಾನೆ. ಹಾಗಾದರೆ ಆತ ಮಾಡಿದ ಕಳ್ಳತನ ಅಪರಾಧವಾಗುವುದಲ್ಲವೆ?

– ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ನಂದುವುದಿಲ್ಲ ಎಂದಿಗೂ ಅಮರ ಜ್ಯೋತಿ

ನ್ಯಾಯದ ಹೋರಾಟಕ್ಕೆ ಸ್ವಾತಂತ್ರ್ಯದ ಗಳಿಕೆಗೆ
ಮದ್ದುಗುಂಡುಗಳ ಬಳಸದೆ ರಕ್ತವ ಸುರಿಸದೆ
ಸತ್ಯ, ಅಹಿಂಸೆ, ಉಪವಾಸ, ಚಳುವಳಿ, ಸರಳತೆ,
ಇವುಗಳನ್ನೇ ಅಸ್ತ್ರವಾಗಿಸಿ ಗೆದ್ದ ಮಹಾಚೇತನನೆ...
ಶೇಂಗವ ತಿನ್ನುತಾ ಮೇಕೆಯ ಹಾಲನು ಕುಡಿಯುತಾ
ಅಂಗಿಯ ತ್ಯಜಿಸಿ ಕೋಲನು ಹಿಡಿದು ನಡೆದವನೆ,
ರಘುಪತಿ ರಾಘವ ರಾಜಾರಾಮ
ಪತಿತ ಪಾವನ ಸೀತಾ ರಾಮ ಎಂದು ಭಜಿಸುತಾ..
ರಾಷ್ಟ್ರದ ಜನತೆಗೆ ಸನ್ಮಾರ್ಗವ ತೋರುತಾ ನಿಂತವನೆ
ಸುಭಾಷರು ಸುಮ್ಮನೆ ಕರೆದರೆ 'ರಾಷ್ಟ್ರಪಿತ' ಎಂದು,
ಠಾಗೂರರ ಪ್ರೀತಿಯ ಕರೆಗೆ ನೀವಾದಿರಿ 'ಮಹಾತ್ಮ'ರು
ಯಾರಿಗೂ ಸಲ್ಲದ ಗಳಿಸಲು ಆಗದ 'ಪಿತಾಮಹ'ನೇ
ನಂದುವುದಿಲ್ಲ ಎಂದಿಗೂ ರಾಜ್‌ಘಾಟ್‌ನ 'ಅಮರಜ್ಯೋತಿ'ಯು
ಭರತಖಂಡ ಇರುವವರೆಗೂ ಗಾಂಧಿಯ ಜಯಂತಿ ನಿರಂತರ!.

–ಮಿರ್ಲೆ ಚಂದ್ರಶೇಖರ, ಮೈಸೂರು.

ರಸ್ತೆ ಒತ್ತುವರಿ ತೆರವು, ಠಾಣೆಯಲ್ಲಿ ಮಧ್ಯವರ್ತಿಗಳ ಹಾವಳಿ ತಪ್ಪಿಸಿದ ಪೊಲೀಸ್ ಇನ್‌ಸ್ಪೆಕ್ಟರ್

ಮಾನ್ಯರೆ,

ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನಲ್ಲಿ ಐತಿಹಾಸಿಕ ಸ್ಥಳಗಳಾದ ಸೋಮನಾಥಪುರ ಹಾಗೂ ತಲಕಾಡು ಇದ್ದು, ಇಲ್ಲಿಗೆ ಪ್ರತಿನಿತ್ಯ ದೇಶ, ವಿದೇಶಗಳಿಂದ ನೂರಾರು ಪ್ರವಾಸಿಗರು ಆಗಮಿಸುತ್ತಾರೆ. ಹಾಗೆಯೇ ತಾಲೂಕು ಕೇಂದ್ರದಲ್ಲಿ ಗುಂಜಾ ನರಸಿಂಹಸ್ವಾಮಿ ದೇವಸ್ಥಾನವಿದ್ದು, ಈ ದೇವಸ್ಥಾನದ ಮುಂಭಾಗದಲ್ಲಿ ಕಾವೇರಿ–ಕಪಿಲಾ ಹಾಗೂ ಸ್ಪಟಿಕ ಸರೋವರ ಸಂಗಮವಾಗುವುದರಿಂದ ಈ ಸ್ಥಳಕ್ಕೆ ತಿ.ನರಸೀಪುರ ಎಂಬ ಹೆಸರುಬಂದಿದೆ.


ಇಂತಹ ತಾಲೂಕು ಕೇಂದ್ರದಲ್ಲಿ ಪ್ರಮುಖವಾಗಿ ಸರ್ಕಾರಿ ಬಸ್ ನಿಲ್ದಾಣದಿಂದ ಭಗವಾನ್ ಟಾಕೀಸ್ ಸರ್ಕಲ್ ಹಾಗೂ ಇಲ್ಲಿಂದ ಖಾಸಗಿ ಬಸ್ ನಿಲ್ದಾಣಕ್ಕೆ ಬರುವ ಲಿಂಕ್ ರಸ್ತೆಗಳು ದಿನ ನಿತ್ಯದ ವ್ಯಾಪಾರದ ಕೇಂದ್ರಗಳಾಗಿದ್ದು, ಇಲ್ಲಿನ ರಸ್ತೆಗಳ ಎರಡು ಬದಿಗಳಲ್ಲಿ ಬೀದಿ ಬದಿ ವ್ಯಾಪಾರಿಗಳು ಹಲವು ವರ್ಷಗಳಿಂದಲೂ ಒತ್ತುವರಿ ಮಾಡಿಕೊಂಡಿದ್ದರಿಂದ ಪಾದಚಾರಿಗಳು ಹಾಗೂ ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿತ್ತು. ಪ್ರಜ್ಞಾವಂತ ನಾಗರಿಕರು ಹಾಗೂ ಸಂಘ ಸಂಸ್ಥೆಗಳವರು ಪುರಸಭೆ ಹಾಗೂ ಪೊಲೀಸರಿಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿರಲಿಲ್ಲ.

ಆದರೆ ಇತ್ತೀಚಿನ ಕೆಲವು ತಿಂಗಳುಗಳ ಹಿಂದೆ ತಿ.ನರಸೀಪುರಕ್ಕೆ ವರ್ಗಾವಣೆಗೊಂಡು ಅಧಿಕಾರ ವಹಿಸಿಕೊಂಡಿರುವ ದಕ್ಷ ಪೊಲೀಸ್ ಇನ್ಸ್‌ಪೆಕ್ಟರ್ ಧನಂಜಯ ಅವರ ಸಾಮಾಜಿಕ ಪ್ರಜ್ಞೆ ಹಾಗೂ ಅಧಿಕಾರದ ಬದ್ಧತೆಯನ್ನು ಅರ್ಥ ಮಾಡಿಕೊಂಡ ಪುರಸಭೆ ಅಧಿಕಾರಿಗಳು ರಸ್ತೆ ಒತ್ತುವರಿ ತೆರವುಗೊಳಿಸಲು ಕೋರಿದ್ದಾರೆ. ಕಾರ್ಯ ಪ್ರವೃತ್ತರಾದ ಇನ್ಸ್‌ಪೆಕ್ಟರ್ ತಮ್ಮ ಸಿಬ್ಬಂದಿ ಮೂಲಕ ಯಾರ ಮುಲಾಜಿಗೂ ಒಳಗಾಗದೆ ಯಾರ ಶಿಫಾರಸಿಗೂ ಜಗ್ಗದೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಎರಡೂ ಬದಿಗಳನ್ನು ಆವರಿಸಿಕೊಂಡಿದ್ದ ರಸ್ತೆ ಬದಿ ವ್ಯಾಪಾರಿಗಳನ್ನು ತೆರವುಗೊಳಿಸುವ ಮೂಲಕ ಇಡೀ ತಾಲೂಕಿನ ಜನತೆಯ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಹಾಗೆಯೇ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಮಧ್ಯವರ್ತಿಗಳ ಹಾವಳಿಯಿಂದ ಜನರು ರೋಸಿ ಹೋಗಿದ್ದರು. ಇವರು ಬಂದ ನಂತರ ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲದಂತೆ ಇವರ ಬಳಿ ಯಾರೇ ದೂರು ನೀಡಿದರೂ ಅಕ್ಷರಶಃ ಅದನ್ನು ಓದಿ ಪರಿಶೀಲಿಸಿ ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ ಪ್ರಕರಣಕ್ಕೆ ಸಂಬಂಧಿಸಿದ ಸಲಹೆ ಸೂಚನೆ ನೀಡುತ್ತಾರೆ. ಯಾರ ಶಿಫಾರಸಿಗೆ ಇವರು ಮನ್ನಣೆ ಕೊಡುವುದಿಲ್ಲ. ಇದರಿಂದ ಮಧ್ಯವರ್ತಿಗಳ ಹಾವಳಿಯಿಂದ ಸಾರ್ವಜನಿಕರು ನಿಟ್ಟುಸಿರು ಬಿಡುವಂತಾಗಿದೆ. ಇಂತಹ ಅಧಿಕಾರಿ ಮತ್ತೆಷ್ಟು ವರ್ಷ ಇಲ್ಲೇ ಇರಲಿ ಎಂಬುದು ಸಾರ್ವಜನಿಕರ ಅಭಿಮತ.

–ಎಂ. ಮಹೇಶ್ ನಿಲಸೋಗೆ, ಗಿರಿದರ್ಶಿನಿ ಬಡಾವಣೆ, ಮೈಸೂರು.

ವಿಶ್ವದ ವಿಸ್ಮಯ ಮಹಾತ್ಮ ಗಾಂಧಿ...!



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167



ಮನುಷ್ಯನ ನಡೆ, ನುಡಿ, ಆಚಾರ, ವಿಚಾರ, ಆದರ್ಶ ಚಾರಿತ್ರ್ಯಗಳೇ ಅವನ ಶ್ರೇಷ್ಠತೆಯ ಮಾನದಂಡ ಆಗುತ್ತದೆ. ಇಂಥಾ ಮಾನವೀಯ ಉನ್ನತ ಮೌಲ್ಯಗಳನ್ನು ತಮ್ಮ ಜೀವಮಾನದಲ್ಲಿ ಪಾಲಿಸಿದ ಗಾಂಧೀಜಿ ಮಹಾತ್ಮರಾದರು. ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಲು ಅಹಿಂಸೆಯ ಅಸ್ತ್ರ ಹಿಡಿದು, ಇಡೀ ರಾಷ್ಟ್ರವನ್ನೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಪ್ರೇರೇಪಿಸಿ ಯಶಸ್ವಿಯಾದ ಬಳಿಕವೂ ಎಲ್ಲವೂ ಭಗವಂತನ ಕೃಪೆ ಎಂದು ತಮ್ಮ ಸರಳ ಬದುಕನ್ನು ಮುಂದುವರೆಸಿದ್ದ ಈ ಮಹಾನ್ ಚೇತನ ಇಂದಿಗೂ ಯುವ ಪೀಳಿಗೆಗೆ ಮಾದರಿ. ರವೀಂದ್ರನಾಥ ಠಾಗೋರ್ ಅವರು 'ಮಹಾತ್ಮ' ಎಂದು ಸಂಬೋಧಿಸುವವರೆಗೂ ಮೋಹನದಾಸ ಕರಮಚಂದ್ ಗಾಂಧಿ 'ಬಾಪು' ಎಂದೇ ಕರೆಯಲ್ಪಡುತ್ತಿದ್ದರು. ಅಷ್ಟೇ ಅಲ್ಲ, ಮುಂದೆ 'ರಾಷ್ಟ್ರಪಿತ'ರೂ ಆದರು. ಹೀಗೆಂದು ಮಹಾತ್ಮ ಗಾಂಧಿಯನ್ನು ಮೊದಲ ಬಾರಿಗೆ ಕರೆದವರು ನೇತಾಜಿ ಸುಭಾಷ್ ಚಂದ್ರಬೋಸ್.

1945ರಲ್ಲಿ ರಂಗೂನ್‌ನಲ್ಲಿದ್ದ ತಮ್ಮ 'ಇಂಡಿಯನ್ ನ್ಯಾಷನಲ್ ಆರ್ಮಿ' ವತಿಯಿಂದ ಬ್ರಿಟಿಷ್ ಇಂಡಿಯಾದ ಮೇಲೆ ದಾಳಿ ಮಾಡಲು ಮುಂದಾಗಿದ್ದ ಬೋಸ್, ಬಾನುಲಿ ಸಂದೇಶವೊಂದನ್ನು ಗಾಂಧಿಯವರಿಗೆ ಪ್ರಸಾರ ಮಾಡಿದರು. 'ಫಾದರ್ ಆಫ್ ಅವರ್ ನೇಷನ್' ಎಂದು ಗಾಂಧಿಯನ್ನು ಮೊದಲ ಬಾರಿಗೆ ಕರೆದು "ನಮ್ಮ ಈ ಹೋರಾಟದಲ್ಲಿ ನಿಮ್ಮ ಆಶೀರ್ವಾದ ನಮ್ಮ ಮೇಲಿರಲಿ" ಎಂದು ಕೇಳಿಕೊಂಡಿದ್ದರು. ಭಾರತ ಸ್ವಾತಂತ್ರ್ಯ ಸಂಗ್ರಾಮದ ನೇತೃತ್ವ ವಹಿಸಿದ್ದ ಗಾಂಧೀಜಿ ಅವರು ಇಡೀ ದೇಶವನ್ನು ತನ್ನೊಟ್ಟಿಗೆ ಕರೆದು ಕೊಂಡು ಹೋದ ಅಪ್ರತಿಮ ನಾಯಕ. ಸಮಾಜದ ಎಲ್ಲಾ ವರ್ಗದ ಜನರೊಂದಿಗೆ ಅವರು ಮುಕ್ತವಾಗಿ ಬೆರೆಯುತ್ತಿದ್ದರು. ಎಲ್ಲರ ಬಗ್ಗೆ ಕಾಳಜಿ ವಹಿಸುತಿದ್ದರು. ಇಡೀ ದೇಶಕ್ಕೆ ಅಂತಹ ಮಾದರಿ ಇನ್ನೋರ್ವ ವ್ಯಕ್ತಿಯನ್ನು ಕಾಣುವುದು ಭಾರತದಲ್ಲಿಯೇ ಏಕೆ ಇಡೀ ವಿಶ್ವದಲ್ಲಿಯೇ ಅತೀ ಕಷ್ಟಕರ. ಇಲ್ಲವೆಂದರೂ ಸರಿಯೇ!

ರಾಮರಾಜ್ಯ ಪರಿಕಲ್ಪನೆಯ ಇಂತಹ ಆದರ್ಶ ಪುರುಷರೆನಿಸಿದ ಗಾಂಧೀಜಿ ವಿಚಾರಧಾರೆಯತ್ತ ಗಮನಹರಿಸಿದರೆ, ನಿಜಕ್ಕೂ ಅಚ್ಚರಿಯಾಗುತ್ತದೆ. ಧರ್ಮಶ್ರದ್ಧೆ ಗಾಂಧೀಜಿ ಅವರ ಪ್ರಮುಖ ಗುಣಗಳಲ್ಲೊಂದು. ಹಾಗೆಯೇ ಕ್ಷಮೆ. ನಿಮ್ಮ ಶತ್ರುಗಳನ್ನು ಕ್ಷಮಿಸಿ ಎಂದು ಹೇಳುವ ಮೂಲಕ ಕ್ಷಮಾದಾನದ ಉನ್ನತ ಗುಣ ಪ್ರತಿಯೊಬ್ಬರಿಗೂ ಸಂದೇಶವೇ ಅಯಿತು. ಗಾಂಧೀಜಿ ಅವರ ಮತ್ತೊಂದು ಗುಣವೆಂದರೆ ನಿರ್ಭೀತಿ. ಅವರ ಮಾನಸಿಕ ಧೈರ್ಯವೂ ಅಭೂತಪೂರ್ವವಾದುದು. ತಮ್ಮನ್ನು ದ್ವೇಷಿಸುವವರ ನಡುವೆಯೂ ಪ್ರೀತಿ, ವಿಶ್ವಾಸದ ಭರವಸೆ ಮೂಡಿಸಿದವರವರು. ಆ ಮೂಲಕ ದ್ವೇಷವನ್ನು ಸೋಲಿಸಿ ಪ್ರೀತಿಯನ್ನು ಪ್ರೀತಿಯಿಂದಲೇ ಗೆಲ್ಲಿಸಿದ್ದಾರೆ. ಮಾನವೀಯತೆಯನ್ನು ಮೆರೆಸಿದ್ದಾರೆ. ಮನುಷ್ಯತ್ವವನ್ನು ಬಿತ್ತಿದ್ದಾರೆ. ತಮ್ಮ ಸರಳತೆ, ಉನ್ನತ ವಿಚಾರಗಳನ್ನು ಬದುಕಿನಲ್ಲಿ ಅನುಸರಿಸಿದ ರೀತಿಯಿಂದ ಅವರು ಇಂದಿಗೂ, ಎಂದೆಂದಿಗೂ ಪ್ರಸ್ತುತ.

1869 ಅಕ್ಟೋಬರ್ 2ರಂದು ಗುಜರಾತ್‌ನ ಪೋರಬಂದರಿನಲ್ಲಿ ಕರಮಚಂದ್ ಗಾಂಧಿ ಹಾಗೂ ಪುತಲೀಬಾಯಿ ಗಾಂಧಿ ದಂಪತಿ ಪುತ್ರನಾಗಿ ಗಾಂಧೀಜಿ ಜನಿಸಿದರು. 'ಗಾಂಧಿ' ಮನೆತನದ ಹೆಸರು. ಅವರ ಪೂರ್ಣ ಹೆಸರು ಮೋಹನದಾಸ ಕರಮಚಂದ್ ಗಾಂಧಿ. ಪ್ರಾಥಮಿಕ ಶಿಕ್ಷಣವನ್ನು ಪೋರಬಂದರಿನಲ್ಲಿ, ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣವನ್ನು ರಾಜಕೋಟ್ ಮತ್ತು ಭಾವ ನಗರದಲ್ಲಿ ಮುಗಿಸಿದರು. ತಾನು ನೋಡಿದ ಸತ್ಯ ಹರಿಶ್ಚಂದ್ರ ನಾಟಕ ಹಾಗೂ ಓದಿದ ಶ್ರವಣನ ಮಾತಾ–ಪಿತೃಭಕ್ತಿ, ತಾಯಿಯಿಂದ ಕೇಳಿ ತಿಳಿದ ಪುರಾಣ ಪುಣ್ಯ ಕಥೆಗಳಿಂದ ತುಂಬಾ ಪ್ರಭಾವಿತರಾದರು. ಅಂದಿನ ಬಾಲ್ಯವಿವಾಹ ಪದ್ಧತಿಯ ಅನ್ವಯ ಗಾಂಧೀಜಿ ಅವರಿಗೆ ಹಿರಿಯರು ಮೆಚ್ಚಿ ಕಸ್ತೂರ ಬಾ ಅವರೊಡನೆ 1883ರಲ್ಲಿ ವಿವಾಹವಾಯಿತು. ಆಗ ಅವರಿಗೆ ವಯಸ್ಸು 14. ಗಾಂಧೀಜಿ 1888ರಲ್ಲಿ ಬ್ಯಾರಿಸ್ಟರ್ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡ್‌ಗೆ ತೆರಳಿದರು. ಅಲ್ಲಿ ಪದವಿ ಪಡೆದ ಬಳಿಕ ವಕೀಲಿ ವೃತ್ತಿ ಆರಂಭಿಸಿದರು. ನಂತರ ಪ್ರಕರಣವೊಂದರ ನಿಮಿತ್ತ 1893ರಲ್ಲಿ ದಕ್ಷಿಣ ಆಫ್ರಿಕಾಕ್ಕೆ ತೆರಳಿದರು. ಆದರೆ, ಅಲ್ಲಿನ ವರ್ಣಭೇದ ನೀತಿ ಹೋರಾಟಕ್ಕೆ ಪ್ರೇರೇಪಿಸಿತು. ಅದನ್ನು ತೊಡೆದು ಹಾಕಬೇಕು ಎಂದು ಸಂಕಲ್ಪ ಮಾಡಿ, ಅಹಿಂಸಾ ಮಾರ್ಗದಲ್ಲಿ ವರ್ಣಭೇದ ನೀತಿ ವಿರುದ್ಧ ಹೋರಾಟ ಆರಂಭಿಸಿದರು. ಅದೇ ವೇಳೆಗೆ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟ ತೀವ್ರಗೊಂಡಿದ್ದರಿಂದ ವರ್ಣಭೇದ ನೀತಿಯ ವಿರುದ್ಧ ತಾತ್ಕಾಲಿಕವಾಗಿ ಹೋರಾಟವನ್ನು ಕೈಬಿಟ್ಟು, ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದರು. ಭಾರತಕ್ಕೆ ಬಂದ ಕೂಡಲೇ ತಮ್ಮ ವಕೀಲಿ ವೃತ್ತಿಯನ್ನು ತ್ಯಜಿಸಿ, ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿ, ಅದರ ನೇತೃತ್ವ ವಹಿಸಿಕೊಂಡು ಸತ್ಯ ಹಾಗೂ ಅಹಿಂಸಾ ಮಾರ್ಗದ ಮೂಲಕ ಬ್ರಿಟಿಷರ ವಿರುದ್ಧ ಹೋರಾಡಿದರು.

ಅಕ್ಟೋಬರ್ 2, ಗಾಂಧಿ ಜಯಂತಿ. ತನ್ನಿಮಿತ್ತ ಈ ಲೇಖನ.

1920–22 ಅಸಹಕಾರ ಚಳವಳಿ, 1930ರಲ್ಲಿ ಉಪ್ಪಿನ ಸತ್ಯಾಗ್ರಹ, 1942ರಲ್ಲಿ 'ಬ್ರಿಟೀಷರೇ ಭಾರತ ಬಿಟ್ಟು ತೊಲಗಿ' (ಕ್ವಿಟ್ ಇಂಡಿಯಾ ಚಳವಳಿ) ಎಂಬ ಹೋರಾಟ ನಡೆಸಿದರು. ಭಾರತದ ಸ್ವಾತಂತ್ರ್ಯಕ್ಕಾಗಿ ಹಲವು ಬಾರಿ ಬ್ರಿಟೀಷರಿಂದ ಬಂಧನಕ್ಕೊಳಗಾದರೂ, ಜೈಲುವಾಸ ಅನುಭವಿಸಿದರೂ ಎದೆಗುಂದದೆ ಗಾಂಧೀಜಿ ಸತ್ಯ, ಅಹಿಂಸಾ ಮಾರ್ಗದಲ್ಲಿ 27 ವರ್ಷ ಅವಿಶ್ರಾಂತವಾಗಿ ನಡೆಸಿದ ಸ್ವಾತಂತ್ರ್ಯ ಚಳವಳಿಯ ಪರಿಣಾಮ ಭಾರತಕ್ಕೆ 1947 ಆಗಸ್ಟ್ 15ರ ಮಧ್ಯರಾತ್ರಿ ಸ್ವಾತಂತ್ರ್ಯ ದೊರೆಯಿತು. ತಾಯಿ ಭಾರತಿ ಬ್ರಿಟಿಷರಿಂದ ಬಂಧಮುಕ್ತಗೊಂಡಳು. ಗುಲಾಮಗಿರಿಯಿಂದ ಉಸಿರು ಕಟ್ಟಿಕೊಂಡಿದ್ದ ಇಡೀ ದೇಶ ಸ್ವಾತಂತ್ರ್ಯದ ಗಾಳಿಕುಡಿದು ಸಂಭ್ರಮದಿಂದ ಕುಣಿದಾಡಿತ್ತು. ರಾಷ್ಟ್ರಪಿತ ಗಾಂಧೀಜಿಯ ಅಹಿಂಸಾ ಮಾರ್ಗದಲ್ಲಿ ಇಡೀ ಜಗತ್ತು ಜಯ ಜಯ ಎಂದು ಜೈಕಾರ ಹಾಕಿತ್ತು.

ಗಾಂಧೀಜಿ ಸರ್ವೋದಯದ ಕನಸುಗಾರರಾಗಿದ್ದರು. ಸರ್ವರ ಉದ್ಧಾರವೇ ಅವರ ತಾರಕ ಮಂತ್ರವಾಗಿತ್ತು. ಸ್ವಚ್ಛ ಭಾರತ, ಅಭಿವೃದ್ಧಿಯ ಭಾರತ, ಮನುಷ್ಯತ್ವದ ಭಾರತ ಅವರ ತುಡಿತವಾಗಿತ್ತು. ಇನ್ನು ಭ್ರಷ್ಟಾಚಾರ, ಲಂಚಾವತಾರ ಇನ್ನಿತರ ಸಾಮಾಜಿಕ ಅನಿಷ್ಟಗಳ ಕುರಿತಾಗಿ, ಗಾಂಧೀಜಿ ಅವರ ಅಭಿಪ್ರಾಯ ಆದರ್ಶ ಸಮಾಜದ ಪರಿಕಲ್ಪನೆಯ ಭದ್ರ ಬುನಾದಿಗೆ ನಾಂದಿ ಹಾಡಿದೆ. "ಅನ್ಯಾಯ ಮಾರ್ಗಗಳಿಂದ ಸಂಪಾದಿಸಿ ಧನಿಕನಾದ ಮನುಷ್ಯ ಡಕಾಯಿತರುಗಳಿಗಿಂತ ಕಡಿಮೆ ಇಲ್ಲ. ಮರ್ಯಾದೆಯ ಮುಖವಾಡದಿಂದ ತನ್ನ ಅವಶ್ಯಕತೆಗಿಂತ ಮೀರಿ ಹಣ, ಆಸ್ತಿ ಸಂಪಾದಿಸುವವನು ಸಾಮಾನ್ಯ ಕಳ್ಳನಿಗಿಂತ ಹೆಚ್ಚಿನ ಶಿಕ್ಷೆಗೆ ಅರ್ಹನು" ದೇವರು ಧರ್ಮ ಪ್ರಾರ್ಥನೆಗಳನ್ನು ಕುರಿತು ಅಪಹಾಸ್ಯ ಮಾಡುವವರಿಗೆ ಗಾಂಧೀಜಿಯವರ ಹಿತನುಡಿಯೆಂದರೆ, "ನಾನೇ ಬುದ್ಧಿವಂತ, ವಿಚಾರವಂತನೆಂಬ ಹಮ್ಮಿನಿಂದ ಇನ್ನೊಬ್ಬರ ಭಾವನೆಗಳ ಜೊತೆ ಆಟ ಆಡಬೇಡಿ. ಜೀವನದ ಆದಿ ಮತ್ತು ಅಂತ್ಯ ಪಾಠಗಳೇ ಪ್ರಾರ್ಥನೆ. ಪ್ರೀತಿ, ದಯೆ, ತ್ಯಾಗವೇ ಧರ್ಮ. ಪ್ರಾರ್ಥನೆಯನ್ನು ಸರಿಯಾಗಿ ತಿಳಿದು ಸಲ್ಲಿಸಿದರೆ ಅದು ಅತ್ಯಂತ ಸಮರ್ಥವಾದ ಕಾರ್ಯೋಪಕರಣವಾಗುತ್ತದೆ". ಹೀಗೆ ಗಾಂಧೀಜಿಯವರ ವಿಚಾರಧಾರೆಗಳು, ದೇಶದ ಜನರ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ವಿಷಯಗಳ ಕುರಿತು ತನ್ನದೇ ಆದ ಮಹೋನ್ನತ ಹಾಗೂ ಉಜ್ವಲ ಬೆಳಕಿನ ಉನ್ನತ ಭಾವನೆಗಳನ್ನು ಹೊಂದಿದ್ದು, ನಿಜವಾದ ಕಳಕಳಿಯ ಸಂಕೇತವಾಗಿತ್ತು. ಇಂತಹ ಉನ್ನತ ವ್ಯಕ್ತಿತ್ವ ಹೊಂದಿದ್ದುದರಿಂದಲೇ ಗಾಂಧೀಜಿಯವರು ರಾಷ್ಟ್ರಪಿತನಾಗಿ, ದೇಶ ಮಾತ್ರವಲ್ಲ ವಿಶ್ವದಾದ್ಯಂತ ಗುರುತಿಸಲ್ಪಟ್ಟಿದ್ದಾರೆ.

> ಗಾಂಧೀಜಿ ಸರ್ವೋದಯದ ಕನಸುಗಾರರಾಗಿದ್ದರು. ಸರ್ವರ ಉದ್ಧಾರವೇ ಅವರ ತಾರಕ ಮಂತ್ರವಾಗಿತ್ತು. ಸ್ವಚ್ಛ ಭಾರತ, ಅಭಿವೃದ್ಧಿಯ ಭಾರತ, ಮನುಷ್ಯತ್ವದ ಭಾರತ ಅವರ ತುಡಿತವಾಗಿತ್ತು. ಇನ್ನು ಭ್ರಷ್ಟಾಚಾರ, ಲಂಚಾವತಾರ ಇನ್ನಿತರ ಸಾಮಾಜಿಕ ಅನಿಷ್ಟಗಳ ಕುರಿತಾಗಿ, ಗಾಂಧಿ ಅವರ ಅಭಿಪ್ರಾಯ ಆದರ್ಶ ಸಮಾಜದ ಪರಿಕಲ್ಪನೆಯ ಭದ್ರ ಬುನಾದಿಗೆ ನಾಂದಿ ಹಾಡಿದೆ.

1948 ಜನವರಿ 30ರಂದು ಶುಕ್ರವಾರ ಗಾಂಧೀಜಿ ಪ್ರಾರ್ಥನಾ ಸಭೆಗೆ ಹೋಗುತ್ತಿದ್ದ ವೇಳೆ ನಾಥೂರಾಂ ವಿನಾಯಕ ಗೋಡ್ಸೆ ಎಂಬಾತ ಗಾಂಧೀಜಿ ಎದೆಗೆ ಗುಂಡು ಹಾರಿಸಿದ. "ಹೇ ರಾಮ್......" ಎನ್ನುತ್ತಾ ಗಾಂಧೀಜಿ ಪ್ರಾಣ ಬಿಟ್ಟರು.

ಮಹಾತ್ಮನ ಕೆಲವು ವಿಶೇಷತೆಗಳು

ಜಗತ್ತಿನ 100ಕ್ಕೂ ಹೆಚ್ಚು ದೇಶಗಳು ಗಾಂಧೀಜಿ ಭಾವಚಿತ್ರ ಇರುವ ಪೋಸ್ಟಲ್ ಸ್ಟಾಂಪ್‌ಗಳನ್ನು ಬಿಡುಗಡೆ ಮಾಡಿವೆ. ಮೊಟ್ಟ ಮೊದಲು ಬಿಡುಗಡೆಗೊಳಿಸಿದ ದೇಶ ಪೋಲೆಂಡ್. ಭಾರತದ ಅಂಚೆ ಇಲಾಖೆಯು ಇಲ್ಲಿವರೆಗೂ ಗಾಂಧೀಜಿಯ ಭಾವಚಿತ್ರ ಇರುವ ಸುಮಾರು 40ಕ್ಕೂ ಹೆಚ್ಚು ಸ್ಟಾಂಪ್ ಮತ್ತು 200ಕ್ಕೂ ಹೆಚ್ಚು ಪೋಸ್ಟಲ್ ಎನ್ವಲಪ್‌ಗಳನ್ನು ಬಿಡುಗಡೆಗೊಳಿಸಿದೆ. ಸುಮಾರು 40ಕ್ಕೂ ಹೆಚ್ಚು ದೇಶಗಳು ಗಾಂಧೀಜಿ ಭಾವಚಿತ್ರ ಇರುವ ವಿವಿಧ ಬಗೆಯ ನಾಣ್ಯಗಳನ್ನು ಬಿಡುಗಡೆಗೊಳಿಸಿವೆ. ಸುಮಾರು 80ಕ್ಕೂ ಹೆಚ್ಚು ದೇಶಗಳಲ್ಲಿ ಗಾಂಧೀಜಿಯವರ ವಿವಿಧ ರೀತಿಯ ಪ್ರತಿಮೆಗಳಿವೆ. ಗಾಂಧೀಜಿಯವರ ಹೆಸರಿನ ರಸ್ತೆಗಳು ಸುಮಾರು 40 ಕ್ಕೂ ಹೆಚ್ಚು ದೇಶಗಳಲ್ಲಿವೆ. ಗಾಂಧೀಜಿ ಮರಣ ಹೊಂದಿದ ದಿನ ಶ್ರೀಲಂಕಾ ಸರಕಾರವು ಶೋಕಾಚರಣೆ ಮಾಡಿ ತನ್ನ ರೇಡಿಯೋ ಪ್ರಸಾರವನ್ನು 24 ಗಂಟೆಗಳ ಕಾಲ ಬಂದ್ ಮಾಡಿತ್ತು. ಗಾಂಧೀಜಿಯವರು ಬದುಕಿದ್ದಾಗಲೇ ಅವರ ಜೀವನ ಚರಿತ್ರೆ ನೊಬೆಲ್ ಸಾಹಿತ್ಯ ಪ್ರಶಸ್ತಿ ಪುರಸ್ಕೃತ ರೋಮನ್ ರೋಲ್ಯಾಂಡ್ ಅವರಿಂದ ಬರೆಯಲ್ಪಟ್ಟಿತ್ತು.


ಗಾಂಧೀಜಿಯವರು ತಮ್ಮ ಎರಡೂ ಕೈಗಳಿಂದ ಬರೆಯುತ್ತಿದ್ದರು. ಹಿಂದ್ ಸ್ವರಾಜ್ ಪುಸ್ತಕದ ಕೆಲವು ಪುಟಗಳನ್ನು ಎಡಗೈಯಿಂದ ಬರೆದಿದ್ದರು. ಗಾಂಧೀಜಿಯವರು ತಮ್ಮ ಜೀವಮಾನದಲ್ಲೇ ವಿಮಾನದಲ್ಲಿ ಒಂದು ಸಾರಿಯೂ ಪ್ರಯಾಣಿಸಲಿಲ್ಲ.

ಗಾಂಧೀಜಿಯವರು ತಮ್ಮ ಸಮಕಾಲೀನ ಜಗತ್ತಿನ ನಾಯಕರಲ್ಲೇ ಅತ್ಯಂತ ಹೆಚ್ಚು ಫೋಟೋಗ್ರಾಫ್‌ಗಳನ್ನು ಹೊಂದಿದ ವ್ಯಕ್ತಿ ಗಾಂಧೀಜಿ. ತಮ್ಮ ಜೀವಮಾನದಲ್ಲೇ ಒಮ್ಮೆಯೂ ಗಾಂಧೀಜಿ ಅಮೇರಿಕಾಕ್ಕೆ ಭೇಟಿ ನೀಡಲಿಲ್ಲ. ಆದರೆ ಅಮೇರಿಕಾ ಒಂದರಲ್ಲೇ ಗಾಂಧೀಜಿಯವರ 30 ಕ್ಕೂ ಹೆಚ್ಚು ಪ್ರತಿಮೆಗಳಿವೆ. 1999ರಲ್ಲಿ ಟೈಮ್ಸ್ ಮ್ಯಾಗ್ಜೀನ್ ನಡೆಸಿದ 'ಶತಮಾನದ ವ್ಯಕ್ತಿ' ಸ್ಪರ್ಧೆಯಲ್ಲಿ ಗಾಂಧೀಜಿಗೆ 2ನೇ ಸ್ಥಾನ. ಮೊದಲ ಸ್ಥಾನ ಗಾಂಧೀಜಿಯವರನ್ನು ಬಹುವಾಗಿ ಮೆಚ್ಚಿದ್ದ ಅಲ್ಬರ್ಟ್ ಐನಸ್ಟೀನ್. ಗಾಂಧೀಜಿಯವರಿಗೆ ಮುಂದಿನ ಎರಡು ಹಲ್ಲುಗಳು ಹರೆಯದಲ್ಲೇ ಬಿದ್ದು ಹೋಗಿದ್ದವು. ತಿನ್ನುವುದಕ್ಕಾಗಿ ಎರಡು ಹಲ್ಲುಗಳ ಸೆಟ್ ಒಂದನ್ನು ಮಾಡಿಸಿಕೊಂಡಿದ್ದರು. (ದ.ಆಫ್ರಿಕಾದಲ್ಲಿ ಬಿಳಿಯರಿಂದ ದಾಳಿಗೊಳಗಾದಾಗ ಎರಡು ಹಲ್ಲುಗಳು ಉದುರಿದ್ದವು). ಯಾವುದೇ ಅಧಿಕಾರದಲ್ಲಿಲ್ಲದ ಗಾಂಧೀಜಿ ತೀರಿಕೊಂಡಾಗ ವಿಶ್ವಸಂಸ್ಥೆಯು ತನ್ನ ಎಲ್ಲ 55 ಸದಸ್ಯ ರಾಷ್ಟ್ರಗಳ ಧ್ವಜವನ್ನು ಅರ್ಧಕ್ಕೆ ಇಳಿಸಿ ಶೋಕಾಚರಣೆ ಮಾಡಿತ್ತು. ಇದು ಇತಿಹಾಸದಲ್ಲೇ ಮೊದಲ ಬಾರಿ ಮತ್ತು ಕೊನೆಯ ಬಾರಿ ನಡೆದ ಘಟನೆ. ಮತ್ತೊಬ್ಬರಿಗೆ ಈ ರೀತಿ ಗೌರವ ಸಿಕ್ಕಿಲ್ಲ. ಗಾಂಧೀಜಿಯವರು ಯಾವ ದೇಶದ ವಿರುದ್ಧ ಜೀವಮಾನವಿಡಿ ಹೋರಾಡಿದರೋ ಅದೇ ದೇಶದ (ಇಂಗ್ಲೆಂಡಿನ ಲಂಡನ್ ಸ್ಕ್ವೈರ್) ಪಾರ್ಲಿಮೆಂಟ್ ಮುಂದೆ ಗಾಂಧೀಜಿಯ ಪ್ರತಿಮೆ ಸ್ಥಾಪಿಸಲ್ಪಟ್ಟಿದೆ. ಜಗತ್ತಿನಲ್ಲೇ ವಿಶ್ವಸಂಸ್ಥೆಯಿಂದ ಆಚರಿಸಲ್ಪಡುವ ಜನ್ಮದಿನ ಕೇವಲ 'ಗಾಂಧಿ ಜನ್ಮದಿನ' ಮಾತ್ರ. ವಿಶ್ವಸಂಸ್ಥೆಯು ಗಾಂಧೀ ಜನ್ಮದಿನವನ್ನು 'ವಿಶ್ವ ಅಹಿಂಸಾ ದಿನ' ಎಂದು ಘೋಷಿಸಿದೆ. ಗಾಂಧೀಜಿಯಿಂದ ಪ್ರೇರಣೆಗೊಂಡು ನಾಲ್ಕು ಖಂಡಗಳ ಸುಮಾರು 20ಕ್ಕೂ ಹೆಚ್ಚು ದೇಶಗಳಲ್ಲಿ ಮಾನವ ಹಕ್ಕುಗಳ ಹೋರಾಟಗಳು ನಡೆದಿವೆ. ಸುಮಾರು 6 ಬಾರಿ ನೊಬೆಲ್ ನಾಮಿನೇಟ್‌ಗೊಂಡಿರುವ ಗಾಂಧೀಜಿಗೆ ನೊಬೆಲ್ ಸಿಗಲಿಲ್ಲ. ಕೊನೆಗೆ ನೊಬೆಲ್ ಸಂಸ್ಥೆ ಈ ವಿಷಯವಾಗಿ ಕ್ಷಮೆ ಕೇಳಿ 'ಅವರು ನೊಬೆಲ್‌ಗಿಂತ ದೊಡ್ಡವರು' ಎಂದು ಹೇಳಿತು. ಗಾಂಧೀಜಿಯವರನ್ನು ಒಮ್ಮೆಯೂ ಭೇಟಿಯಾಗದ ನೆಲ್ಸನ್ ಮಂಡೇಲಾ (ದ.ಆಫ್ರಿಕಾದ ಗಾಂಧಿ) ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ (ಅಮೇರಿಕಾದ ಗಾಂಧಿ) ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಸಿಕ್ಕಿದೆ. ದ.ಆಫ್ರಿಕಾದ ಜೈಲಿನಲ್ಲಿ ನೇಕಾರ ಕೆಲಸ ಆರಿಸಿಕೊಂಡ ಗಾಂಧೀಜಿಯವರು ಎರಡು ತುದಿ ಚೂಪಾಗಿರುವ ಟೋಪಿ ಒಂದನ್ನು ಹೊಲಿದರು. ಅದೇ ಮುಂದೆ ಗಾಂಧಿ ಟೋಪಿ ಎಂದು ಪ್ರಸಿದ್ಧವಾಗಿ ಈಗಲೂ ಚಾಲ್ತಿಯಲ್ಲಿದೆ. ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಮತ್ತು ಅವರ ಸಾವಿರಾರು ಸಹಚರರು ತಮ್ಮ ಪ್ರಸಿದ್ಧ ವಾಷಿಂಗ್ಟನ್ ಯಾತ್ರೆಯಲ್ಲಿ ಗಾಂಧಿ ಟೋಪಿ ಧರಿಸಿ ಹೋರಾಟಕ್ಕೆ ಇಳಿದಿದ್ದರು. ಇದೇ ಗಾಂಧಿ ಮಹಾತ್ಮೆ!

ಗುರುನಮನ

ಇಂದು ಶೃಂಗೇರಿ ಶಾರದ ಪೀಠದ 34ನೇ ಪೀಠಾಧಿಪತಿಗಳಾಗಿದ್ದ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳ ಆರಾಧನೆ. ಅದರ ಪ್ರಯುಕ್ತ ಈ ಲೇಖನ.

**ಸದಾತ್ಮಧ್ಯಾನನಿರತಂ ವಿಷಯೇಭ್ಯಃ ಪರಾಙ್ಮುಖಮ್ ।
ನೌಮಿ ಶಾಸ್ತ್ರೇಷು ನಿಷ್ಣಾತಂ ಚಂದ್ರಶೇಖರ ಭಾರತೀಮ್ ॥**



ಶೃಂಗೇರಿ ಶ್ರೀ ಶಾರದಾಪೀಠದ 34ನೇ ಪೀಠಾಧಿಪತಿಗಳಾದ ಸಕಲ ಶಾಸ್ತ್ರಗಳಲ್ಲೂ ನಿಷ್ಣಾತರೂ ಆಗಿದ್ದ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರ ಭಾರತೀಮಹಾಸ್ವಾಮಿಗಳವರು ಸುಮಾರು 42 ವರ್ಷಗಳ ಕಾಲ ವಿರಾಜ ಮಾನರಾಗಿ ವೇದಾಂತದ ಗುರಿಯಾದ ಅದ್ವೈತ ಸಾಕ್ಷಾತ್ಕಾರವನ್ನು ಗಳಿಸಿ, ಭಕ್ತಾದಿಗಳನ್ನು ಅನುಗ್ರಹಿಸಿದ್ದರು.

ಮನೆತನ–ಜನನ: ಶೃಂಗೇರಿಯ ಶ್ರೀಮಠದ ಆಶ್ರಯದಲ್ಲಿದ್ದ ಶ್ರೀ ಗೋಪಾಲಶಾಸ್ತ್ರಿಗಳು ಹಾಗೂ ಶ್ರೀಮತಿ ಲಕ್ಷ್ಮಮ್ಮ ದಂಪತಿ ನಂದನ ಸಂವತ್ಸರದ ಆಶ್ವಯುಜ ಬಹುಳ ಏಕಾದಶಿ, ರವಿವಾರ ಮಘಾ ನಕ್ಷತ್ರದಲ್ಲಿ (ದಿನಾಂಕ 16.10.1892) ಸೂರ್ಯೋದಯಾ ನಂತರ ಶ್ರೀಶಂಕರ ಸ್ವರೂಪಿಯಾದ ಪುತ್ರರತ್ನಕ್ಕೆ ಜನ್ಮವಿತ್ತರು. ಅಂದಿನವರೆಗೆ ಚಿಂತಾಶೋಕಗಳಿಂದ ಕೂಡಿದ್ದ ಆ ಮನೆಯು ಈ ಮಗುವಿನ ಜನನದಿಂದ ಸುಖ ಸಂತೋಷಗಳಿಂದ ತುಂಬಿತು.

ಬಾಲ್ಯ: ಮುಂದೆ ಶ್ರೀ ಗೋಪಾಲಕೃಷ್ಣಶಾಸ್ತ್ರಿಗಳು ತಮ್ಮ ಮನೆಯ ದೇವರಾದ ಶ್ರೀ ನರಸಿಂಹನ ಹೆಸರನ್ನು ಬಾಲಕನಿಗೆ ನಾಮಕರಣ ಮಾಡಿದರು. ಶ್ರೀ ಶಾಸ್ತ್ರಿಗಳು ಪ್ರತಿನಿತ್ಯ ಶ್ರೀಶಾರದಾಂಬ ಹಾಗೂ ಗುರುಗಳವರ ದರ್ಶನಕ್ಕೆ ಹೋಗುವಾಗ ತಮ್ಮೊಡನೆ ಬಾಲಕ ನರಸಿಂಹನನ್ನು ಕರೆದುಕೊಂಡು ಹೋಗುತ್ತಿದ್ದರು. ತಮ್ಮ ದರ್ಶನಕ್ಕಾಗಿ ಬರುವ ಬಾಲಕನ ವೈಶಿಷ್ಟ್ಯವನ್ನು ಶ್ರೀಗುರುಗಳು ಕಂಡಿದ್ದರು. ಒಂದು ದಿನವಾದರೂ ಬಾಲಕನನ್ನು ಕಾಣದಿದ್ದರೆ 'ಇಂದೇಕೆ ನರಸಿಂಹನು ಬರಲಿಲ್ಲ?' ಎಂದುಕೊಳ್ಳುವಂತಾಯಿತು.


ಶ್ರೀ ಶಾಸ್ತ್ರಿಗಳು ತಮ್ಮ ಮಗನಿಗೆ ಎಂಟನೇ ವಯಸ್ಸಿನಲ್ಲಿ ಉಪನಯನ ನೆರವೇರಿಸಿದರು. ನಂತರ ಪ್ರತಿನಿತ್ಯ ಶಾಸ್ತ್ರೋಕ್ತವಾದ ರೀತಿಯಲ್ಲಿ ತ್ರಿಕಾಲ ಸಂಧ್ಯಾವಂದನೆ, ಅಗ್ನಿಕಾರ್ಯ ಮೊದಲಾದ ನಿತ್ಯ ಕರ್ಮಗಳನ್ನು ವಿಚ್ಛಿತ್ತಿಯಿಲ್ಲದೇ ನಡೆಸುತ್ತಿದ್ದರು. ಹನ್ನೆರಡನೇ ವಯಸ್ಸಿನಲ್ಲಿ ಮಾಧ್ಯಮಿಕ ಶಾಲೆಯ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿ ಯಲ್ಲಿ ತೇರ್ಗಡೆ ಹೊಂದಿದ ಬಾಲಕನನ್ನು ಅನುಗ್ರಹಿಸಿದ ಶ್ರೀಗುರು ಗಳವರು ಆತನ ಪುರೋಭಿವೃದ್ಧಿ, ಯಶಸ್ಸಿಗಾಗಿ ವೈದಿಕ ವಿದ್ಯೆಯನ್ನು ಕೊಡಿಸುವಂತೆ ಸೂಚಿಸಿದರು. ಶ್ರೀಗುರುಗಳವರ ಅಪ್ಪಣೆಯಂತೆ ಬಾಲಕನನ್ನು ಶ್ರೀಮಠದ ಸದ್ವಿದ್ಯಾ ಸಂಜೀವಿನಿ ಸಂಸ್ಕೃತ ಮಹಾಪಾಠ ಶಾಲೆಗೆ ಸೇರಿಸಿದರು. ಬಾಲಕ ನರಸಿಂಹ ಶಾಸ್ತ್ರಿಗಳು ವೇದ ಮತ್ತು ಸಂಸ್ಕೃತಗಳನ್ನು ಉತ್ಸಾಹದಿಂದ ಹಾಗೂ ಶ್ರದ್ಧೆಯಿಂದ ಅಭ್ಯಸಿಸಿ ಸಂಸ್ಕೃತ ಶಾಸ್ತ್ರದಲ್ಲಿ ಉತ್ತಮ ಪ್ರಾವೀಣ್ಯತೆಯನ್ನು ಪಡೆದರು.

ಗುರುಕೃಪೆ: ಬಾಲಕ ನರಸಿಂಹಶಾಸ್ತ್ರಿಗಳು ಬಾಲ್ಯದಿಂದಲೂ ಶ್ರೀ ಗುರುಕೃಪೆಗೆ ಪಾತ್ರರಾದರು. ಉನ್ನತ ವಿದ್ಯಾಭ್ಯಾಸಕ್ಕಾಗಿ ನರಸಿಂಹ ಶಾಸ್ತ್ರಿಗಳಿಗೆ 1911ರಲ್ಲಿ ಬೆಂಗಳೂರಿನಲ್ಲಿ ಗುರುಗಳೇ ತಮ್ಮ 'ಭಾರತೀಯ ಗೀರ್ವಾಣ ಪ್ರೌಢ ವಿದ್ಯಾಭಿವರ್ಧಿನೀ' ಪಾಠಶಾಲೆಯಲ್ಲಿ ವ್ಯವಸ್ಥೆ ಮಾಡಿದರು. ಪಾಠಶಾಲೆಯಲ್ಲಿ ಮಹಾ ಮಹೋಪಾಧ್ಯಾಯ ವೈದ್ಯನಾಥಶಾಸ್ತ್ರಿಗಳು ಪೂರ್ವ ಮೀಮಾಂಸ ಶಾಸ್ತ್ರಕ್ಕೂ, ಮಹಾಮಹೋಪಾಧ್ಯಾಯ ವೆಳ್ಳೂರು ಸುಬ್ರಮಣ್ಯಶಾಸ್ತ್ರಿಗಳು ಉತ್ತರ ಮೀಮಾಂಸ ಶಾಸ್ತ್ರಕ್ಕೂ ಪ್ರಾಧ್ಯಾಪಕರಾಗಿ ಬೋಧನೆ ಮಾಡಿದರು.

ಉತ್ತರಾಧಿಕಾರಿ: ಹೆಚ್ಚಿನ ಸಂಚಾರದಿಂದಾಗಿ ಗುರುಗಳಾದ ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳವರ ದೇಹಾರೋಗ್ಯವು ತೃಪ್ತಿಕರವಾಗಿರಲಿಲ್ಲ. ಅವರು ಬಾಲಕ ನರಸಿಂಹ ಶಾಸ್ತ್ರಿಗಳನ್ನು ಉತ್ತರಾಧಿಕಾರಿಯನ್ನಾಗಿ ಸ್ವೀಕರಿಸಲು ನಿಶ್ಚಯಿಸಿರುವ ವಿಷಯವನ್ನು ಗುರುಭಕ್ತರೂ, ಆಪ್ತತಮರೂ ಆಗಿದ್ದ ಮೈಸೂರು ಸಂಸ್ಥಾನದ ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಶೃತಪಡಿಸಿ, ಬೆಂಗಳೂರಿನಿಂದ ಶೃಂಗೇರಿಗೆ ಬಾಲಕನನ್ನು ಕರೆದುಕೊಂಡು ಬರಲು ಅಪೇಕ್ಷಿಸಿದರು.

ಮಗನ ಸನ್ಯಾಸ ಸ್ವೀಕಾರಕ್ಕೆ ತಾಯಿಯನ್ನು ಒಪ್ಪಿಸಲು ಸಾಧ್ಯವಾಗಲಿಲ್ಲ. ಆಗ ನರಸಿಂಹಶಾಸ್ತ್ರಿಗಳೇ ಮುಂದೆ ಬಂದು ಹಿಂದೆ ಶ್ರೀ ಶಂಕರ ಭಗವತ್ಪಾದರೂ ಸಹ ತಾವಾಗಿಯೇ ತಮ್ಮ ಮಾತೆಯಲ್ಲಿ ಸನ್ಯಾಸಾಶ್ರಮಕ್ಕೆ ಅಪ್ಪಣೆ ಬೇಡಿರಲಿಲ್ಲವೆ? ಇಂದೂ ಸಹ ತಮ್ಮ ಸನ್ಯಾ ಸಾಶ್ರಮ ಸ್ವೀಕಾರಕ್ಕೆ ಅಪ್ಪಣೆ ಕೊಡಿರೆಂದು ತಮ್ಮ ತಾಯಿಯವರಲ್ಲಿ ಅತ್ಯಂತ ದೈನ್ಯದಿಂದ ಭಿನ್ನವಿಸಿದರು. ತಾಯಿ ಲಕ್ಷ್ಮಮ್ಮನವರು ಪುತ್ರನನ್ನು ತ್ಯಾಗ ಮಾಡಿ ಅಪ್ಪಣೆ ಕೊಟ್ಟರು. ನಂತರ ಮಾತಾ ಪಿತೃಗಳಿಗೆ ನಮಸ್ಕರಿಸಿ ಬಾಲಕ ನರಸಿಂಹ ಶಾಸ್ತ್ರಿಗಳು ಶೃಂಗೇರಿಗೆ ಪ್ರಯಾಣ ಮಾಡಿದರು.

ಶೃಂಗೇರಿಗೆ ಆಗಮಿಸಿದ ಶ್ರೀ ನರಸಿಂಹಶಾಸ್ತ್ರಿಗಳವರಿಗೆ ಜಗದ್ಗುರುಗಳು ಬ್ರಹ್ಮೀಭೂತರಾದುದನ್ನು ಕೇಳಿ ಸಿಡಿಲು ಬಡಿದಂತಾಯಿತು. ತಮ್ಮ ಬಾಲ್ಯದಿಂದಲೂ ಅನುಗ್ರಹಿಸಿದ ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳವರ ಸ್ಮರಣೆಯಲ್ಲಿಯೇ ಇದ್ದರು.



ಸಿ. ಶ್ರೀಕಂಠ ಕುಮಾರ್
ಮೊ: 9481067333

ಪಟ್ಟಾಭಿಷೇಕ: ಶ್ರೀಗುರುಗಳವರು ದೇಹ ಮುಕ್ತರಾಗಿದ್ದರಿಂದ ಆರಾಧನಾ ಮೊದಲಾದ ಕಾರ್ಯಕ್ರಮಗಳು ಮುಗಿಯುವವರೆಗೆ ಕಾಯುವುದು ಅನಿವಾರ್ಯವಾಗಿತ್ತು. ಆ ಸಮಯದಲ್ಲಿ ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್, ಸ್ವತಃ ಶೃಂಗೇರಿಯಲ್ಲಿ ವಾಸ್ತವ್ಯ ಹೂಡಿ ಪಟ್ಟಾಭಿಷೇಕದ ಎಲ್ಲಾ ವ್ಯವಸ್ಥೆಗಳನ್ನು ಪೂರೈಸಿದರು. ಸನ್ಯಾ ಸಾಂಗವಾದ ಅಷ್ಟಶ್ರಾದ್ಧ, ಪುರುಷಸೂಕ್ತ ಹೋಮ, ವಿರಜಾ ಹೋಮ ಹೀಗೆ ಕರ್ಮಕಲಾಪಗಳೆಲ್ಲವನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿ ಪರೀಧಾವಿ ಸಂವತ್ಸರದ ಚೈತ್ರ ಬಹುಳ ಷಷ್ಠೀ ಗುರುವಾರದಂದು (ದಿನಾಂಕ 07.04.1912) ಸನ್ಯಾಸಾಶ್ರಮ ಸ್ವೀಕರಿಸಿದ ನಂತರ ಗುರುಗಳ ಅಪ್ಪಣೆಯಂತೆ **ಶ್ರೀ ಚಂದ್ರಶೇಖರಭಾರತೀ** ಎಂಬ ಯೋಗಪಟ್ಟವನ್ನು ನೀಡಲಾಯಿತು. ನಂತರ ದಕ್ಷಿಣಾಮ್ನಾಯ ಶ್ರೀಶಾರದಾಪೀಠದ 34ನೇ ಪೀಠಾಧಿಪತಿಗಳಾಗಿ ಪಟ್ಟಾಭಿಷೇಕವು ಜರುಗಿತು.

ವಿಜಯಯಾತ್ರೆ: ಜಗದ್ಗುರು ಶ್ರೀ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರು ಪೀಠಾಧಿಪತ್ಯವನ್ನು ವಹಿಸಿಕೊಂಡ ಮೇಲೆ ಸುಮಾರು ಹತ್ತು ವರ್ಷಗಳಷ್ಟು ದೀರ್ಘಕಾಲ ಶೃಂಗೇರಿಯಿಂದ ಹೊರಗೆ ಎಲ್ಲೂ ವಿಜಯಯಾತ್ರೆಯನ್ನು ಕೈಗೊಂಡಿರಲಿಲ್ಲ. ಮೈಸೂರಿನ ಮಹಾರಾಜರಾಗಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಪ್ರಾರ್ಥನಾ ಪತ್ರವನ್ನು ಕಳುಹಿಸಿ ಶ್ರೀ ಗುರುವರ್ಯರು ಮೈಸೂರಿಗೆ ದಯಮಾಡಿಸಿ ತಮ್ಮನ್ನೂ, ತಮ್ಮ ಪ್ರಜೆಗಳನ್ನೂ ಅನುಗ್ರಹಿಸಬೇಕೆಂದು ಕೇಳಿಕೊಂಡಿದ್ದರು.

ಜಗನ್ಮಾತೆಯಿಂದ ಅನುಜ್ಞೆ ಪಡೆದು ಭಕ್ತಾನುಗ್ರಹಕ್ಕೋಸ್ಕರವಾಗಿಯೂ, ಶಿಷ್ಯರನ್ನು ಸನ್ಮಾರ್ಗ ಪ್ರವರ್ತಕರನ್ನಾಗಿ ಮಾಡುವುದಕ್ಕಾಗಿಯೂ ಶ್ರೀ ಶ್ರೀಗಳವರು ರುಧಿರೋದ್ಗಾರಿ ಸಂವತ್ಸರದ ಪುಷ್ಯ ಶುದ್ಧ ದ್ವಾದಶಿಯಂದು



ವಿಜಯಯಾತ್ರೆಯನ್ನು (ದಿನಾಂಕ 18.01.1924) ಪ್ರಾರಂಭಿಸಿದರು. ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಂತೂ ಜನ ಸಮೂಹವೇ ನೆರೆದಿತ್ತು. ಶ್ರೀಮನ್ಮಹಾರಾಜರವರಿಂದ ಸ್ವತಃ ಸ್ವಾಗತಿಸಲ್ಪಟ್ಟ ಗುರುವರ್ಯರು ರಾಜರ ಭಕ್ತಿಗೂ, ಶ್ರದ್ಧೆಗೂ ಮೆಚ್ಚುಗೆಯನ್ನು ತೋರಿದರು ಹಾಗೂ ಎಲ್ಲರೂ ಗುರುವರ್ಯ ರವರಿಂದ ಉಪದೇಶವನ್ನು ಪಡೆದರು.

ತ್ರಿಕಾಲ ಜ್ಞಾನಿಗಳು: ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿ ಗಳವರು ಭೂತ–ಭವಿಷ್ಯತ್ ವರ್ತಮಾನಗಳೆಲ್ಲವನ್ನೂ ಬಲ್ಲಂತಹ ಮಹಾ ಜ್ಞಾನಿಗಳಾಗಿದ್ದರು. ಗುರುಗಳ ಎದುರಿಗೆ ಯಾರೇ ಬಂದು ನಿಂತರೂ ಕೂಡಲೇ ಆತನ ವ್ಯಕ್ತಿತ್ವ ಗುರುಗಳವರಿಗೆ ಸಂಪೂರ್ಣವಾಗಿ ತಿಳಿಯು ತ್ತಿತ್ತು. 1951ರಲ್ಲಿ ನೇಪಾಳದ ತ್ರಿಭುವನ ಮಹಾರಾಜರಿಗೆ ಬಹಳ ದೊಡ್ಡ ವಿಪತ್ತೇ ಸಂಭವಿಸಿತ್ತು. ಅವರು ನೇಪಾಳದಿಂದ ತಲೆಮರೆಸಿಕೊಂಡು ಮೂರು ವಾರಗಳ ಕಾಲ ಭಾರತದಲ್ಲಿ ಇರಬೇಕಾಯಿತು. ಈ ವಿಷಯವನ್ನು ತಮ್ಮ ದಿವ್ಯ ದೃಷ್ಟಿಯಿಂದ ಅರಿತ ಶ್ರೀಗಳವರು ಅವರಿಗೆ ಪರಮಾನುಗ್ರಹ ಮಾಡಿ ಅತೀ ಕ್ಷಿಪ್ರದಲ್ಲೇ ರಾಜ್ಯವು ನಿಮ್ಮ ಕೈಗೆ ಸಿಗುವುದು. ಆ ರೀತಿಯಾದ ಅನುಗ್ರಹವನ್ನು ಶ್ರೀ ಶಾರದಾ ಚಂದ್ರಮೌಳೀಶ್ವರರು ಮತ್ತು ಶ್ರೀಪಶುಪತಿನಾಥನು ಮಾಡುತ್ತಾರೆ ಎಂದು ಶೃಂಗೇರಿಯಿಂದ ಶ್ರೀಮುಖವನ್ನು ಕಳುಹಿಸಿಕೊಟ್ಟಿದ್ದರು. ಅದರಂತೆಯೇ ಕೆಲವೇ ದಿನಗಳಲ್ಲಿ ತ್ರಿಭುವನ ಮಹಾರಾಜರಿಗೆ ಮತ್ತೆ ನೇಪಾಳ ರಾಜ್ಯವು ಸಿಕ್ಕಿತು.

ಮಹಾ ಪ್ರಸ್ಥಾನ: ಶ್ರೀ ಜಯಸಂವತ್ಸರದ ಭಾದ್ರಪದ ಬಹುಳ ಮಹಾಲಯ ಅಮವಾಸ್ಯೆಯಂದು (1954) ಬ್ರಾಹ್ಮೀ ಮುಹೂರ್ತದ ಮುನ್ನವೇ ಶ್ರೀಗುರುವರ್ಯರು ಸ್ನಾನಕ್ಕಾಗಿ ತುಂಗಾ ನದಿಯತ್ತ ಹೊರಟರು. ಆಗ ಮಳೆಗಾಲವಾಗಿದ್ದು ತುಂಗೆಯು ತುಂಬಿ ಹರಿಯುತ್ತಿತ್ತು. ಶ್ರೀ ಗುರುಗಳವರು ಸಂಧ್ಯಾಮಂಟಪದಲ್ಲಿ ಬಂದು ನಿಂತರು. ಹಿಂದೆಯೇ ಪರಿಚಾರಕರು ಓಡಿಬಂದರು. ತುಂಬಿ ಹರಿಯುತ್ತಿದ್ದ ಪ್ರವಾಹವನ್ನೊಮ್ಮೆ ತುಂಬಿದ ಭಾವನೆಗಳಿಂದ ನೋಡಿದ ಶ್ರೀಗಳವರು ನೀರಿನಲ್ಲಿಳಿದು ಸ್ನಾನಕ್ಕಾಗಿ ಸಂಕಲ್ಪ ಮಾಡಿ ಪೂರ್ವಾಭಿಮುಖರಾಗಿ ನಿಂತು ಪ್ರಾಣಯಾಮ ಮಾಡಿ, ಬ್ರಹ್ಮರಂಧ್ರದ ಮೂಲಕ ತಮ್ಮ ಪ್ರಾಣವನ್ನು ಹೊರ ಹೊರಡಿಸಿದರು. ಆ ಚೇತನವು ವಿಶ್ವವ್ಯಾಪಕವಾದ ಮಹಾಚೇತನದಲ್ಲಿ ಸೇರಿ ಪಂಚ ಭೂತಾತ್ಮಕವಾದ ದೇಹವು ತುಂಗೆಯಲ್ಲುರುಳಿತು. ಪ್ರವಾಹದಲ್ಲಿ ತೇಲಿ ಹೋಗುತ್ತಿದ್ದ ಗುರುಗಳ ಶರೀರವನ್ನು ಶಿಷ್ಯರು ದಡಕ್ಕೆ ತಂದರು. ನಂತರ ಶ್ರೀಮಠದ ಸಂಪ್ರದಾಯಾನುಸಾರ ಶ್ರೀಗಳವರ ದೇಹಕ್ಕೆ ವಿಧಿವತ್ತಾಗಿ ಸಂಸ್ಕಾರ ಗಳನ್ನು ನಡೆಸಲಾಯಿತು. ಶ್ರೀಗಳವರು ಆದಿಗುರು ಪೂಜ್ಯ ಶ್ರೀ ಶಂಕರಭಗವತ್ಪಾದರು ಸ್ಥಾಪಿಸಿದ್ದ ಆಧ್ಯಾತ್ಮ ಪೀಠವನ್ನಲಂಕರಿಸಿದ ಜೀವನ್ಮುಕ್ತರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com



ನಾಳೆಯಿಂದ ಅರಮನೆಯಲ್ಲಿ ಖಾಸಗಿ ದರ್ಬಾರ್

ಮೊದಲ ಬಾರಿಗೆ ಸಂಸದರಾಗಿ ಯದುವೀರ್ ರಾಜ ಪರಂಪರೆ ಧಾರ್ಮಿಕ ಕಾರ್ಯದಲ್ಲಿ ಭಾಗಿ



ಸಂಸದರಾದ ಬಳಿಕ ಮೊದಲ ದಸರಾ

ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಬಳಿಕ ಯದುವಂಶದ ಸಾರಥಿ, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಇದುವರೆಗೂ ಕೇವಲ ರಾಜವಂಶಸ್ಥರಾಗಿ ನವರಾತ್ರಿ ವೇಳೆ ಅರಮನೆಯಲ್ಲಿ ನಡೆಯುವ ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಳ್ಳುತ್ತಿದ್ದರು. ಆದರೆ, ಈ ಬಾರಿ ಸಂಸದರಾಗಿದ್ದು, ಮೊದಲ ಬಾರಿಗೆ ಖಾಸಗಿ ದರ್ಬಾರ್‌ನಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಈ ಹಿಂದೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಹಲವು ವರ್ಷ ಸಂಸದರಾಗಿ ಖಾಸಗಿ ದರ್ಬಾರ್‌ನಲ್ಲಿ ಪಾಲ್ಗೊಂಡಿದ್ದನ್ನು ಸ್ಮರಿಸಬಹುದು.

ಮೈಸೂರು,ಅ.1(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಅ.3ರಿಂದ 12ರವರೆಗೆ ಅರಮನೆಯಲ್ಲಿ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ವಿವಿಧ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ವರ್ಷವೂ ಅರಮನೆಯಲ್ಲಿ ನವರಾತ್ರಿ ವೇಳೆ ಯದುವಂಶ ನಡೆಸುತ್ತಿದ್ದ ಧಾರ್ಮಿಕ ಕಾರ್ಯಗಳು ಮುಂದುವರೆಯಲಿದ್ದು, ಅದಕ್ಕಾಗಿ ಅರಮನೆಯಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸಾಂಸ್ಕೃತಿಕ ನಗರಿಯಲ್ಲಿ ನಾಡಹಬ್ಬ ದಸರಾ ಮಹೋತ್ಸವದ ವೈಭವ ಕಳೆ ಕಟ್ಟಿದ್ದರೆ, ಅರಮನೆಯಲ್ಲಿ ರಾಜ ಪರಂಪರೆಯ ಸೊಬಗು ಕಣ್ಮನ ಸೆಳೆಯಲಿದೆ.

ಅರಮನೆಯ ಧಾರ್ಮಿಕ ಕಾರ್ಯ: ನವರಾತ್ರಿ ವೇಳೆ ರಾಜವಂಶಸ್ಥರು ಸಂಪ್ರದಾಯದಂತೆ ಧಾರ್ಮಿಕ ಕಾರ್ಯ ಮುಂದುವರೆಸಿಕೊಂಡು ಬಂದಿದ್ದು, ಜಂಬೂಸವಾರಿ ಮುಗಿಯುವವರೆಗೂ ಕೆಲವು ಕಟ್ಟುನಿಟ್ಟಿನ ಆಚರಣೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸಾಲಿನ ಖಾಸಗಿ ದರ್ಬಾರ್‌ಗಾಗಿ ಸೆ.27ರಂದು ದರ್ಬಾರ್ ಹಾಲ್‌ನಲ್ಲಿ ಚಿನ್ನದ ಸಿಂಹಾಸನ ಹಾಗೂ ಕನ್ನಡಿ ತೊಟ್ಟಿಯಲ್ಲಿ ಬೆಳ್ಳಿಯ ಭದ್ರಾಸನ ಜೋಡಣೆ ಮಾಡಲಾಗಿದೆ.

ಅ.3ರಂದು ಮುಂಜಾನೆ 4.30ಕ್ಕೆ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಎಣ್ಣೆಶಾಸ್ತ್ರ ನೆರವೇರಲಿದೆ. ಬೆಳಗ್ಗೆ 5.45ರಿಂದ 6.10ರೊಳಗೆ ದರ್ಬಾರ್ ಹಾಲ್‌ನಲ್ಲಿ ಜೋಡಣೆ ಮಾಡಿರುವ ಸಿಂಹಾಸನಕ್ಕೆ ಸಿಂಹದ ತಲೆ ಜೋಡಣೆ, ಬೆಳಗ್ಗೆ 7.45ರಿಂದ 8.45ರವರೆಗೆ ಅರಮನೆಯ ಚಾಮುಂಡಿ ತೊಟ್ಟಿಯಲ್ಲಿ ಯದುವೀರ್ ಅವರಿಗೆ ಕಂಕಣ ಧಾರಣೆ, 10.30ಕ್ಕೆ ಸವಾರಿತೊಟ್ಟಿಗೆ ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸುವಿನೊಂದಿಗೆ ದೇವರನ್ನು ಕೋಡಿ ಸೋಮೇಶ್ವರ ದೇವಾಲಯದ ಬಳಿಯಿಂದ ತರಲಾಗುತ್ತದೆ.

ಆ ನಂತರ ದರ್ಬಾರ್ ಹಾಲ್‌ನಲ್ಲಿ ಖಾಸಗಿ ದರ್ಬಾರ್ ಆರಂಭವಾಗಲಿದೆ. 11 ಗಂಟೆಗೆ ಕಳಸ ಪೂಜೆ, ಸಿಂಹಾಸನ ಪೂಜೆ ನೆರವೇರಲಿದೆ. ಬಳಿಕ 11.35ರಿಂದ 12.05ರವರೆಗೆ ಯದುವೀರ್ ಸಿಂಹಾಸನ ಏರಿ ದರ್ಬಾರ್ ನಡೆಸಲಿದ್ದಾರೆ. ಮಧ್ಯಾಹ್ನ 1.05 ರಿಂದ 1.35ರೊಳಗೆ ಚಾಮುಂಡೇಶ್ವರಿ ಮೂರ್ತಿಯನ್ನು ಚಾಮುಂಡಿ ತೊಟ್ಟಿಯಿಂದ ಕನ್ನಡಿ ತೊಟ್ಟಿಗೆ ತರಲಾಗುತ್ತದೆ. ಆ ಬಳಿಕ ಕೆಲ ಧಾರ್ಮಿಕ ಕಾರ್ಯ ನಡೆದ ನಂತರ ಮೊದಲ ದಿನದ ದರ್ಬಾರ್ ಉತ್ಸವ ಪೂರ್ಣಗೊಳ್ಳಲಿದೆ.

ಅ.9ರಂದು ಬೆಳಗ್ಗೆ 10.05ರಿಂದ 10.35ರವರೆಗೆ ಸರಸ್ವತಿ ಪೂಜೆ ನಡೆಯಲಿದೆ. ಈ ವೇಳೆ ಅರಮನೆಯಲ್ಲಿರುವ ಸಂಗೀತ ಪರಿಕರಗಳು, ಅಮೂಲ್ಯ ಕೃತಿ ಸೇರಿದಂತೆ ವಿವಿಧ ವಸ್ತುಗಳನ್ನು ಶಾಸ್ತ್ರೋಕ್ತವಾಗಿ ಪೂಜಿಸಲಾಗುತ್ತದೆ. ಅ.10ರಂದು ಸಂಜೆ ಖಾಸಗಿ ದರ್ಬಾರ್ ಮುಗಿದ ನಂತರ ಕನ್ನಡಿ ತೊಟ್ಟಿಯಲ್ಲಿ ಕಾಳರಾತ್ರಿ ಉತ್ಸವ ಜರುಗಲಿದೆ. ಅ.11ರಂದು ದುರ್ಗಾಷ್ಟಮಿ ಪೂಜಾ ಕೈಂಕರ್ಯದಲ್ಲಿ ರಾಜವಂಶಸ್ಥರು ಪಾಲ್ಗೊಳ್ಳಲಿದ್ದಾರೆ. ಅಂದು ಬೆಳಗ್ಗೆ 6 ಗಂಟೆಗೆ ಚಾಮುಂಡಿತೊಟ್ಟಿಯಲ್ಲಿ ಚಂಡಿ ಹೋಮ ಆರಂಭವಾಗಲಿದೆ. ಈ ವೇಳೆ ಆನೆ ಬಾಗಿಲ ಬಳಿ ಪಟ್ಟದ ಆನೆ, ಕುದುರೆ, ಪಟ್ಟದ ಹಸುವಿನ ಆಗಮನವಾಗಲಿದೆ. ಬೆಳಗ್ಗೆ 6.40ರಿಂದ 7.10ರವರೆಗೆ ಕಲ್ಯಾಣ ಮಂಟಪದಿಂದ ಆನೆ ಬಾಗಿಲಿನ ಮೂಲಕ ಆಯುಧವನ್ನು ಕೋಡಿ ಸೋಮೇಶ್ವರ ದೇವಾಲಯದ ಬಳಿ ಕೊಂಡೊಯ್ಯಲಾಗುತ್ತದೆ. 7.30ರಿಂದ 8 ಗಂಟೆವರೆಗೆ ಅವುಗಳನ್ನು ಕಲ್ಯಾಣ ಮಂಟಪಕ್ಕೆ ಅದನ್ನು ವಾಪಸ್ಸು ತರಲಾಗುತ್ತದೆ. ನಂತರ ಬೆಳಗ್ಗೆ 9.05ಕ್ಕೆ ಚಂಡಿ ಹೋಮದ ಪೂರ್ಣಾಹುತಿ ನಡೆಯಲಿದೆ. ಬೆಳಗ್ಗೆ 11.45ಕ್ಕೆ ಪಟ್ಟದ ಆನೆ, ಕುದುರೆ, ಪಟ್ಟದ ಹಸುವಿನೊಂದಿಗೆ ದೇವರನ್ನು ತರುವ ಕಾರ್ಯ ನಡೆಯಲಿದೆ. ಮಧ್ಯಾಹ್ನ 12.20ರಿಂದ 12.45ರವರೆಗೆ ಕಲ್ಯಾಣ ಮಂಟಪದ ಬಳಿ ಆಯುಧ ಪೂಜೆ ನೆರವೇರಲಿದೆ. ಸಂಜೆ ಖಾಸಗಿ ದರ್ಬಾರ್ ಪೂರ್ಣಗೊಂಡ ಬಳಿಕ ಸಿಂಹದ ತಲೆ ವಿಸರ್ಜನೆ ಮಾಡಲಾಗುತ್ತದೆ. ಬಳಿಕ ದಫ್ತರ್ ಪೂಜೆಯನ್ನು ಅಂಬಾವಿಲಾಸ ಅರಮನೆಯಲ್ಲಿ ನಡೆಸಲಾಗುತ್ತದೆ. ಬಳಿಕ ದೇವರ ದರ್ಶನ ಪಡೆಯಲಿದ್ದಾರೆ. ವಿಜಯ ದಶಮಿ ದಿನವಾದ ಅ.12ರಂದು ಬೆಳಗ್ಗೆ 9.45ಕ್ಕೆ ಪಟ್ಟದ ಆನೆ, ಕುದುರೆ, ಪಟ್ಟದ ಹಸುವಿನೊಂದಿಗೆ ದೇವರನ್ನು ತರುವ ಕಾರ್ಯ ನಡೆಯಲಿದೆ. 10.15ಕ್ಕೆ ಉತ್ತರ ಪೂಜೆ, 11.20ರಿಂದ 11.45ರವರೆಗೆ ವಿಜಯಯಾತ್ರೆ, ಶಮಿಪೂಜೆ ಹಾಗೂ ಇನ್ನಿತರ ಪೂಜಾ ಕಾರ್ಯಗಳು ಜರುಗಲಿದೆ. ಆ ಬಳಿಕ ನವರಾತ್ರಿ ಉತ್ಸವದಲ್ಲಿ ರಾಜವಂಶಸ್ಥರು ನಡೆಸುವ ಧಾರ್ಮಿಕ ಕಾರ್ಯ ಪೂರ್ಣಗೊಂಡಂತಾಗುತ್ತದೆ. ಬಳಿಕ ಜಂಬೂಸವಾರಿ ಮೆರವಣಿಗೆಗೆ ಚಾಲನೆ ದೊರೆಯಲಿದೆ.

ದಸರಾ ಮಹೋತ್ಸವಕ್ಕೆ ವ್ಯಾಪಕ ಭದ್ರತೆ

ಇಬ್ಬರು ಡಿಐಜಿ, 27 ಮಂದಿ ಎಸ್ಪಿ ಸೇರಿ 5000 ಪೊಲೀಸರ ನಿಯೋಜನೆ



ಮೈಸೂರಿನ ಲಿ ರುಚಿ ದ ಪ್ರಿನ್ಸ್ ಹೋಟೆಲು ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮೈಸೂರು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಮಾತನಾಡಿದರು. ಡಿಸಿಪಿಗಳಾದ ಎಂ.ಮುತ್ತುರಾಜ್ ಹಾಗೂ ಎಸ್.ಜಾಹ್ನವಿ ಉಪಸ್ಥಿತರಿದ್ದಾರೆ.

ಮೈಸೂರು,ಅ.1(ಆರ್‌ಕೆ)–ಅಕ್ಟೋಬರ್ 3ರಿಂದ 12ರವರೆಗೆ ನಡೆಯುವ ಮೈಸೂರು ದಸರಾ ಮಹೋತ್ಸವಕ್ಕೆ ವ್ಯಾಪಕ ಪೊಲೀಸ್ ಭದ್ರತಾ ವ್ಯವಸ್ಥೆ ಮಾಡಲಾಗಿದೆ ಎಂದು ಮೈಸೂರು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಲಿ ರುಚಿ ದ ಪ್ರಿನ್ಸ್ ಹೋಟೆಲು ಸಭಾಂಗಣದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, 9 ದಿನಗಳ ಕಾಲ ನಡೆಯಲಿರುವ ನವರಾತ್ರಿ ಉತ್ಸವದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಕಾನೂನು–ಸುವ್ಯವಸ್ಥೆ ಕಾಪಾಡುವುದು ಹಾಗೂ ಸುಗಮ ಸಂಚಾರ ದೃಷ್ಟಿಯಿಂದ ಪೊಲೀಸ್ ಇಲಾಖೆಯು ಸರ್ವ ರೀತಿಯಲ್ಲಿ ಬಂದೋಬಸ್ತ್ ಸಿದ್ಧತೆ ಮಾಡಿಕೊಂಡಿದೆ ಎಂದು ಹೇಳಿದರು.

ಇಬ್ಬರು ಡಿಐಜಿ, 27 ಎಸ್ಪಿ ಮಟ್ಟದ ಅಧಿಕಾರಿಗಳು, 989 ಅಡಿಷನಲ್ ಎಸ್ಪಿ, ಡಿವೈಎಸ್ಪಿ, ಇನ್ಸ್‌ಪೆಕ್ಟರ್‌ಗಳು, 3,981 ಸಿಬ್ಬಂದಿ ಸೇರಿ ಈ ಬಾರಿ 5000ಕ್ಕೂ ಹೆಚ್ಚು ಮಂದಿ ಪೊಲೀಸರನ್ನು ದಸರಾ ವಿಶೇಷ ಭದ್ರತೆಗಾಗಿ ನಿಯೋಜಿಸಲಾಗಿದೆ. ಸಿಎಆರ್ 10 ತುಕಡಿ, 33 ಕೆಎಸ್‌ಆರ್‌ಪಿ ಸೇರಿದಂತೆ 77 ತುಕಡಿಗಳನ್ನು ಬಳಸಿ ವಿಧ್ವಂಸಕ ಕೃತ್ಯ ಪತ್ತೆ, ನಿಷ್ಕ್ರಿಯಗೊಳಿಸಲು ಪೂರ್ವ ತಯಾರಿ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ದಸರಾ ವೇಳೆ ಅಕ್ಟೋಬರ್ 3ರಿಂದ 12ರವರೆಗೆ ದೇವರಾಜ ಅರಸು ರಸ್ತೆ, ಪುರಂದರ ರಸ್ತೆ, ಬಿ.ಎನ್. ರಸ್ತೆಯ ಗನ್ ಹೌಸ್ ವೃತ್ತದಿಂದ ಹಾರ್ಡಿಂಜ್ ಸರ್ಕಲ್‌ವರೆಗೆ ವಾಹನ ನಿಲುಗಡೆ ನಿಷೇದಿಸಲಾಗಿದೆ. ಅರಮನೆ ಸುತ್ತಲಿನ ರಸ್ತೆಗಳಲ್ಲಿ ಏಕಮುಖ ಸಂಚಾರ ವ್ಯವಸ್ಥೆ ಮಾಡಲಾಗಿದ್ದು, ರಸ್ತೆ ಬದಿಗಳಲ್ಲಿ ವಾಹನಗಳ ಪಾರ್ಕಿಂಗ್ ನಿಷೇಧಿಸಲಾಗಿದೆ.

ಸಾರ್ವಜನಿಕರ ಅನುಕೂಲಕ್ಕಾಗಿ ದಸರಾ ಕಾರ್ಯಕ್ರಮಗಳು ನಡೆಯುವ ಸ್ಥಳದ ಬಳಿಯೇ ವಾಹನ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಬೆಂಗಳೂರು ಕಡೆಯಿಂದ ಬರುವ ಸಾರಿಗೆ ಬಸ್‌ಗಳು ಸಾತಗಳ್ಳಿ ಬಸ್ ನಿಲ್ದಾಣದಲ್ಲಿ, ಹುಣಸೂರು, ಬೋಗಾದಿ, ಹೆಚ್.ಡಿ.ಕೋಟೆಗಳಿಂದ ಬರುವ ಬಸ್‌ಗಳು ಮಹಾರಾಜ ಕಾಲೇಜು ಮೈದಾನದಲ್ಲಿ, ನಂಜನಗೂಡು ಕಡೆಯಿಂದ ಬರುವ ವಾಹನಗಳು ಗುಂಡೂರಾವ್‌ನಗರ ಮೈದಾನದಲ್ಲಿ ಹಾಗೂ ಬನ್ನೂರು, ತಿ.ನರಸೀಪುರ ರಸ್ತೆಯಲ್ಲಿ ಬರುವ ಸಾರಿಗೆ ಬಸ್‌ಗಳು ಲಲಿತ ಮಹಲ್ ಮೈದಾನದಲ್ಲಿ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ.

ಮೊಬೈಲ್ ಕಮಾಂಡ್ ಸೆಂಟರ್, ಪೊಲೀಸ್ ಅಧಿಕಾರಿ, ಸಿಬ್ಬಂದಿಗಳಿಗೆ ಬಾಡಿವೋರ್ನ್ ಕ್ಯಾಮರಾ ಬಳಕೆ, ಸಂಚಾರ ನಿಯಂತ್ರಿಸಲು ಹೋಂ ಗಾರ್ಡ್‌ಗಳ ನಿಯೋಜನೆ, ಲಾಡ್ಜ್‌ಗಳಲ್ಲಿ ತಪಾಸಣೆ, ಬಸ್, ರೈಲ್ವೇ ನಿಲ್ದಾಣಗಳಲ್ಲಿ ದಿನದ 24 ಗಂಟೆ ಕ್ರೈಂ ಸಿಬ್ಬಂದಿಗಳ ಕರ್ತವ್ಯ, ವಾಹನಗಳ ಗಸ್ತು, ಕಾರ್ಯಕ್ರಮ ನಡೆಯುವ ಸ್ಥಳಗಳಲ್ಲಿ ಅಗ್ನಿಶಾಮಕ ದಳ, ಆಂಬುಲೆನ್ಸ್ ವ್ಯವಸ್ಥೆ ಮಾಡಲಾಗಿದೆ.

13,670 ಸಿಸಿಟಿವಿ ಕ್ಯಾಮರಾ ಕಣ್ಗಾವಲು, ಪೊಲೀಸ್ ಸಹಾಯ ಕೇಂದ್ರ, ಪ್ರಮುಖ ಸ್ಥಳಗಳಲ್ಲಿ ವಾಚ್ ಟವರ್ ಸ್ಥಾಪನೆ, ಪ್ರಮುಖ ರಸ್ತೆಗಳಲ್ಲಿ ಚೆಕ್‌ಪೋಸ್ಟ್ ಸ್ಥಾಪಿಸಿ ವಾಹನಗಳ ತಪಾಸಣೆ, ಮಫ್ತಿಯಲ್ಲಿ ಪೊಲೀಸರ ನಿಯೋಜನೆ, ಚಾಮುಂಡಿ ಕಾರ್ಯಪಡೆಯು ದಸರಾ ವೇಳೆ ಕರ್ತವ್ಯ ನಿರ್ವಹಿಸಲಿದ್ದು ಕಟ್ಟೆಚ್ಚರ ವಹಿಸಲಾಗುವುದು. ಸುದ್ದಿಗೋಷ್ಠಿಯಲ್ಲಿ ಡಿಸಿಪಿಗಳಾದ ಎಂ.ಮುತ್ತುರಾಜ್ ಹಾಗೂ ಎಸ್.ಜಾಹ್ನವಿ ಉಪಸ್ಥಿತರಿದ್ದರು.

ದಸರಾ ವಸ್ತುಪ್ರದರ್ಶನದಲ್ಲಿ ಮಳಿಗೆಗಳ ನಿರ್ಮಾಣ ಚುರುಕು

ಮೈಸೂರು, ಅ.1(ಎಂಕೆ)– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ–2024ಕ್ಕೆ ಕ್ಷಣಗಣನೆ ಆರಂಭವಾಗಿದ್ದು, ದಸರಾ ವಸ್ತಪ್ರದರ್ಶನ ಆವರಣದಲ್ಲಿ ಸರ್ಕಾರಿ ಹಾಗೂ ಖಾಸಗಿ ಮಳಿಗೆಗಳ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ.

ಈಗಾಗಲೇ 30ಕ್ಕೂ ಹೆಚ್ಚು ಸರ್ಕಾರಿ ಮಳಿಗೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, ಉದ್ಘಾಟನೆಯ ದಿನದಂದು ನಾಲ್ಕೈದು ಮಳಿಗೆಗಳು ಮಾತ್ರವೇ ಉದ್ಘಾಟನೆಯಾಗುವ ಸಾಧ್ಯತೆ ಇದೆ. ಪ್ರವಾಸೋದ್ಯಮ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಲಿಡ್ಕರ್ ಹಾಗೂ ಮೈಸೂರು ಸಂಸ್ಥಾನದ ಹಳೆ ಅರಮನೆ ಮಾದರಿಯ ಮಳಿಗೆಗಳ ನಿರ್ಮಾಣ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿವೆ.

ಈ ವೇಳೆ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಈ ವರ್ಷ ದಸರಾ ವಸ್ತುಪ್ರದರ್ಶನದಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು.

ಮಹಿಷ ಮಂಡಲೋತ್ಸವದಂದು ಯಾವುದೇ ಅಡಚಣೆ ಇಲ್ಲದೆ ಮಹಿಷಾಸುರನಿಗೆ ಪುಷ್ಪಾರ್ಚನೆ

ಚಾಮುಂಡಿಬೆಟ್ಟದಲ್ಲಿ ನಿಷೇಧಾಜ್ಞೆಯಿಂದ 2 ಕೋಟಿ ರೂ. ನಷ್ಟ

ಮೈಸೂರು,ಅ.1(ಜಿಎ)–ಮಹಿಷ ಮಂಡಲೋತ್ಸವದ ದಿನದಂದು ಯಾವುದೇ ಅಡಚಣೆ ಇಲ್ಲದೆ ಮಹಿಷಾಸುರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲಾಗಿದ್ದು, ಸಂತಸ ತಂದಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪುರಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಚಾಮರಾಜನಗರದಿಂದ ಬೀದರ್‌ವರೆಗಿನ ಜನ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು. ಆದರೆ, ಪುಷ್ಪಾರ್ಚನೆಗೆಂದು ಬೆಟ್ಟಕ್ಕೆ ಹೋದಾಗ ಎಲ್ಲೆಲ್ಲಿಯೂ ಪೊಲೀಸರೇ ಕಾಣುತ್ತಿದ್ದರು. ಬೆಟ್ಟ ನಿರ್ಜನವಾಗಿತ್ತು. ಈ ರೀತಿ ಮಾಡಲು ನಾವೇನು ಭಯೋತ್ಪಾದಕರೇ, ಅಂದು ರಾತ್ರಿ ಸುಮಾರು 7.15ರ ವೇಳೆಗೆ ನಮ್ಮದೇ ಕಾರಿನಲ್ಲಿ ಬೆಟ್ಟಕ್ಕೆ ಹೋಗಿ ಕತ್ತಲೆ ನಡುವೆ ಪುಷ್ಪಾರ್ಚನೆ ಮಾಡಬೇಕಾದ ಪರಿಸ್ಥಿತಿ ಇದ್ದುದು ಬೇಸರದ ಸಂಗತಿ ಎಂದರು.

ಪ್ರೊ.ಕೆ.ಎಸ್.ಭಗವಾನ್ ಆಕ್ಷೇಪಾರ್ಹ ಹೇಳಿಕೆ ನೀಡಿಲ್ಲ



ಪುರುಷೋತ್ತಮ್

ಈ ಬಾರಿಯ ಮಹಿಷ ಮಂಡಲೋತ್ಸವ ವೇಳೆ ಚಾಮುಂಡಿ ಬೆಟ್ಟದಲ್ಲಿನ ಮಹಿಷ ಪ್ರತಿಮೆಗೆ ಪುಷ್ಪಾರ್ಚನೆಗೆ ಅವಕಾಶ ನೀಡದಿದ್ದರೆ ದಸರಾಕ್ಕೆ ಅಡ್ಡಿಪಡಿಸುತ್ತೇವೆ ಎಂದು ಹೇಳಿದ್ದು ನಿಜ. ಆದರೆ ಪುಷ್ಪಾರ್ಚನೆಗೆ ಅವಕಾಶ ನೀಡಿದುದು ಸಂತಸ ತಂದಿದೆ ಎಂದು ತಿಳಿಸಿದರು.

ಅಂದು ಚಾಮುಂಡಿಬೆಟ್ಟದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಸುಮಾರು ಎರಡು ಕೋಟಿ ನಷ್ಟವಾಗಿದ್ದು, ವ್ಯಾಪಾರಿಗಳು, ಪ್ರವಾಸಿಗರಿಗೆ ಸಮಸ್ಯೆಯಾಗಿದೆ. ಈ ರೀತಿ ನಿರ್ಬಂಧ ವಿಧಿಸಬೇಕಾದ ಅಗತ್ಯವಿರಲಿಲ್ಲ. ಚಾಮುಂಡಿ ಬೆಟ್ಟದಲ್ಲಿ ದಸರಾ ಉದ್ಘಾಟನೆಗೊಳ್ಳುವ ದಿನದಂದೇ ಸಿಎಂ ಬೆಟ್ಟದಲ್ಲಿನ ಮಹಿಷನ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಹೊಸ ಸಂಪ್ರದಾಯ ಹುಟ್ಟುಹಾಕಲಿ ಎಂದು ಪುರುಷೋತ್ತಮ್ ಮನವಿ ಮಾಡಿದರು.

ಪುರಭವನದಲ್ಲಿ ನಡೆದ ಮಹಿಷ ಮಂಡಲೋತ್ಸವ ಕಾರ್ಯಕ್ರಮದಲ್ಲಿ ಪ್ರೊ.ಕೆ.ಎಸ್. ಭಗವಾನ್ ಆಕ್ಷೇಪಾರ್ಹವಾಗಿ ಮಾತನಾಡಿಲ್ಲ. ಅವರು ಸತ್ಯ ಇರುವ ಧರ್ಮ ಗೌರವಿಸಿ ಎಂದು ಹೇಳಿದ್ದಾರಷ್ಟೇ. ಹಿಂದೂ ಧರ್ಮ ಬಿಟ್ಟು ಬನ್ನಿ ಎಂದಿಲ್ಲ. ಹೀಗಿದ್ದರೂ ಅವರ ತೇಜೋವಧೆ ಸರಿಯಲ್ಲ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಲೋಕೇಶ್, ನಾರಾಯಣಸ್ವಾಮಿ ಆಲನಹಳ್ಳಿ ಉಪಸ್ಥಿತರಿದ್ದರು.

ನಾಳೆಯಿಂದ ಆಹಾರ ಮೇಳದಲ್ಲಿ ಬೊಂಬು ಬಿರಿಯಾನಿ ಸೇರಿದಂತೆ ಬುಡಕಟ್ಟು ಆಹಾರ ಲಭ್ಯ

ಮೈಸೂರು, ಅ.1(ಜಿಎ)–ಪ್ರಕೃತಿ ಆದಿವಾಸಿ ಫೌಂಡೇಷನ್ ವತಿಯಿಂದ ದಸರಾ ಆಹಾರ ಮೇಳದಲ್ಲಿ ಅ.3ರಿಂದ 10ರವರೆಗೆ ಬೊಂಬು ಬಿರಿಯಾನಿ ಸೇರಿದಂತೆ ಇತರೆ ಬುಡಕಟ್ಟು ಆಹಾರ ಲಭ್ಯವಿರಲಿದ್ದು, ಎಂದಿನಂತೆ ನಗರದ ಜನತೆ ಮಾತ್ರವಲ್ಲ, ಪ್ರವಾಸಿಗರು ಭೇಟಿ ನೀಡಿ ಅದರ ಸವಿಯನ್ನು ಸವಿಯಬೇಕೆಂದು ಅಧ್ಯಕ್ಷ ಎಂ.ಕೃಷ್ಣಯ್ಯ ಮನವಿ ಮಾಡಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬುಡಕಟ್ಟು ಕುಟೀರದಲ್ಲಿ ಬೊಂಬು ಬಿರಿಯಾನಿ–200 ರೂ, ನಾಟಿ ಕೋಳಿ ಬೊಂಬು ಬಿರಿಯಾನಿ–250 ರೂ., ಮಟನ್ ಬಿರಿಯಾನಿ–300 ರೂ., ಮಾಕಳಿ ಬೇರಿನ ಟೀ–20 ರೂ., ಕಾಡುಗೆಣಸು ಜೇನು ತುಪ್ಪ ಮಿಶ್ರಣ–50 ರೂ., ನಳ್ಳಿ ಸಾರು ಮುದ್ದೆ– 150 ರೂ., ವಿವಿಧ ಕಾಡು ಸೊಪ್ಪುಗಳ ಪಲ್ಯ–50 ರೂ., ಬಿದರಕ್ಕಿ ಪಾಯಸ– 50 ರೂ.ಗೆ ದೊರೆಯಲಿವೆ. ಮಟನ್ ಬೊಂಬು ಬಿರಿಯಾನಿ ಈ ಬಾರಿಯ ವಿಶೇಷವಾಗಿದೆ ಎಂದರು.

ಕಾಡು ನೆಲ್ಲಿಕಾಯಿ, ವಿವಿಧ ಬಗೆಯ ಕಾಡು ಸೊಪ್ಪುಗಳಾದ ಆಲೆಸೊಪ್ಪು, ಮಾಡಲೇ ಸೊಪ್ಪು, ತುಂಬೆ ಸೊಪ್ಪು, ಅಣ್ಣೇ ಸೊಪ್ಪು, ಇಂಡಿ ಸೊಪ್ಪು ಮೊದಲಾದವುಗಳು ಸೊಪ್ಪಿನ ಪಲ್ಯ ಮಾಡಲಾಗುತ್ತದೆ. ಈ ವೇಳೆ ಕುಟೀರದಲ್ಲಿ ಕೊಡಗು ಜಿಲ್ಲೆ ಜಾನಪದ ಅಕಾಡೆಮಿ ಪುರಸ್ಕೃತರು ಹಾಗೂ ಗಿಡ ಮೂಲಿಕೆ ತಜ್ಞರಾದ ನಾಗಮ್ಮ ಅವರು ಗಿಡ ಮೂಲಿಕೆಗಳ ಬಗ್ಗೆ ಮಾಹಿತಿ, ಸಲಹೆ ನೀಡಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಬೊಮ್ಮ, ಸಂಜಯ್, ಸುಬ್ರಮಣ್ಯ ಉಪಸ್ಥಿತರಿದ್ದರು.

ಮಾವುತರು, ಕಾವಾಡಿಗರ ಕುಟುಂಬದ ಮಹಿಳೆಯರಿಗೆ ಬಾಗಿನ ಸಮರ್ಪಣೆ



ಮಾವುತರು, ಕಾವಾಡಿಗಳ ಕುಟುಂಬದ ಮಹಿಳೆಯರಿಗೆ ಬಾಗಿನ ಕೊಡಲಾಯಿತು.

ಮೈಸೂರು,ಅ.1–ಎಲ್ಲರನ್ನೂ ಒಗ್ಗೂಡಿಸಿ ಸೌಹಾರ್ದ ಮತ್ತು ಆರೋಗ್ಯಕರ ಸಮಾಜ ನಿರ್ಮಿಸಲು ದಸರಾ ಮಹೋತ್ಸವ ಸಹಕಾರಿಯಾಗಲಿದೆ. ಆ ಮೂಲಕ ಸಂಸ್ಕೃತಿ, ಬದುಕಿನ ಸಂದೇಶವನ್ನು ಎಲ್ಲರಿಗೂ ತಲುಪಿಸುವುದೇ ಈ ಉತ್ಸವದ ಉದ್ದೇಶ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಹೇಳಿದರು.

ದಸರಾ ಗಜಪಡೆಗಳೊಂದಿಗೆ ಆಗಮಿಸಿರುವ ಮಾವುತರು ಮತ್ತು ಕಾವಾಡಿಗಳ ಕುಟುಂಬದ ಮಹಿಳೆಯರಿಗೆ ಅರಮನೆ ಆವರಣದಲ್ಲಿ ಅರಿಶಿನ ಕುಂಕುಮ, ವೀಳ್ಯೆದೆಲೆ, ಬಾಳೆಹಣ್ಣು, ಹಾಗೂ ತೆಂಗಿನ ಕಾಯಿ, ಸೀರೆ ವಿತರಿಸುವ ಮೂಲಕ ಬಾಗಿನ ವಿತರಿಸಿ ಅವರು ಮಾತನಾಡಿದರು.

ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಸಮಾಜ ಸೇವಕ ಡಾ.ಎಂ.ಶಾಂತ ರಾಮಕೃಷ್ಣ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ನಾಗಮಣಿ, ದರ್ಶನ್, ರೇಣುಕಾ ಹೊರಕೇರಿ, ಸವಿತಾ ಘಾಟ್ಕೆ, ಸಂತೋಷ್ ಕಿರಾಳು, ಶಾರದಾ ಇನ್ನಿತರರಿದ್ದರು.

ದಸರಾ ಗಜಪಡೆ, ಅಶ್ವಪಡೆಗೆ ಅಂತಿಮ ಸುತ್ತಿನ ಕುಶಾಲತೋಪು ತಾಲೀಮು ಯಶಸ್ವಿ

ಹಿಂದೆ ಸರಿದ ಹಿರಣ್ಯ, ಫಿರಂಗಿಯತ್ತ ಮುನ್ನುಗ್ಗಿದ ಗಜಪಡೆ



ದಸರಾ ವಸ್ತುಪ್ರದರ್ಶನದ ಆವರಣದಲ್ಲಿರುವ ವಾಹನ ನಿಲುಗಡೆ ಸ್ಥಳದಲ್ಲಿ ದಸರಾ ಗಜಪಡೆ, ಅಶ್ವಪಡೆಗೆ ಅಂತಿಮ ಹಂತದ ಸಿಡಿಮದ್ದು ತಾಲೀಮು ನಡೆಸಲಾಯಿತು.

ಮೈಸೂರು,ಅ.1(ಎಂಟಿವೈ)–ದಸರಾ ಗಜಪಡೆ ಹಾಗೂ ಜಂಬೂಸವಾರಿಯಲ್ಲಿ ಪಾಲ್ಗೊಳ್ಳುವ ಅಶ್ವಪಡೆಗೆ ಮಂಗಳವಾರ ಅಂತಿಮ ಹಂತದ ಕುಶಾಲತೋಪು ಸಿಡಿಸುವ ತಾಲೀಮು ಯಶಸ್ವಿಯಾಗಿ ನಡೆಯಿತು.

ಹಿರಣ್ಯ ಆನೆ ಹೊರತುಪಡಿಸಿ ಉಳಿದ 12 ಆನೆ ಹಾಗೂ ಕುದುರೆಗಳು ಸಿಡಿಮದ್ದು ಶಬ್ದಕ್ಕೆ ಹಿಮ್ಮೆಟ್ಟದೆ ತಾಲೀಮಿನಲ್ಲಿ ಪಾಲ್ಗೊಂಡವು. ಪ್ರತಿ ವರ್ಷದಂತೆ ಈ ಬಾರಿಯೂ 3 ಬಾರಿ ಸಿಡಿಮದ್ದು ಸಿಡಿಸುವ ತಾಲೀಮು ನಡೆಸಲಾಗಿದ್ದು, ಅಂತಿಮ ಹಂತದ ತಾಲೀಮಿನಲ್ಲಿ ಗಜಪಡೆ ಸಿಡಿಮದ್ದಿನ ಭಾರಿ ಶಬ್ದಕ್ಕೆ ಬೆದರದೆ ಧೈರ್ಯದಿಂದ ನಿಲ್ಲುವ ಮೂಲಕ ವಿಶ್ವಾಸ ಮೂಡಿಸಿದವು.

ದಸರಾ ವಸ್ತುಪ್ರದರ್ಶನದ ಆವರಣದಲ್ಲಿರುವ ವಾಹನ ನಿಲುಗಡೆ ಸ್ಥಳದಲ್ಲಿ ಮಂಗಳವಾರ ಬೆಳಗ್ಗೆ ನಡೆಸಿದ ಮೂರನೇ ಹಾಗೂ ಅಂತಿಮ ಹಂತದ ತಾಲೀಮಿನಲ್ಲಿ ಗಜಪಡೆಯ 14 ಆನೆಗಳಲ್ಲಿ ಹಿರಿಯ ಆನೆ ವರಲಕ್ಷ್ಮೀಯನ್ನು ಹೊರತುಪಡಿಸಿ, ಉಳಿದ 13 ಆನೆಗಳು ಹಾಗೂ ಅಶ್ವಪಡೆಯ 38 ಕುದುರೆಗಳು ಪಾಲ್ಗೊಂಡಿದ್ದವು.

ಎರಡೆಜ್ಜೆ ಹಿಂದೆ ಸರಿದ ಹಿರಣ್ಯ: ದಸರಾ ಮಹೋತ್ಸವಕ್ಕೆ ಎರಡನೇ ಬಾರಿ ಆಗಮಿಸಿರುವ ಬಂಡೀಪುರದ ರಾಂಪುರ ಕ್ಯಾಂಪ್‌ನ ಹಿರಣ್ಯ ಆನೆ ಮೊದಲ ಹಾಗೂ ಎರಡನೇ ಸುತ್ತಿನ ಸಿಡಿಮದ್ದು ಸಿಡಿತದ ತಾಲೀಮಿನಲ್ಲಿ ಹೆದರಿತ್ತು. ಆನೆ ಸಾಲಿನಿಂದ ಬೇರ್ಪಟ್ಟು ಪರದಾಡಿತ್ತು. ಮಾವುತ, ಕಾವಾಡಿ ಹಾಗೂ ಇತರೆ ಆನೆಗಳ ಕಾವಾಡಿಗಳು ಹಿರಣ್ಯ ಆನೆಯನ್ನು ನಿಯಂತ್ರಿಸಿ, ಹತೋಟಿಗೆ ತಂದಿದ್ದರು. ಆದರೆ, ಇಂದು ನಡೆದ ಅಂತಿಮ ಹಂತದ ತಾಲೀಮಿನಲ್ಲಿ ಮೊದಲು ಪಟಾಕಿ ಸಿಡಿಸಿದ್ದಕ್ಕೆ ಸ್ವಲ್ಪ ಗಾಬರಿಗೊಂಡಿತು.

ಇದನ್ನು ಗಮನಿಸಿದ ಅರಣ್ಯಾಧಿಕಾರಿಗಳು ಹಿರಣ್ಯ ಆನೆಯನ್ನು ಆನೆಗಳ ಸಾಲಿನಿಂದ ಬೇರ್ಪಡಿಸಿ ಹಿಂದೆ ನಿಲ್ಲಿಸುವಂತೆ ಸೂಚನೆ ನೀಡಿದರು. ಈ ವೇಳೆ ಸಿಡಿಮದ್ದು ಸಿಡಿತ ಆರಂಭವಾಗುತ್ತಿದ್ದಂತೆ ಮತ್ತೆ ಗಾಬರಿಯಾಗಿ ಹಿಂದೆ ಸರಿಯಿತು. ಈ ವೇಳೆ ಕೆಲ ಕಾವಾಡಿಗಳು ಹಿರಣ್ಯಳನ್ನು ಸುತ್ತುವರಿದು, ಅದರ ಭಾಷೆಯಲ್ಲಿಯೇ ಮೈ ಸವರುತ್ತಾ ಸಮಾಧಾನ ಮಾಡಿದರು. ಬಳಿಕ ಎರಡು ಮತ್ತು ಮೂರನೇ ಸುತ್ತಿನ ಸಿಡಿಮದ್ದು ಸಿಡಿತದ ವೇಳೆಗೆ ಸಂಪೂರ್ಣವಾಗಿ ಸಮಾಧಾನಗೊಂಡು ಸುಮ್ಮನೆ ನಿಲ್ಲುವ ಮೂಲಕ ಧೈರ್ಯ ತೋರಿತು.

ಮತ್ತೆ ಮುನ್ನುಗ್ಗಿದವು: ಎರಡನೇ ಸುತ್ತಿನ ಸಿಡಿಮದ್ದು ಸಿಡಿಯುತ್ತಿದ್ದಂತೆಯೇ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಇತರೆ ಆನೆಗಳು ತಂಡದ ನಾಯಕನೊಂದಿಗೆ ಫಿರಂಗಿಯತ್ತ ಮುನ್ನುಗ್ಗುತ್ತಾ ಬಂದವು. ಮೂರನೇ ಸುತ್ತಿನ ಸಿಡಿಮದ್ದು ಸಿಡಿತವಿರುವ ಮಾಹಿತಿ ನೀಡಿ ಆನೆಗಳನ್ನು ನಿಲ್ಲಿಸುವಂತೆ ಹೇಳಿದರು. ಆದರೆ, ಮೂರನೆ ಸುತ್ತಿನ ಸಿಡಿಮದ್ದು ಸಿಡಿತ ಆರಂಭಿಸುತ್ತಿದ್ದಂತೆಯೇ ಮತ್ತೆ ಫಿರಂಗಿಯತ್ತ ಬಂದ ಗಜಪಡೆ ಎಲ್ಲರ ಗಮನ ಸೆಳೆದವು.

ಫಿರಂಗಿ ದಳದ ಚಾಕಚಕ್ಯತೆ: ಎಂದಿನಂತೆ ಸಿಡಿಮದ್ದು ಸಿಡಿತಕ್ಕಾಗಿ ನಿಯೋಜನೆಗೊಂಡಿರುವ ಸಿಬ್ಬಂದಿಗಳ ತಂಡ 7 ಫಿರಂಗಿ ಬಳಸಿ, ಚಾಕಚಕ್ಯತೆಯಿಂದ ಸಿಡಿಮದ್ದು ಸಿಡಿಸಿ ಗಮನ ಸೆಳೆದರು.

ಈ ಸಂದರ್ಭದಲ್ಲಿ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ, ಹುಲಿ ಯೋಜನೆ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್, ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಡಿಸಿಪಿ ಎಂ.ಮುತ್ತುರಾಜ್, ಮೌಂಟೆಡ್ ಕಮಾಂಡೆಂಟ್ ವಿ.ಶೈಲೇಂದ್ರ, ಎಸಿಪಿಗಳಾದ ಶಾಂತಮಲ್ಲಪ್ಪ, ಸತೀಶ್, ಅರಮನೆ ಭದ್ರತಾ ವಿಭಾಗದ ಎಸಿಪಿ ಚಂದ್ರಶೇಖರ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯರಾದ ಡಾ.ಮುಜೀಬ್ ರೆಹಮಾನ್, ಡಾ.ಮಿರ್ಜಾ ವಾಸಿಂ, ಸಹಾಯಕರಾದ ರಂಗರಾಜು, ಅಕ್ರಂ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

> ಕುಶಾಲತೋಪಿನ ಅಂತಿಮ ತಾಲೀಮು ಯಶಸ್ವಿಯಾಗಿ ನಡೆದಿದೆ. ಜಂಬೂಸವಾರಿ ಮೆರವಣಿಗೆ ದಿನ ಆನೆ, ಕುದುರೆಗಳು ಸಿಡಿಮದ್ದು ಶಬ್ದಕ್ಕೆ ಹೆದರಂತೆ ಸಜ್ಜುಗೊಳಿಸಲು ಪ್ರತಿ ವರ್ಷ ಮೂರು ಬಾರಿ ಸಿಡಿಮದ್ದು ನಡೆಸಲಾಗುತ್ತದೆ. ಇಂದು ನಡೆದ ಫೈನಲ್ ತಾಲೀಮಿನಲ್ಲಿ ಆನೆ, ಕುದುರೆಗಳ ವರ್ತನೆಯಲ್ಲಿ ಯಾವುದೇ ಬದಲಾವಣೆ ಕಾಣಲಿಲ್ಲ.
>
> –ಸೀಮಾ ಲಾಟ್ಕರ್, ಆಯುಕ್ತರು, ಪೊಲೀಸ್ ಇಲಾಖೆ

> ಇಂದು ನಡೆದ ಮೂರನೇ ಸಿಡಿಮದ್ದು ತಾಲೀಮಿನಲ್ಲಿ ಎಲ್ಲಾ 13 ಆನೆಗಳು ಪಾಲ್ಗೊಂಡಿದ್ದವು. ಈಗಾಗಲೇ ಜಂಬೂಸವಾರಿಗೆ ಗಜಪಡೆಯನ್ನು ಸಜ್ಜುಗೊಳಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ವಿವಿಧ ಹಂತದ ತಾಲೀಮು ನಡೆಸಲಾಗಿದೆ. ಜಂಬೂಸವಾರಿಗೂ ಎರಡು ದಿನ ಮುನ್ನ ಮತ್ತೊಂದು ತಾಲೀಮು ನಡೆಯುವ ಸಾಧ್ಯತೆಯೂ ಇದೆ. ನಿಶಾನೆ ಹಾಗೂ ನೌಪತ್ ಆನೆ ಯಾವುದು ಎಂದು 4–5 ದಿನದಲ್ಲಿ ಪ್ರಕಟಿಸುತ್ತೇವೆ.
>
> –ಡಾ.ಮಾಲತಿ ಪ್ರಿಯಾ, ಸಿಎಫ್, ಮೈಸೂರು ವೃತ್ತ

> ಎಲ್ಲಾ ಆನೆಗಳು ಫಿಟ್ ಆಗಿವೆ. ಮೂರನೇ ತಾಲೀಮಿನಲ್ಲಿ ಯಾವ ಆನೆಯೂ ಭಯಪಟ್ಟುಕೊಂಡಿಲ್ಲ. ಏಕಾಏಕಿ ಶಬ್ದ ಬಂದರೆ ಜನರು ಬೆಚ್ಚುವಂತೆ ಆನೆಗಳು ಸಿಡಿಮದ್ದು ಶಬ್ದಕ್ಕೆ ಆರಂಭದಲ್ಲಿ ಬೆಚ್ಚಿದವು. ತದ ನಂತರ ಸುಧಾರಿಸಿಕೊಂಡು, ಸಿಡಿಮದ್ದು ಸಿಡಿಯುತ್ತಿದ್ದರೂ ಪಿರಂಗಿಯತ್ತ ಬರುತ್ತಿದ್ದವು. ನಾವೆ ಆನೆಗಳನ್ನು ತಡೆದು ನಿಲ್ಲಿಸುವಂತಾಯಿತು. ಜಂಜೂಸವಾರಿಗೆ ಎಲ್ಲಾ ಆನೆಗಳು ಸಮರ್ಥವಾಗಿ ಸಜ್ಜಾಗಿವೆ. –ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್, ವನ್ಯಜೀವಿ ವಿಭಾಗ

ಅ.4ರಿಂದ ಶ್ರೀರಂಗಪಟ್ಟಣ ದಸರಾ

ನಟ ಶಿವರಾಜ್‌ಕುಮಾರ್‌ರಿಂದ ಉದ್ಘಾಟನೆ, ಜಿಲ್ಲಾಡಳಿತದಿಂದ ಅಧಿಕೃತ ಆಹ್ವಾನ

ಫಿಟ್ ಇಂಡಿಯಾ ಮ್ಯಾರಥಾನ್, ಜಂಬೂಸವಾರಿ, ವಾಸುಕಿ ವೈಭವ್ ಸಂಗೀತ, ವಿಜಯ ಪ್ರಕಾಶ್‌ರ ಸಂಗೀತ ಸಂಜೆ, ರ್‍ಯಾಪ್ ಸಿಂಗರ್ ಸಂಗೀತ, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಸಂಗೀತ ಸಂಜೆ ಕಾರ್ಯಕ್ರಮ

ಮಂಡ್ಯ,ಅ.1– ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಅಕ್ಟೋಬರ್ 4ರಿಂದ 7ರವರೆಗೆ ನಾಡಹಬ್ಬ ಮೈಸೂರು ದಸರಾದ ಮೂಲ ಶ್ರೀರಂಗಪಟ್ಟಣ ದಸರಾವನ್ನು ಆಯೋಜಿಸಲಾಗಿದೆ. ಈ ಬಾರಿಯ ದಸರಾಗೆ ಕನ್ನಡ ಚಿತ್ರರಂಗದ ಖ್ಯಾತ ನಟ ಡಾ.ಶಿವರಾಜ್‌ಕುಮಾರ್ ಚಾಲನೆ ನೀಡಲಿದ್ದು, ಜಿಲ್ಲಾಡಳಿತ ಅವರ ನಿವಾಸಕ್ಕೆ ತೆರಳಿ ಅಧಿಕೃತವಾಗಿ ಆಹ್ವಾನಿಸಲಾಯಿತು.

ಬೆಂಗಳೂರಿನ ನಾಗರಬಾವಿಯಲ್ಲಿರುವ ನಟ ಶಿವರಾಜ್‌ಕುಮಾರ್ ನಿವಾಸಕ್ಕೆ ಶಾಸಕ ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪಂಚಾಯತ್ ಸಿಇಓ ಶೇಕ್ ತನ್ವೀರ್ ಆಸೀಫ್ ಹಾಗೂ ಇನ್ನಿತರೆ ಅಧಿಕಾರಿಗಳು ತೆರಳಿ ಮೈಸೂರು ಪೇಟ ತೊಡಿಸಿ, ಫಲತಾಂಬೂಲ ಹಾಗೂ ಸಿಹಿ ನೀಡಿ, ಆಹ್ವಾನ ಪತ್ರಿಕೆ ಕೊಟ್ಟು ಅಧಿಕೃತವಾಗಿ ಆಹ್ವಾನಿಸಿದರು.

ಅಕ್ಟೋಬರ್ 4ರಂದು ಮಧ್ಯಾಹ್ನ 12.30 ಗಂಟೆಗೆ ನಂದಿ ಧ್ವಜ ಪೂಜೆ ನೆರವೇರಿಸಲಾಗುವುದು. ಮಧ್ಯಾಹ್ನ 2.30ರಿಂದ 3 ಗಂಟೆಯವರೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಗೆ ಅಗ್ರಪೂಜೆ ಹಾಗೂ ಜಂಬೂಸವಾರಿ ಮೆರವಣಿಗೆಗೆ ನಟ ಡಾ.ಶಿವರಾಜ್‌ಕುಮಾರ್ ಅವರು ಚಾಲನೆ ನೀಡಲಿದ್ದಾರೆ.

ಅಕ್ಟೋಬರ್ 4ರಂದು ಸಂಜೆ 6ಗಂಟೆಗೆ ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣದ ಶ್ರೀರಂಗ ವೇದಿಕೆಯಲ್ಲಿ ಶ್ರೀರಂಗಪಟ್ಟಣ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭ ಜರುಗಲಿದೆ. ಕಾರ್ಯಕ್ರಮದಲ್ಲಿ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಗೌರವ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಶಾಸಕ ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಚಿವರಾದ ಡಾ. ಹೆಚ್.ಸಿ.ಮಹದೇವಪ್ಪ, ಕೆ.ಜೆ.ಜಾರ್ಜ್, ಕೃಷ್ಣ ಭೈರೇಗೌಡ, ಹೆಚ್.ಕೆ.ಪಾಟೀಲ್, ಸತೀಶ್ ಜಾರಕಿಹೊಳಿ, ದಿನೇಶ್ ಗುಂಡೂರಾವ್, ಶಿವರಾಜ್ ಸಂಗಪ್ಪ ತಂಗಡಗಿ, ಡಾ. ಶರಣಪ್ರಕಾಶ ರುದ್ರಪ್ಪ ಪಾಟೀಲ್, ಶಾಸಕರಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಕೆ.ವಿವೇಕಾನಂದ ಪಿ.ರವಿಕುಮಾರ್ ಗಣಿಗ, ಪಿ.ಎಂ.ನರೇಂದ್ರಸ್ವಾಮಿ, ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ.ಮಂಜು, ಕೆ.ಎಂ.ಉದಯ್‌ಗೌಡ, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಕಿರಂಗೂರು ಗ್ರಾ.ಪಂ. ಅಧ್ಯಕ್ಷೆ ಹೆಚ್.ಪಿ.ಶೃತಿ ಭಾಗವಹಿಸಲಿದ್ದಾರೆ.

ಶ್ರೀರಂಗಪಟ್ಟಣ ದಸರಾ ಮಹೋತ್ಸವದ ಕಾರ್ಯಕ್ರಮಗಳ ವಿವರ: ಅಕ್ಟೋಬರ್ 4ರಂದು ಬೆಳಿಗ್ಗೆ 7ಗಂಟೆಗೆ ತಾಲೂಕು ಕ್ರೀಡಾಂಗಣದಲ್ಲಿ ಫಿಟ್ ಇಂಡಿಯಾ ಮ್ಯಾರಥಾನ್ ಸ್ಪರ್ಧೆ ನಡೆಯಲಿದೆ. ಮಧ್ಯಾಹ್ನ 2.30ಕ್ಕೆ ಕಿರಂಗೂರು ಬನ್ನಿಮಂಟಪದಲ್ಲಿ ಜಂಬೂಸವಾರಿ ನಡೆಯಲಿದೆ. ಸಂಜೆ 6 ರಂಗನಾಥಸ್ವಾಮಿ ದೇವಾಲಯದ ಆವರಣದ ಶ್ರೀರಂಗ ವೇದಿಕೆಯಲ್ಲಿ ದಸರಾ ಉದ್ಘಾಟನಾ ಸಮಾರಂಭ ನಡೆಯಲಿದೆ. ಸಂಜೆ 7ಗಂಟೆಗೆ ಖ್ಯಾತ ಗಾಯಕ ವಾಸುಕಿ ವೈಭವ್ ಮತ್ತು ತಂಡದಿಂದ ಸಂಗೀತ ರಸಸಂಜೆ ಕಾರ್ಯಕ್ರಮ ನಡೆಯಲಿದೆ.

ಅ.5ರಂದು ಬೆಳಿಗ್ಗೆ 7ಗಂಟೆಗೆ ಕರಿಘಟ್ಟ ದೇವಸ್ಥಾನದ ಪಾದದಿಂದ ದೇವಸ್ಥಾನದ ಮೇಲ್ಭಾಗದವರೆಗೆ ಬೆಟ್ಟ ಹತ್ತುವ ಸ್ಪರ್ಧೆ (ಚಾರಣ) ಏರ್ಪಡಿಸಲಾಗಿದೆ. ಬೆಳಿಗ್ಗೆ 10 ರಿಂದ 12.30 ರವರೆಗೆ ಗಂಜಾಂನ ಶ್ರೀದೇವಿ ಚಿತ್ರಮಂದಿರ, ಬಾಬುರಾಯನಕೊಪ್ಪಲಿನ ಭಾರತಿ ಚಿತ್ರಮಂದಿರ ಹಾಗೂ ಅರಕೆರೆಯ ಮಂಜುನಾಥ ಚಿತ್ರಮಂದಿರಗಳಲ್ಲಿ ಸಿನಿಮೋತ್ಸವ ನಡೆಯಲಿದೆ. ಮಧ್ಯಾಹ್ನ 2ಗಂಟೆಗೆ ಶ್ರೀರಂಗ ವೇದಿಕೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಕವಿಗೋಷ್ಠಿ ನಡೆಯಲಿದೆ. ಮಧ್ಯಾಹ್ನ 3 ಗಂಟೆಗೆ ಸ್ಥಳೀಯ ಕಲಾತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಸಂಜೆ 7ಗಂಟೆಗೆ ಖ್ಯಾತ ಹಿನ್ನೆಲೆ ಗಾಯಕ ವಿಜಯ್ ಪ್ರಕಾಶ್ ಮತ್ತು ತಂಡದಿಂದ ಸಂಗೀತ ರಸಸಂಜೆ ಕಾರ್ಯಕ್ರಮ ನಡೆಯಲಿದೆ.

ಅ.6ರಂದು ಬೆಳಿಗ್ಗೆ 6ಗಂಟೆಗೆ ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣದ ಶ್ರೀರಂಗ ವೇದಿಕೆಯಲ್ಲಿ ಸಾಮೂಹಿಕ ಸೂರ್ಯ ನಮಸ್ಕಾರ ನಡೆಯಲಿದೆ. ಬೆಳಿಗ್ಗೆ 10 ಗಂಟೆಗೆ ಶ್ರೀರಂಗಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಹಗ್ಗ ಜಗ್ಗಾಟ ನಡೆಯಲಿದೆ. ಬೆಳಿಗ್ಗೆ 10 ಗಂಟೆಯಿಂದ 12.30ರವರೆಗೆ ಶ್ರೀರಂಗಪಟ್ಟಣ ಮತ್ತು ಅರಕೆರೆಯ ಚಿತ್ರಮಂದಿರಗಳಲ್ಲಿ ಸಿನಿಮೋತ್ಸವ ನಡೆಯಲಿದ್ದು, ಮಧ್ಯಾಹ್ನ 2ಗಂಟೆಗೆ ಶ್ರೀರಂಗ ವೇದಿಕೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ವಿಚಾರಗೋಷ್ಠಿ ನಡೆಯಲಿದೆ. ಮಧ್ಯಾಹ್ನ 3 ಗಂಟೆಗೆ ಸ್ಥಳೀಯ ಕಲಾತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಸಂಜೆ 7ಗಂಟೆಗೆ ರ್‍ಯಾಪ್ ಸಿಂಗರ್ ಆಲ್‌ಓಕೆ ಮತ್ತು ತಂಡ ಹಾಗೂ ರಾತ್ರಿ 9ಗಂಟೆಗೆ ಹಿನ್ನೆಲೆ ಗಾಯಕರಾದ ಲಗೋರಿ ಮತ್ತು ತಂಡದಿಂದ ಸಂಗೀತ ರಸಸಂಜೆ ಕಾರ್ಯಕ್ರಮ ನಡೆಯಲಿದೆ.

ಅ.7 ರಂದು ಬೆಳಿಗ್ಗೆ 10 ಗಂಟೆಯಿಂದ 12.30ಗಂಟೆಯವರೆಗೆ ಶ್ರೀರಂಗಪಟ್ಟಣ ಮತ್ತು ಅರಕೆರೆಯ ಚಿತ್ರಮಂದಿರಗಳಲ್ಲಿ ಸಿನಿಮೋತ್ಸವ, ಮಧ್ಯಾಹ್ನ 3ಗಂಟೆಗೆ ಶ್ರೀರಂಗಪಟ್ಟಣ ತಾಲೂಕು ಕ್ರೀಡಾಂಗಣದಲ್ಲಿ ಕುಸ್ತಿ ಪಂದ್ಯ ನಡೆಯಲಿದೆ. ಮಧ್ಯಾಹ್ನ 3ಗಂಟೆಗೆ ವೇದಿಕೆಯಲ್ಲಿ ಸ್ಥಳೀಯ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಸಂಜೆ 7ಗಂಟೆಗೆ ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣದ ಶ್ರೀರಂಗ ವೇದಿಕೆಯಲ್ಲಿ ಸಮಾರೋಪ ಸಮಾರಂಭ ಕಾರ್ಯಕ್ರಮ ನಡೆಯಲಿದ್ದು, ರಾತ್ರಿ 8 ಗಂಟೆಗೆ ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಮತ್ತು ತಂಡದಿಂದ ಸಂಗೀತ ರಸಸಂಜೆ ಕಾರ್ಯಕ್ರಮ ನಡೆಯಲಿದೆ ಎಂದು ಜಿಲ್ಲಾಡಳಿತ ತನ್ನ ಪ್ರಕಟಣೆ ಮೂಲಕ ತಿಳಿಸಿದೆ.



ಶ್ರೀರಂಗಪಟ್ಟಣದ ದಸರಾ ಮಹೋತ್ಸವದ ಉದ್ಘಾಟಕರಾಗಿ ಆಯ್ಕೆಯಾಗಿರುವ ಕನ್ನಡ ಚಿತ್ರರಂಗದ ಖ್ಯಾತ ನಟ ಡಾ.ಶಿವರಾಜ್‌ಕುಮಾರ್ ಅವರನ್ನು ಅವರ ನಿವಾಸದಲ್ಲಿ ಭೇಟಿಯಾಗಿ ಅಧಿಕೃತವಾಗಿ ಆಹ್ವಾನಿಸಲಾಯಿತು.

ಮನೆ ಬೀಗ ಮುರಿದು ನಗ ನಾಣ್ಯ ಲೂಟಿ



ಹಲಗೂರು, ಅ.1– ಮನೆಯೊಂದರ ಬೀಗ ಮುರಿದು ಭಾರೀ ಪ್ರಮಾಣದ ನಗ ನಾಣ್ಯ ದೋಚಿರುವ ಘಟನೆಯೊಂದು ಸಮೀಪದ ಬೆನಮನಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ನಿವಾಸಿ ಬಿ.ಪಿ.ರವಿ ಅವರ ಮನೆಯಲ್ಲಿ ಈ ಘಟನೆ ಸಂಭವಿಸಿದ್ದು ಈ ವೇಳೆ ಮನೆಯಲ್ಲಿ ಯಾರೂ ಇರಲಿಲ್ಲ. ಹಲಗೂರು ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಬೆನಮನಹಳ್ಳಿ ಗ್ರಾಮದ ರವಿ ಅವರು ಮನೆಗೆ ಬೀಗ ಹಾಕಿ ಊರಿಗೆ ತೆರಳಿದ್ದರು. ಈ ವೇಳೆ ಕಳ್ಳರು ಮನೆಯ ಬೀಗ ಮುರಿದು ಬೀರುವಿನಲ್ಲಿ ಇಟ್ಟಿದ್ದ 80 ಸಾವಿರ ರೂ ಮತ್ತು ಪೆಟ್ಟಿಗೆಯಲ್ಲಿದ್ದ 52 ಸಾವಿರ ರೂಪಾಯಿ ನಗದು ಹಾಗೂ 6.5 ಲಕ್ಷ ರೂ.ಗೂ ಹೆಚ್ಚು ಬೆಲೆ ಬಾಳುವ ಚಿನ್ನ ದೋಚಿ ಪರಾರಿಯಾಗಿದ್ದಾರೆ. ಮನೆಯವರು ಊರಿನಿಂದ ಹಿಂತಿರುಗಿ ಬಂದ ನಂತರ ಈ ಪ್ರಕರಣ ಬೆಳಕಿಗೆ ಬಂದಿದ್ದು ಹಲಗೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ವೇಳೆ ಡಿವೈಎಸ್ಪಿ ಕೃಷ್ಣಪ್ಪ, ಸಿಪಿಐ ಶ್ರೀಧರ್, ಪಿಎಸ್‌ಐ ಮಹೇಂದ್ರರವರು ಸ್ಥಳಕ್ಕೆ ಭೇಟಿ ನೀಡಿ, ಸ್ಥಳ ಪರಿಶೀಲಿಸಿದರು.

ಈ ಬಾರಿ ಸಾಹಿತ್ಯೇತರರು ಸಮ್ಮೇಳನಾಧ್ಯಕ್ಷರಾಗಲಿ



ಮಂಡ್ಯ,ಅ.1–ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ಸಾಹಿತ್ಯೇತರರೂ ಸಹ ಸಮ್ಮೇಳನಾಧ್ಯಕ್ಷರಾಗಬಹುದು ಎಂದು ಬೇಬಿ ಮಠ ಮತ್ತು ಚಂದ್ರವನ ಆಶ್ರಮದ ಪೀಠಾಧಿಪತಿ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮಿಗಳು ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಮಂಗಳವಾರ ಆಯೋಜಿಸಲಾಗಿದ್ದ ವಾರದ ಸಾಹಿತ್ಯ ಅತಿಥಿ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಾಹಿತ್ಯೇತರರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುವ ಸಂಬಂಧ ಚರ್ಚೆ ನಡೆಯುತ್ತಿದೆ. ಕನ್ನಡಿಗರೇ ಆದ ವಿವಿಧ ಕ್ಷೇತ್ರಗಳಲ್ಲಿ ಮುತ್ಸದ್ದಿಗಳಿದ್ದು, ದೇವೇಗೌಡರು ರಾಜಕೀಯ ಮುತ್ಸದ್ದಿಗಳಾಗಿದ್ದು, ಅನುಭವ ಅನುಭಾವ ಸ್ಥಿತಿಯ ಬಗ್ಗೆ 12ನೇ ಶತಮಾನದ ಮಾತೊಂದಿದ್ದು, ಮಾಜಿ ಪ್ರಧಾನಿಗಳಾದ ದೇವೇಗೌಡರು ಹಾಗೂ ಜಿಲ್ಲೆಯವರೇ ಆದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಸೇರಿದಂತೆ ಅನೇಕ ಪೂಜ್ಯರು ಅನುಭಾವ ಸ್ಥಿತಿಯಲ್ಲಿದ್ದಾರೆ ಎಂದರು. ಅನೇಕರು ಶಿಕ್ಷಣ, ದಾಸೋಹ, ಅನೇಕ ಗ್ರಂಥಗಳ ಕೊಡುಗೆ ನೀಡಿದ್ದು, ಜಾಚಾಮಿ ನೂರಾರು ಪುಸ್ತಕಗಳನ್ನು ಸಮಾಜಕ್ಕೆ ನೀಡಿದ್ದು, ಪುಷ್ಪಿನ ಷಡಾಕ್ಷರಿ ಅವರು ಸಾಹಿತ್ಯ ಕ್ಷೇತ್ರಕ್ಕೆ ಬಹಳ ಕೊಡುಗೆ ನೀಡಿದ್ದಾರೆ, ಆದಿಚುಂಚನಗಿರಿ ಮಠಾಧಿಪತಿಗಳು, ಸಾಹಿತ್ಯ, ಶೈಕ್ಷಣಿಕ, ದಾಸೋಹ, ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಕೊಡುಗೆ ನೀಡಿದ್ದು, ಈ ಹಾದಿಯಲ್ಲಿ ಸುತ್ತೂರು ಹಾಗೂ ಸಿದ್ದಗಂಗಾ, ಗದಗ, ಮೂರು ಸಾವಿರ ಮಠದ ಅನೇಕ ಪೂಜ್ಯರು ಇದ್ದಾರೆ ಎಂದು ಹೇಳಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಶಿಕ್ಷಣವನ್ನು ಮಠ ಮಾನ್ಯಗಳೇ ಪ್ರಾರಂಭಿಸಿದ್ದು, ಈ ಮಟ್ಟದ ಜ್ಞಾನ ಉತ್ಪತ್ತಿಯಾಗಲು ಮಠಗಳು ತೆರೆದ ಶಿಕ್ಷಣ ಶಾಲೆಗಳು ಕಾರಣ. ಸಂತರು ಬೇರೆ ಮಕ್ಕಳಿಗೆ ಶಿಕ್ಷಣ ಸೇರಿದಂತೆ ಹಲವು ವಿಧಗಳ ಅರಿವು ಮೂಡಿದ್ದಾರೆ. ಈ ನಿಟ್ಟಿನಲ್ಲಿ ಸಿದ್ದಗಂಗೆ, ಆದಿಚುಂಚನಗಿರಿ, ಸುತ್ತೂರು, ದುಂದುರ್ಡೇಶ್ವರ ಶ್ರೀಗಳು ಸೇರಿದಂತೆ ಅನೇಕ ಪೂಜ್ಯರು ಶಿಕ್ಷಣಕ್ಕೆ ಒತ್ತು ನೀಡದಿದ್ದರೆ ಇಂದು ಸಾಕಷ್ಟು ಕಷ್ಟ ಎದುರಿಸಬೇಕಾಗುತ್ತಿತ್ತು ಎಂದು ಅಭಿಪ್ರಾಯಪಟ್ಟರು.

ಅಖಿಲ ಭಾರತ ಸಾಹಿತ್ಯ ಸಮ್ಮೇಳನವನ್ನು ಪ್ರತಿಯೊಬ್ಬ ಕನ್ನಡಿಗನೂ ಆಚರಿಸಬೇಕಾದ ವಿಶೇಷವಾದ ಸಂಭ್ರಮ. ಸಮ್ಮೇಳನದಲ್ಲಿ ಜಾಗೃತಿ ಮೂಡಿಸುವ ಹಬ್ಬ ಆಗಬೇಕಿದ್ದು, ಲೋಪದೋಷಗಳನ್ನು ತಿದ್ದಿಕೊಳ್ಳಲು, ರಾಜ್ಯ ಸರ್ಕಾರಕ್ಕೆ ತನ್ನ ಜವಾಬ್ದಾರಿ ಗುರುತಿಸಲು, ಸಾಹಿತಿಗಳು, ಉದ್ಯಮಿಗಳ ಜವಾಬ್ದಾರಿ, ಕನ್ನಡಿಗರಿಗೆ ಉದ್ಯೋಗ ಒದಗಿಸಲು, ಕನ್ನಡ ಶಾಲೆ ಉಳಿಸಿಕೊಳ್ಳಲು, ಹೊಸ ಸಾಹಿತಿಗಳನ್ನು ಪ್ರೋತ್ಸಾಹಿಸುವುದು, ಕನ್ನಡಗಡಿ ಸಮಸ್ಯೆ ಬಗೆಹರಿಸಲು ಈ ನಿಟ್ಟಿನಲ್ಲಿ ಸಮ್ಮೇಳನ ನಡೆದು ಇತಿಹಾಸ ಸೃಷ್ಟಿಸುವಂತೆ ಮೂಡಿ ಬರಬೇಕು ಎಂದು ಸಲಹೆ ಕೊಟ್ಟರು.

ಸಾಹಿತ್ಯದಲ್ಲಿ ಆಸಕ್ತಿ ಇರುವ ಮಠಾಧೀಶರಾಗಲಿ, ರಾಜಕಾರಣಿಯಾಗಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡುವ ಪ್ರಯತ್ನವನ್ನು ಮಂಡ್ಯದಲ್ಲಿ ಯಾಕೆ ಮಾಡಬಾರದು, ಸಾಹಿತ್ಯದ ಜ್ಞಾನವಿರದಿದ್ದರೆ ಬೇಡ, ಸಾಹಿತ್ಯ ಜ್ಞಾನವಿದೆ, ಕನ್ನಡ ನಾಡಿನ ಬಗ್ಗೆ ಕಾಳಜಿಯಿದೆ, ಕನ್ನಡ ಭಾಷೆ ಬಗ್ಗೆ ಹೆಮ್ಮೆಯಿದೆ, ಕನ್ನಡ ಸಾಹಿತ್ಯ ಉಳಿಸಿ, ಬೆಳೆಸುವ ಸೇವಾ ಮನೋಭಾವವಿದೆ ಅಂತಹ ರಾಜಕಾರಣಿಗಳು ಹಾಗೂ ಮಠಾಧೀಶರನ್ನು ಆಯ್ಕೆ ಮಾಡಿ ಸಮ್ಮೇಳನಕ್ಕೆ ಮೆರುಗು ತರಬೇಕು ಎಂದರು.

ಪೋಷಣ್ ಅಭಿಯಾನ ಮಾಸಾಚರಣೆ



ಪೋಷಣ್ ಅಭಿಯಾನ ಮಾಸಾಚರಣೆಯಲ್ಲಿ ಗರ್ಭಿಣಿಯರಿಗೆ ಸೀಮಂತ ಮಾಡಲಾಯಿತು.

ಪಾಂಡವಪುರ, ಅ.1–ಮಕ್ಕಳಿಗೆ ಪೋಷಕಾಂಶಯುಕ್ತ ಆಹಾರ ನೀಡುವುದು ಪ್ರತಿಯೊಬ್ಬ ಪೋಷಕರ ಜವಾಬ್ದಾರಿಯಾಗಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಹೇಳಿದರು.

ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ತಾಲೂಕು ಆಡಳಿತ, ತಾಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಪಾಂಡವಪುರ ಇವರ ಸಹಯೋಗದಲ್ಲಿ ನಡೆದ ಪೋಷಣ್ ಅಭಿಯಾನ ಮಾಸಾಚರಣೆ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕೆ.ಆರ್.ಪೂರ್ಣಿಮಾ, ಪುರಸಭೆ ಅಧ್ಯಕ್ಷೆ ಜ್ಯೋತಿಲಕ್ಷ್ಮಿಬಾಬು ಮಾತನಾಡಿದರು.

ಇದೇವೇಳೆ ಗರ್ಭಿಣಿಯರಿಗೆ ಸೀಮಂತ ಮಾಡಲಾಯಿತು. ಪೌಷ್ಟಿಕ ಆಹಾರಗಳ ಸಪ್ತಾಹ ನಡೆಸಿದರು. ಕಾರ್ಯಕ್ರಮದಲ್ಲಿ ಪುರಸಭೆ ಉಪಾಧ್ಯಕ್ಷ ಎಲ್.ಅಶೋಕ್, ಮುಖ್ಯಾಧಿಕಾರಿ ಸತೀಶ್, ಆಡಳಿತ ವೈದ್ಯಾಧಿಕಾರಿ ಡಾ.ಸಿ.ಎ.ಅರವಿಂದ್, ಕಸಾಪ ಅಧ್ಯಕ್ಷ ಮೇನಾಗ್ರ ಪ್ರಕಾಶ್, ಮೇಲ್ವಿಚಾರಕಿಯರಾದ ಜಕಿಯ ಬಾನು, ಲಕ್ಷ್ಮೀದೇಶ ಪಾಂಡೆ, ಪೋಷಣ್ ಅಭಿಯಾನದ ತಾಲೂಕು ಸಂಯೋಜಕಿ ಅನುಷ, ಅಂಗನವಾಡಿ ಕಾರ್ಯಕರ್ತೆಯರಾದ ರುಕ್ಮಿಣಿ, ಮೇರಿ, ಶೋಭ, ಆರೋಗ್ಯ ಇಲಾಖೆ ಶಿವಮ್ಮ ಸೇರಿದಂತೆ ಕಸಬಾ, ಕೆರೆತೊಣ್ಣೂರು, ಬೆಳ್ಳಾಳೆ ವೃತ್ತದ ಅಂಗನವಾಡಿ ಕಾರ್ಯಕರ್ತೆಯರು ಹಾಜರಿದ್ದರು.

ಒಂದನೇ ಪುಟದಿಂದ

ರದ್ದತಿಗೆ ಮುಡಾ ಆಯುಕ್ತ ಆದೇಶ

ಜಿಲ್ಲಾ ವಿಶೇಷ ನೋಂದಣಿ ಕಚೇರಿಯ ಉಪ ನೋಂದಣಾಧಿಕಾರಿಗಳು ನಿವೇಶನಗಳ ಕ್ರಯಪತ್ರ ನೋಂದಣಿಯನ್ನು ರದ್ದುಪಡಿಸಬೇಕಾಗಿದೆ ಎಂದು ರಘುನಂದನ್ ತಿಳಿಸಿದರು.

ಸೇಲ್ ಡೀಡ್ ರದ್ದಾಗುತ್ತಿದ್ದಂತೆಯೇ ಈ ಹಿಂದೆ ಯಾರ ಹೆಸರಿನಲ್ಲಿದ್ದವೋ ಅವರ ಹೆಸರಿಗೆ ಸದರಿ ನಿವೇಶನಗಳು ಹೋಗುತ್ತವೆ. ಅಂದರೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಸ್ತಿಗಳಾಗಿ ಉಳಿಯುತ್ತವೆ.

ಸಾಮಾಜಿಕ ಕಾರ್ಯಕರ್ತರಾದ ಸ್ನೇಹಮಯಿ ಕೃಷ್ಣ ಹಾಗೂ ಅಬ್ರಹಾಂ ನೀಡಿದ್ದ ದೂರಿನನ್ವಯ ರಾಜ್ಯ ಹೈಕೋರ್ಟ್ ಮತ್ತು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಗಳಲ್ಲಿ ಸುದೀರ್ಘ ವಾದ–ಪ್ರತಿವಾದ ನಡೆದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಬಂಧಿಕರ ವಿರುದ್ಧ ತನಿಖೆ ನಡೆಸುವಂತೆ ಆದೇಶವಾಗಿದೆ.

ಅದರನ್ವಯ ನಾಲ್ವರ ವಿರುದ್ಧ ಕಳೆದ ಶುಕ್ರವಾರ ಲೋಕಾಯುಕ್ತ ಮೈಸೂರು ಎಸ್ಪಿ ಉದೇಶ್ ಅವರು ಪ್ರಕರಣ ದಾಖಲಿಸಿ, ತನಿಖೆ ಆರಂಭಿಸಿದ್ದರು.

ಅದರ ಬೆನ್ನಲ್ಲೇ ದೂರುದಾರ ಸ್ನೇಹಮಯಿ ಕೃಷ್ಣ ಅವರು ನಿನ್ನೆ(ಸೆ.30) ಬೆಂಗಳೂರಲ್ಲಿ ಜಾರಿ ನಿರ್ದೇಶನಾಲಯ (ED)ದ ಜಂಟಿ ನಿರ್ದೇಶಕರಿಗೆ ದೂರು ನೀಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಹೆಸರಿಗೆ ಅಕ್ರಮವಾಗಿ ಮಂಜೂರು ಮಾಡಿರುವ 14 ನಿವೇಶನ ಪ್ರಕರಣದ ತನಿಖೆ ನಡೆಸಬೇಕೆಂದು ಒತ್ತಾಯಿಸಿದ್ದರಲ್ಲದೆ, ಸಿಬಿಐ ತನಿಖೆ ನಡೆಸುವಂತೆಯೂ ಮನವಿ ಮಾಡಿಕೊಂಡಿದ್ದರು.

ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ.ಪಾರ್ವತಿ ಅವರು ತಮಗೆ ಮಂಜೂರಾಗಿರುವ 14 ನಿವೇಶನಗಳನ್ನು ವಾಪಸ್ ನೀಡುತ್ತಿರುವುದಾಗಿ ಸೋಮವಾರ ಸಂಜೆಯೇ ಮುಡಾ ಆಯುಕ್ತರಿಗೆ ಪತ್ರ ಬರೆದಿದ್ದರು. ಇಂದು ಬೆಳಿಗ್ಗೆ 9.30 ಗಂಟೆ ವೇಳೆಗೆ ಅವರ ಪುತ್ರ ಹಾಗೂ ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಸ್ವತಃ ಮುಡಾ ಕಚೇರಿಗೆ ಆಗಮಿಸಿ, ಆಯುಕ್ತ ಎ.ಎನ್.ರಘುನಂದನ್ ಅವರಿಗೆ ತಮ್ಮ ತಾಯಿ ಬಿ.ಎಂ. ಪಾರ್ವತಿ ಅವರು ಬರೆದ ಪತ್ರ ನೀಡಿ ಕಚೇರಿಯಿಂದ ಸ್ವೀಕೃತಿ ಪಡೆದಿದ್ದರು.

ಬೆಳಿಗ್ಗೆ ಪತ್ರ ತಲುಪುತ್ತಿದ್ದಂತೆಯೇ ಮುಡಾ ಕಾರ್ಯದರ್ಶಿ ಜಿ.ಡಿ.ಶೇಖರ್, ವಿಶೇಷ ತಹಶೀಲ್ದಾರ್ ರಾಜಶೇಖರ್ ಹಾಗೂ ಇತರ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಚರ್ಚಿಸಿದ ನಂತರ, ಸಂಜೆ ವೇಳೆಗೆ ಪಾರ್ವತಿ ಅವರ ಹೆಸರಿನಲ್ಲಿ ನೋಂದಣಿಯಾಗಿರುವ ಕ್ರಯಪತ್ರ ರದ್ದುಗೊಳಿಸಲು ಆದೇಶಿಸಿದ್ದಾರೆ.

ಸೇಲ್ ಡೀಡ್ ನೋಂದಣಿ ರದ್ದಾಗುತ್ತಿದ್ದಂತೆಯೇ ಪಾರ್ವತಿ ಅವರಿಗೆ ವಿಜಯನಗರ 3 ಮತ್ತು 4ನೇ ಹಂತದ ಬಡಾವಣೆಗಳಲ್ಲಿ 14 ನಿವೇಶನ ಮಂಜೂರು ಮಾಡಿದ್ದ ಈ ಹಿಂದಿನ ಮುಡಾ ಆಯುಕ್ತ ಡಾ. ಡಿ.ಬಿ.ನಟೇಶ್ ಅವರ ಅಧಿಕೃತ ಜ್ಞಾಪನ, ಮಂಜೂರಾತಿ ಪತ್ರಗಳು, ಸ್ವಾಧೀನ ಪತ್ರ, ಖಾತಾ–ಕಂದಾಯ ದಾಖಲೆಗಳೂ ರದ್ದಾಗಲಿವೆ ಎಂದು ಮುಡಾ ಮೂಲಗಳು ತಿಳಿಸಿವೆ.

ಮುಡಾ ಆಯುಕ್ತ ಆದೇಶದಂತೆ ಸಬ್ ರಿಜಿಸ್ಟ್ರಾರ್ ಈ ಹಿಂದೆ ಮಾಡಿದ್ದ 14 ನಿವೇಶನಗಳ ಕ್ರಯಪತ್ರ ನೋಂದಣಿ ರದ್ದುಗೊಳಿಸಬೇಕು. ಬಳಿಕ ಸದರಿ ಸ್ವತ್ತುಗಳು ಮೂಲ ಮುಡಾ ಹೆಸರಿಗೆ ಮಾಲೀಕತ್ವ ಹಸ್ತಾಂತರಗೊಳ್ಳಲಿದೆ. ಈ ಪ್ರಕ್ರಿಯೆ ಪೂರ್ಣಗೊಳ್ಳುತ್ತಿದ್ದಂತೆಯೇ ಎಲ್ಲಾ 14 ನಿವೇಶನಗಳ ಇಸಿಯಲ್ಲಿ 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ' ಎಂದು ನಮೂದಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶೇ.50:50ರ ಅನುಪಾತದಲ್ಲಿ ಹಂಚಿಕೆಯಾಗಿರುವ ಪ್ರಕರಣಗಳ ಸಂಬಂಧ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ದೇಸಾಯಿ ಅವರ ನೇತೃತ್ವದ ಆಯೋಗವು ತನಿಖೆ ನಡೆಸುತ್ತಿರುವುದರಿಂದ ವರದಿ ಬಂದ ನಂತರ ಉಳಿದ ನಿವೇಶನಗಳ ಸಂಬಂಧ ಅಗತ್ಯ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ತನಿಖೆ ಆರಂಭ

ನಾಲ್ಕು ಜೀಪು ಹಾಗೂ ಎರಡು ಕಾರುಗಳಲ್ಲಿ ಆಗಮಿಸಿದ್ದ 20ಕ್ಕೂ ಹೆಚ್ಚು ಲೋಕಾಯುಕ್ತ, ಸರ್ವೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸದರಿ ಪ್ರಕ್ರಿಯೆಯಲ್ಲಿ ತೊಡಗಿದ್ದರು. ಲೋಕಾಯುಕ್ತ ಎಸ್ಪಿ ಟಿ.ಜೆ. ಉದೇಶ್ ನೇತೃತ್ವದಲ್ಲಿ ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 3.30 ಗಂಟೆ ತನಕ ಮಹಜರು ನಡೆಸಲಾಯಿತು. ಸುಮಾರು ಆರೂವರೆ ಗಂಟೆಗಳ ಕಾಲ ಹಲವು ಮಾಹಿತಿಗಳನ್ನು ಕಲೆ ಹಾಕಲಾಯಿತು.

ಭೂ ದಾಖಲೆ ಇಲಾಖೆಯ ಸಹಾಯಕ ನಿರ್ದೇಶಕ ಮಂಜುನಾಥ್ ಸೇರಿದಂತೆ ಮುಡಾ ಅಧಿಕಾರಿಗಳು ಮಹಜರು ವೇಳೆ ಹಾಜರಿದ್ದರು. ಸರ್ವೆ ಮಾಡಲು ಬಳಸುವ ಕಬ್ಬಿಣದ ಚೈನ್ ಹಿಡಿದು ಸರ್ವೆ ನಂಬರ್ 464 ರಲ್ಲಿ ಸರ್ವೇ ಆರಂಭಿಸಿದರು. ನಕ್ಷೆ ಹಾಗೂ ಚೆಕ್ಕು ಬಂಧಿಗಳನ್ನು ತಮ್ಮ ದಾಖಲೆಯಲ್ಲಿ ಉಲ್ಲೇಖಿಸಿದರು. ಅಂತಿಮವಾಗಿ ಮಹಜರು ಮುಗಿದ ನಂತರ ಸ್ನೇಹಮಯಿ ಕೃಷ್ಣ ಅವರಿಂದ ಸಹಿ ಪಡೆದರು. ಇದು ಮುಖ್ಯಮಂತ್ರಿಗಳ ಮೇಲಿನ ಆರೋಪವಾಗಿರುವ ಕಾರಣ ಯಾವುದೇ ಲೋಪವಾಗದಂತೆ ವಿವರವಾದ ಮಹಜರು ನಡೆಸಿದರು.

ಲೋಕಾಯುಕ್ತರು ತನಿಖೆ ನಡೆಸಿ ವರದಿಯನ್ನು ನೇರವಾಗಿ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ನೀಡಬೇಕಾದ ಕಾರಣ ತಮ್ಮಿಂದ ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸಿದ್ದಾರೆ.

ಮಹಜರು ನಂತರ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಸ್ನೇಹಮಯಿ ಕೃಷ್ಣ, ಕೆಸರೆ ಗ್ರಾಮದ ಸರ್ವೆ ನಂಬರ್ 464 ರಲ್ಲಿನ 3.16 ಎಕರೆ ಭೂಮಿಯಲ್ಲಿ ಮುಡಾ ಬಡಾವಣೆ ನಿರ್ಮಿಸಿ, ನಿವೇಶನಗಳಾಗಿ ಪರಿವರ್ತಿಸಿತ್ತು ಹಾಗಾಗಿ ಈ ಭೂಮಿ ಮುಡಾ ಸ್ವತ್ತಾಗಿತ್ತು. ಆದರೆ, ಇದು ಕೃಷಿ ಭೂಮಿ ಎಂದು ಸುಳ್ಳು ದಾಖಲೆ ಸೃಷ್ಟಿಸಿದ್ದಾರೆ. ಹಾಗಾಗಿ ದೂರು ಆಧರಿಸಿ ಇಂದು ಮಹಜರು ನಡೆಸಲಾಗಿದೆ ಎಂದು ತಿಳಿಸಿದರು.

ನೋಟಿಸ್ ಕೊಟ್ಟಿದ್ದರು: ನೋಟಿಸ್ ನೀಡಿ ವಿಚಾರಣೆಗೆ ಬರುವಂತೆ ಸೂಚನೆ ನೀಡಿದ್ದರು. ಹಾಗಾಗಿ ಬಂದಿದ್ದೇನೆ. ಈಗಾಗಲೇ ಅಗತ್ಯ ದಾಖಲೆ ನೀಡಿದ್ದು, ಏನೇ ಮಾಹಿತಿ ಕೇಳಿದರೂ ಒದಗಿಸುತ್ತೇನೆ ಎಂದು ಹೇಳಿದರು.

ಪಾರ್ವತಿ ಅವರಿಗೆ ದಾನವಾಗಿ ಬಂದಿದೆ ಎಂದು ಹೇಳಲಾದ ಭೂಮಿ ಯಲ್ಲಿ ಈಗ ಸರ್ವೆ ಮಾಡಲಾಗಿದೆ. ನಾಡಿದ್ದು (ಅಕ್ಟೋಬರ್ 3) ಪಾರ್ವತಿ ಅವರಿಗೆ ಮಂಜೂರಾದ 14 ನಿವೇಶನಗಳ ಮಹಜರು ಕೂಡ ಮಾಡಲಾಗುವುದು ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ. ಆ ವೇಳೆ ನಾನು ಕೂಡ ಹಾಜರಿದ್ದು, ಅಗತ್ಯ ಮಾಹಿತಿ ನೀಡುತ್ತೇನೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದರು.

ಕೆಸರೆ ಗ್ರಾಮದ ಸರ್ವೆ ನಂಬರ್ ಲೋಕಾಯುಕ್ತ ಅಧಿಕಾರಿಗಳು ತಾಲೂಕು ಕಚೇರಿಗೆ ತೆರಳಿ ಸರ್ವೆ ನಂಬರ್ 464 ರ ಭೂಮಿಗೆ ಸಂಬಂಧಿಸಿದಂತೆ ಹಲವು ದಾಖಲೆಗಳನ್ನು ಸಂಗ್ರಹಿಸಿದರು.

ಹೆಡಿಗ್ಗೊಂಡ ರಾಜ್ಯ ಸಂಗೀತ ವಿದ್ವಾನ್

ಪುತ್ರನಾದ ಪಂಡಿತ್ ಬಸವರಾಜ ಭಜಂತ್ರಿ ಅವರು 1953ರ ಮೇ 1ರಂದು ಜನಿಸಿದವರು. ಸುಷಿರ ವಾದ್ಯ ಶಹನಾಯ್ ಅನ್ನು ಬಾಲ್ಯದಿಂದಲೂ ನುಡಿಸುತ್ತಾ, ಕಲೆಗಾಗಿ ಜೀವನವನ್ನೇ ಮುಡಿಪಾಗಿಟ್ಟ ಅಪರೂಪದ ಸಾಧಕರು. ಸಂಗೀತ ಪರಂಪರೆ ಮನೆತನದಲ್ಲಿ ತಂದೆ ಮತ್ತು ತಾತ ಶಹನಾಯ್ ವಾದಕರಾಗಿದ್ದರಿಂದ ಚಿಕ್ಕಂದಿನಿಂದಲೇ ಭಜಂತ್ರಿ ಅವರು ಸಂಗೀತದ ಸೆಳೆತಕ್ಕೊಳಗಾಗಿದ್ದರು. ಆಕಾಶವಾಣಿ ಮತ್ತು ದೂರದರ್ಶನದ 'ಎ' ಶ್ರೇಣಿ ಕಲಾವಿದರಾದ ಶ್ರೀಯುತರು, ದೇಶದ ವಿವಿಧ ರಾಜ್ಯಗಳಲ್ಲಿ ತಮ್ಮ ಶಹನಾಯ್ ನಿನಾದವನ್ನು ಧ್ವನಿಸಿದ್ದು, ಅವರ ಸಂಗೀತ ಕಛೇರಿಗಳಿಗೆ ಪಂ. ರಘುನಾಥ್ ನಾಕೋಡ್, ಪಂ. ವಿಶ್ವನಾಥ್ ನಾಕೋಡ, ಪಂ. ರವೀಂದ್ರ ಯಾವಗಲ್, ಪಂ. ಶಾಂತಲಿಂಗ ಕಲ್ಲೂರಕರ್ ಅವರಂತಹ ಖ್ಯಾತನಾಮರ ಪಕ್ಕ ವಾದ್ಯದಲ್ಲಿ ಸಾಥ್ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು. 1993ರಲ್ಲಿ ನವದೆಹಲಿಯ ಆಕಾಶವಾಣಿ ಆಯೋಜಿಸಿದ್ದ 'ರಾಷ್ಟ್ರೀಯ ಸಂಗೀತ ಹಬ್ಬ', 2016ರಲ್ಲಿ ನವದೆಹಲಿಯಲ್ಲಿ ನಡೆದ 'ವಿಶ್ವ ಸಂಗೀತ ಸಮ್ಮೇಳನ'ದಲ್ಲೂ ಅವರು ಭಾಗವಹಿಸಿ ಕಾರ್ಯಕ್ರಮ ನೀಡಿದ್ದರು. ಕರ್ನಾಟಕ ರಾಜ್ಯೋತ್ಸವ ಸೇರಿದಂತೆ ಹಲವು ಪ್ರಶಸ್ತಿಗಳು ಪಂಡಿತ್ ಬಸವರಾಜ ಭಜಂತ್ರಿ ಅವರಿಗೆ ಸಂದಿವೆ.

ಬಾಂಗ್ಲಾ ವಿರುದ್ಧದ ಟೆಸ್ಟ್ ಸರಣಿ ಕ್ಲೀನ್‌ಸ್ವೀಪ್ ಮಾಡಿದ ಭಾರತ



ಕಾನ್ಪುರ, ಅ.1– ಬೌಲರ್‌ಗಳ ಮಾರಕ ದಾಳಿ ಹಾಗೂ ಯಶಸ್ವಿ ಜೈಸ್ವಾಲ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಬಾಂಗ್ಲಾದೇಶ ವಿರುದ್ಧ ಭಾರತ 7 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿದೆ. ಆ ಮೂಲಕ ಎರಡು ಪಂದ್ಯಗಳ ಟೆಸ್ಟ್ ಸರಣಿಯನ್ನು 2–0 ಅಂತರದಲ್ಲಿ ರೋಹಿತ್ ಶರ್ಮಾ ಪಡೆ ಕ್ಲೀನ್ ಸ್ವೀಪ್ ಮಾಡಿದೆ.

ಮಳೆ ಕಾರಣ ಪಂದ್ಯದ ಮೊದಲ ದಿನದಾಟದಲ್ಲಿ ಕೇವಲ 35 ಓವರ್‌ಗಳ ಆಟ ಮಾತ್ರವೇ ಮೂಡಿಬಂದಿತ್ತು. ಬಳಿಕ ಮಳೆ ಮತ್ತು ಹಾಳಾದ ಔಟ್‌ಫೀಲ್ಡ್ ಕಾರಣ 2ನೇ ಮತ್ತು 3ನೇ ದಿನದಾಟ ಸಂಪೂರ್ಣ ರದ್ದಾಗಿತ್ತು. ಹೀಗಿರುವಾಗ ಅಂತಿಮ 2 ದಿನದಾಟಗಳಲ್ಲಿ ಪಂದ್ಯ ಡ್ರಾ ಫಲಿತಾಂಶ ಕಾಣಬಹುದು ಎಂದೇ ಕ್ರಿಕೆಟ್ ಪರಿಣತರು ಅಂದಾಜಿಸಿದ್ದರು. ಆದರೆ, ಭಾರತ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ನೀಡುವ ಮೂಲಕ ಪಂದ್ಯ ಗೆದ್ದು ಇತಿಹಾಸ ನಿರ್ಮಿಸಿದೆ.

ಚೆನ್ನೈನಲ್ಲಿ ನಡೆದ ಮೊದಲ ಪಂದ್ಯದಲ್ಲಿ 280 ರನ್ ಅಂತರದಲ್ಲಿ ಜಯಿಸಿದ್ದ ಭಾರತ, ಇದೀಗ ಕಾನ್ಪುರ ಟೆಸ್ಟ್ ಪಂದ್ಯದಲ್ಲಿ ಮಳೆ ಹೊರತಾಗಿಯೂ 7 ವಿಕೆಟ್ ಅಂತರದ ಸುಲಭ ಜಯ ದಾಖಲಿಸುವ ಮೂಲಕ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಂಕಪಟ್ಟಿಯಲ್ಲಿ 12 ಅಂಕಗಳನ್ನು ತನ್ನ ಬುಟ್ಟಿಗೆ ಹಾಕಿಕೊಂಡಿದೆ.

ಇಲ್ಲಿನ ಗ್ರೀನ್ ಪಾರ್ಕ್ ಸ್ಟೇಡಿಯಂನಲ್ಲಿ ನಡೆದ ಎರಡನೇ ಪಂದ್ಯದಲ್ಲಿ ಗೆಲ್ಲಲು ಕೇವಲ 95 ರನ್‌ಗಳ ಸಾಧಾರಣ ಗುರಿ ಪಡೆದ ಭಾರತ ಆರಂಭದಲ್ಲೇ 8 ರನ್ ಗಳಿಸಿದ್ದ ನಾಯಕ ರೋಹಿತ್ ಶರ್ಮಾ ವಿಕೆಟ್ ಕಳೆದುಕೊಂಡಿತು. ಇನ್ನು ಶುಭ್‌ಮನ್ ಗಿಲ್ ಕೂಡಾ ಕೇವಲ 6 ರನ್ ಗಳಿಸಿ ಮೆಹದಿ ಹಸನ್‌ಗೆ ವಿಕೆಟ್ ಒಪ್ಪಿಸಿದರು. ಬಳಿಕ ಜತೆಯಾದ ವಿರಾಟ್ ಕೊಹ್ಲಿ ಹಾಗೂ ಯಶಸ್ವಿ ಜೈಸ್ವಾಲ್ ತಂಡವನ್ನು ಗೆಲುವಿನ ಸಮೀಪ ಕೊಂಡೊಯ್ದರು. ಜೈಸ್ವಾಲ್ 45 ಎಸೆತಗಳಲ್ಲಿ 8 ಬೌಂಡರಿ, 1 ಸಿಕ್ಸರ್ ಸಹಿತ 51 ರನ್ ಬಾರಿಸಿ ತೈಜುಲ್ ಇಸ್ಲಾಂಗೆ ವಿಕೆಟ್ ಒಪ್ಪಿಸಿದರು. ಇನ್ನು ಮತ್ತೊಂದು ತುದಿಯಲ್ಲಿ ಜವಾಬ್ದಾರಿಯುತ ಬ್ಯಾಟಿಂಗ್ ನಡೆಸಿದ ವಿರಾಟ್ ಕೊಹ್ಲಿ 37 ಎಸೆತಗಳನ್ನು ಎದುರಿಸಿ ಅಜೇಯ 29 ರನ್ ಬಾರಿಸುವ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು. ಅಂತಿಮವಾಗಿ ಭಾರತ ದ್ವಿತೀಯ ಇನ್ನಿಂಗ್ಸ್‌ನಲ್ಲಿ 3 ವಿಕೆಟ್ ನಷ್ಟಕ್ಕೆ 98 ರನ್ ಗಳಿಸುವ ಮೂಲಕ ಜಯ ಸಾಧಿಸಿತು.

ಇದಕ್ಕೂ ಮೊದಲು 2 ವಿಕೆಟ್ ನಷ್ಟಕ್ಕೆ 27 ರನ್‌ಗಳೊಂದಿಗೆ 5ನೇ ದಿನದಾಟ ಆರಂಭಿಸಿದ ಬಾಂಗ್ಲಾದೇಶಕ್ಕೆ ರವಿಚಂದ್ರನ್ ಅಶ್ವಿನ್ ಆರಂಭದಲ್ಲೇ ಶಾಕ್ ಕೊಟ್ಟರು. ಇದಾದ ಬಳಿಕ ಮುಷ್ಫಿಕುರ್ ರಹೀಂ (37) ಹಾಗೂ ಶದ್ಮನ್ ಇಸ್ಲಾಂ(50) ಕೊಂಚ ಪ್ರತಿರೋಧ ತೋರಿದರು. ಆದರೆ ಜಡೇಜಾ ಹಾಗೂ ಬುಮ್ರಾ ತಲಾ 3 ವಿಕೆಟ್ ಕಬಳಿಸುವ ಮೂಲಕ ಬಾಂಗ್ಲಾದೇಶವನ್ನು 146 ರನ್‌ಗಳಿಗೆ ಕಟ್ಟಿಹಾಕುವಲ್ಲಿ ಯಶಸ್ವಿಯಾದರು. ಜಸ್‌ಪ್ರೀತ್ ಬೂಮ್ರಾ (17ಕ್ಕೆ3), ಆರ್. ಅಶ್ವಿನ್ (50ಕ್ಕೆ3) ಮತ್ತು ರವೀಂದ್ರ ಜಡೇಜ (34ಕ್ಕೆ3) ದಾಳಿಯ ಮುಂದೆ ಬಾಂಗ್ಲಾದ ಹೋರಾಟ ನಡೆಯಲಿಲ್ಲ. ಭಾರತದ ಪರ ರವಿಚಂದ್ರನ್ ಅಶ್ವಿನ್ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದರೇ, ಯಶಸ್ವಿ ಜೈಸ್ವಾಲ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಮುತ್ತಯ್ಯ ಮುರಳೀಧರನ್ ದಾಖಲೆ ಸರಿಗಟ್ಟಿದ ಅಶ್ವಿನ್



ಚೆನ್ನೈ, ಅ.1– ಭಾರತದ ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಮುತ್ತಯ್ಯ ಮುರಳೀಧರನ್ ಅವರ ಟೆಸ್ಟ್ ವಿಶ್ವ ದಾಖಲೆಯನ್ನು ಸರಿಗಟ್ಟಿದ್ದಾರೆ.

ಕಾನ್ಪುರದಲ್ಲಿ ನಡೆದ ಎರಡನೇ ಮತ್ತು ಅಂತಿಮ ಟೆಸ್ಟ್ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ ಭಾರತ 7 ವಿಕೆಟ್‌ಗಳ ಜಯ ಸಾಧಿಸಿದ ನಂತರ ಅಶ್ವಿನ್ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದರು.

ಚೆನ್ನೈನಲ್ಲಿ ತಮ್ಮ ತವರು ಮೈದಾನದಲ್ಲಿ ಪಂದ್ಯ ಗೆಲ್ಲುವ ಶತಕ ಸೇರಿದಂತೆ 114 ರನ್ ಗಳಿಸಿದರು ಮತ್ತು ಜಸ್ಪ್ರೀತ್ ಬುಮ್ರಾ ಅವರೊಂದಿಗೆ ಅಗ್ರಸ್ಥಾನ ಹಂಚಿಕೊಳ್ಳಲು 11 ವಿಕೆಟ್‌ಗಳನ್ನು ಪಡೆದರು. ಅಶ್ವಿನ್ ಟೆಸ್ಟ್ ಕ್ರಿಕೆಟ್‌ನಲ್ಲಿ ಮುತ್ತಯ್ಯ ಮುರಳಿಧರನ್ ಅವರೊಂದಿಗೆ ಸಮಬಲ ಸಾಧಿಸಲು ವೃತ್ತಿಜೀವನದಲ್ಲಿ 11 ನೇ ಬಾರಿಗೆ ಪಿಒಎಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಕಳೆದ ಟೆಸ್ಟ್‌ನಲ್ಲಿ ಗೆದ್ದ ಪ್ರಶಸ್ತಿ ಸೇರಿದಂತೆ 10 ಪಂದ್ಯದ ಆಟಗಾರ ಪ್ರಶಸ್ತಿಗಳನ್ನು ಹೊಂದಿದ್ದಾರೆ.

ಮುರಳೀಧರನ್ ತಮ್ಮ 18 ವರ್ಷಗಳ ಸುದೀರ್ಘ ವೃತ್ತಿಜೀವನದಲ್ಲಿ ಶ್ರೀಲಂಕಾ ಪರ 61 ಟೆಸ್ಟ್ ಸರಣಿಗಳಲ್ಲಿ ಕಾಣಿಸಿಕೊಂಡರು, 2011 ರಲ್ಲಿ ತಮ್ಮ ಟೆಸ್ಟ್ ಚೊಚ್ಚಲ ಪಂದ್ಯವನ್ನು ಮಾಡಿದ ಅಶ್ವಿನ್, ಬಾಂಗ್ಲಾದೇಶದ ವಿರುದ್ಧ ತಮ್ಮ 42 ನೇ ಪಂದ್ಯವನ್ನು ಆಡಿದ್ದಾರೆ.

ಗಳಿಕೆ ರಜೆ ನಗದೀಕರಣ ಮೊತ್ತ ಏಳನೇ ವೇತನ ಆಯೋಗದ ಲೆಕ್ಕಾಚಾರದಂತೆ ನೀಡಲು ಆಗ್ರಹ

ಮೈಸೂರು ನಿವೃತ್ತ ನೌಕರರ ವೇದಿಕೆ ಪ್ರತಿಭಟನೆ

ಮೈಸೂರು, ಅ.1(ಎಂಕೆ)– ಗಳಿಕೆ ರಜೆ ನಗದೀಕರಣ ಮೊತ್ತವನ್ನು ಏಳನೇ ವೇತನ ಆಯೋಗದ ಲೆಕ್ಕಾಚಾರದಲ್ಲಿ ನೀಡಬೇಕು ಎಂದು ಒತ್ತಾಯಿಸಿ ಕರ್ನಾಟಕ ನಿವೃತ್ತ ನೌಕರರ ವೇದಿಕೆ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಬನ್ನೂರು ಮುಖ್ಯರಸ್ತೆಯಲ್ಲಿರುವ ಹೊಸ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾವಣೆಗೊಂಡ ವೇದಿಕೆ ಸದಸ್ಯರು, 2022ರ ಜುಲೈ 1ರಿಂದ 2024ರ ಜುಲೈ 31ರ ಅವಧಿಯಲ್ಲಿ ನಿವೃತ್ತರಾದ ನೌಕರರಿಗೆ ಏಳನೇ ವೇತನ ಆಯೋಗದ ಅನುಸಾರ ನಿವೃತ್ತಿ ಆರ್ಥಿಕ ಸೌಲಭ್ಯದಿಂದ ವಂಚಿತರನ್ನಾಗಿಸಿ, ಆರನೇ ವೇತನ ಆಯೋಗದ ಅನುಸಾರ ನಿವೃತ್ತಿ ಆರ್ಥಿಕ ಸೌಲಭ್ಯ ನೀಡಲಾಗಿದೆ. ಆದ್ದರಿಂದ ನಮಗೆ ನಷ್ಟವಾದ ಆರ್ಥಿಕ ಸೌಲಭ್ಯವನ್ನು ಕಮ್ಯುಟೇಶನ್ ಗಳಿಕೆ ರಜೆ ನಗದೀಕರಣದ ಮೊತ್ತವನ್ನು ಏಳನೇ ವೇತನ ಆಯೋಗದ ಲೆಕ್ಕಾಚಾರದಲ್ಲಿ ನೀಡಬೇಕು ಎಂದು ಒತ್ತಾಯಿಸಿದರು.

ಬೇಡಿಕೆ ಈಡೇರಿಸಲು ಬೆಂಗಳೂರಿನಲ್ಲಿ ಸತತವಾಗಿ ಹೋರಾಟ ಮಾಡಿದರೂ ಪ್ರಯೋಜನವಾಗಿಲ್ಲ. ದುಡಿಮೆಯ ಹಣವನ್ನು ಪಡೆಯಲು ಹೋರಾಟ ಮಾಡಬೇಕಾದ ಪರಿಸ್ಥಿತಿ ಎದುರಾಗಿದ್ದು, ನಮಗೆ ಶೀಘ್ರವೇ ನ್ಯಾಯ ಒದಗಿಸಿ ಎಂದು ಆಗ್ರಹಿಸಿದರು. ವೇದಿಕೆ ಪದಾಧಿಕಾರಿಗಳಾದ ಹೆಚ್.ಸಿ.ಮಾದಪ್ಪ, ಮರಿಸ್ವಾಮಿ, ಎಸ್.ಸಿ.ರಾಜೇಂದ್ರಪ್ಪ, ನಾಗಯ್ಯ, ರಾಜಯ್ಯ, ರಾಜಮ್ಮ, ಶ್ರೀಕಂಠ ಮೂರ್ತಿ ಮತ್ತಿತರರಿದ್ದರು.



ಕರ್ನಾಟಕ ನಿವೃತ್ತ ನೌಕರರ ವೇದಿಕೆ ಜಿಲ್ಲಾಧಿಕಾರಿ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಇಂದಿನಿಂದ ಮುಖ್ಯಮಂತ್ರಿ ಮೈಸೂರು ಜಿಲ್ಲಾ ಪ್ರವಾಸ



ಮೈಸೂರು,ಅ.1–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಕ್ಟೋಬರ್ 2, 3 ಮತ್ತು 4ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದು, ಅ.2ರಂದು ರಾತ್ರಿ 8.25 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸುವರು. ಅ.3ರಂದು ಬೆಳಗ್ಗೆ 9.15 ಗಂಟೆಗೆ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಆಯೋಜಿಸಲಾಗಿರುವ ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ಅಗ್ರಪೂಜೆಯೊಂದಿಗೆ 2024ರ ದಸರಾ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಬೆಳಗ್ಗೆ 11.30 ಗಂಟೆಗೆ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ನಡೆಯಲಿರುವ ದಸರಾ ಚಲನಚಿತ್ರೋತ್ಸವದ ಉದ್ಘಾಟನೆ ಮಾಡಲಿದ್ದು, ಮಧ್ಯಾಹ್ನ 12.30ಕ್ಕೆ ಕುಪ್ಪಣ್ಣ ಪಾರ್ಕ್‌ನಲ್ಲಿ ಏರ್ಪಡಿಸಲಾಗಿರುವ ದಸರಾ ಫಲಪುಷ್ಪ ಪ್ರದರ್ಶನ ಕಾರ್ಯಕ್ರಮದ ಉದ್ಘಾಟನೆ ಮಾಡುವರು.

ಅಂದು ಸಂಜೆ 4 ಗಂಟೆಗೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಶ್ರೀ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿರುವ ದಸರಾ ಕುಸ್ತಿ ಪಂದ್ಯಾವಳಿಯ ಉದ್ಘಾಟನೆ ಮಾಡಲಿದ್ದಾರೆ. ಸಂಜೆ 4.30ಕ್ಕೆ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಯುವ ರಾಜ್ಯ ದಸರಾ ಸಿ.ಎಂ.ಕಪ್ ಕ್ರೀಡಾಕೂಟ ಭಾಗಿಯಾಗಲಿದ್ದು, ಸಂಜೆ 6 ಗಂಟೆಗೆ ಅರಮನೆ ಆವರಣದಲ್ಲಿ ಆಯೋಜಿಸಿರುವ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ರಾತ್ರಿ 7.30ಕ್ಕೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಆವರಣದಲ್ಲಿ ಏರ್ಪಡಿಸಲಾಗಿರುವ ವಸ್ತು ಪ್ರದರ್ಶನದ ಉದ್ಘಾಟನೆ ಮಾಡಲಿದ್ದಾರೆ. ಅ.4ರಂದು ಮೈಸೂರಿಂದ ಕೊಪ್ಪಳ ಜಿಲ್ಲೆಗೆ ತೆರಳಲಿದ್ದಾರೆ ಎಂದು ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಥಾಯಿ ಸಮಿತಿ ಸದಸ್ಯರಾಗಿ ಯದುವೀರ್ ಆಯ್ಕೆ



ಮೈಸೂರು,ಅ.1– ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಸ್ಥಾಯಿ ಸಮಿತಿ ಸದಸ್ಯರಾಗಿ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ನೇಮಕಗೊಂಡಿದ್ದು, ಅಧ್ಯಕ್ಷರಾಗಿ ಅಸ್ಸಾಂನ ಸಂಸದರಾದ ಭುವನೇಶ್ವರ್ ಕಲಿತಾ ಆಯ್ಕೆಯಾಗಿದ್ದಾರೆ.

ಗೌಡಗೆರೆಯ ಪ್ರಸಿದ್ಧ ಚಾಮುಂಡೇಶ್ವರಿ ದೇವಸ್ಥಾನಕ್ಕೆ ನೂತನ ಸಾರಿಗೆ ಸೌಲಭ್ಯ

ಮೈಸೂರು,ಅ.1–ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಮೈಸೂರು ನಗರ ಬಸ್ ನಿಲ್ದಾಣ–ಶ್ರೀರಂಗಪಟ್ಟಣ–ಮಂಡ್ಯ–ಮದ್ದೂರು ಮಾರ್ಗವಾಗಿ ಗೌಡಗೆರೆ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಮೈಸೂರು ನಗರ ವಿಭಾಗದಿಂದ ನೂತನ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. **ಶ್ರೀರಂಗಪಟ್ಟಣ–ಮಂಡ್ಯ–ಮದ್ದೂರು ಮಾರ್ಗವಾಗಿ ನಗರ ಬಸ್ ನಿಲ್ದಾಣ ಬಿಡುವ ವೇಳೆ:** 06.00, 06.15, 06.30, 06.45, 07.00, 7.15, 7.30, 8.00, 8.30, 11.00, 11.30, 12.15, 12.30, 12.45, 13.00, 13.15, 13.30, 13.45.

ಗೌಡಗೆರೆ ಬಿಡುವ ವೇಳೆ: 8.30, 9.15, 10.15, 10.45, 11.00, 11.15, 11.30, 13.30, 14.00, 14.30, 14.45, 15.00, 15.15, 15.30, 15.45, 16.00 ಸಾರ್ವಜನಿಕ ಪ್ರಯಾಣಿಕರಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿದೆ ಎಂದು ಮೈಸೂರು ನಗರ ವಿಭಾಗ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾಲಿಬಾಲ್ ಪಂದ್ಯಾವಳಿಯಲ್ಲಿ ಮಹಾಜನ ಕಾಲೇಜಿಗೆ ದ್ವಿತೀಯ ಸ್ಥಾನ



ಜೆಎಸ್‌ಎಸ್ ಕಾಲೇಜು, ಊಟಿ ರಸ್ತೆ, ಮೈಸೂರು ಆಯೋಜಿಸಿದ್ದ ಪುರುಷರ ಅಂತರ ಕಾಲೇಜು ವಾಲಿಬಾಲ್ ಪಂದ್ಯಾವಳಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾಲಿಬಾಲ್ ತಂಡವು ದ್ವಿತೀಯ ಸ್ಥಾನ ಪಡೆದಿದೆ. ಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿತಿರುವವರು): ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂಧನ, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಹೆಚ್.ಎನ್.ಭಾಸ್ಕರ್, ತಂಡದ ನಾಯಕ ಕಾರ್ತಿಕ್. (ಎಡದಿಂದ ಬಲಕ್ಕೆ ನಿಂತಿರುವವರು): ಸೋಮಶೇಖರ್, ತೇಜಸ್ ಎನ್.ಆರ್, ಸುಪ್ರೀತ್ ಎಂ, ಶಶಾಂಕ್ ಕೆ, ಕುಶಾಲ್ ಹೆಚ್‌ಜೆ, ರಕ್ಷಿತ್, ಪ್ರತೀಕ್‌ಗೌಡ, ಮನೀಷ್, ಯಶ್ವಂತ್ ಗೌಡ, ಶಿವ, ವರುಣ್, ಪ್ರೀತಮ್ ಹಾಗೂ ಗಂಭೀರ್ ಅವರನ್ನು ಕಾಣಬಹುದು.

ಒಳಚರಂಡಿ ಕಾರ್ಮಿಕರನ್ನು ಖಾಯಂಗೊಳಿಸದಿದ್ದರೆ ದಸರಾದಲ್ಲಿ ಮೈ ಮೇಲೆ ಮಲ ಮೂತ್ರ ಸುರಿದುಕೊಂಡು ಪ್ರತಿಭಟನೆ

ಒಳಚರಂಡಿ ಸಹಾಯಕರು, ಪೌರಕಾರ್ಮಿಕರ ಸಂಘ ಎಚ್ಚರಿಕೆ

ಮೈಸೂರು, ಅ.1(ಜಿಎ)–ಮೈಸೂರು ನಗರಪಾಲಿಕೆಯ ವಾಣಿ ವಿಲಾಸ ವಿಭಾಗದ ಒಳಚರಂಡಿ ಕಾರ್ಮಿಕರನ್ನು ಖಾಯಂಗೊಳಿಸುವಂತೆ ಒತ್ತಾಯಿಸಿ ಈ ಬಾರಿಯ ನಾಡಹಬ್ಬ ದಸರಾ ವೇಳೆ ಮೈಮೇಲೆ ಮಲ ಮೂತ್ರ ಸುರಿದುಕೊಂಡು ಪ್ರತಿಭಟಿಸಲಾಗುವುದು ಎಂದು ಮೈಸೂರು ಮಹಾ ನಗರಪಾಲಿಕೆ ಒಳಚರಂಡಿ ಸಹಾಯಕರು ಹಾಗೂ ಪೌರ ಕಾರ್ಮಿಕರ ಸಂಘ ಎಚ್ಚರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಕುಮಾರಸ್ವಾಮಿ ಮಾತನಾಡಿ, ಪಾಲಿಕೆಯ ವಾಣಿ ವಿಲಾಸ ವಿಭಾಗದಲ್ಲಿ 231 ಮಂದಿ ಒಳಚರಂಡಿ ಕಾರ್ಮಿಕರು ಕಳೆದ 18–20 ವರ್ಷಗಳಿಂದ ಸ್ವಚ್ಛತಾ ಕಾರ್ಯ ಮಾಡಿಕೊಂಡು ಬರುತ್ತಿದ್ದಾರೆ. ಆದರೆ ಇವರನ್ನು ಇನ್ನೂ ಜೀತ ಪದ್ಧತಿಯಲ್ಲಿ ದುಡಿಸಿಕೊಳ್ಳುತ್ತಿದ್ದು, ಕಾಯಂಗೊಳಿಸಬೇಕೆಂದು ಕೋರಿ ಅನೇಕ ಪ್ರತಿಭಟನೆ, ಹೋರಾಟ, ಸಭೆಗಳು ನಡೆದಿದ್ದರೂ ಕ್ರಮ ಕೈಗೊಂಡಿಲ್ಲ. ವಿಧಾನಸೌಧದ ಅಧಿಕಾರಿಗಳು ಹಾಗೂ ಸಚಿವರ ಗಮನ ಸೆಳೆದರೂ ಪ್ರಯೋಜನವಾಗಿಲ್ಲ. ಹೀಗಾಗಿ ಈ ರೀತಿಯ ಕಠಿಣ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಇನ್ನಿತರ ಪದಾಧಿಕಾರಿಗಳಾದ ಗೋಪಾಲ, ಎಸ್.ಗಣೇಶ್, ಸುಬ್ರಹ್ಮಣ್ಯ, ಪಿ.ಮುರುಗ, ಜಿ.ಕಿಶೋರ್, ಎಂ.ಪಿ.ಮುರುಗೇಶ್ ಉಪಸ್ಥಿತರಿದ್ದರು.

ಸಾರ್ವಜನಿಕ ಸ್ಥಳಗಳಲ್ಲಿರುವ ಧಾರ್ಮಿಕ ನಿರ್ಮಾಣಗಳ ನೆಲಸಮ ಮಾಡಲು ಸುಪ್ರೀಂಕೋರ್ಟ್ ಆದೇಶ

ನವದೆಹಲಿ: ಆಸ್ತಿ ಧ್ವಂಸ ವಿಚಾರದಲ್ಲಿ ಯಾವುದೇ ನಿರ್ದಿಷ್ಟ ಸಮುದಾಯಕ್ಕೆ ಮೀಸಲಾಗಿರದೆ ಎಲ್ಲಾ ಧರ್ಮದ ನಾಗರಿಕರಿಗೆ ಅನ್ವಯವಾಗುವ ಮಾರ್ಗಸೂಚಿಗಳನ್ನು ರೂಪಿಸುವುದಾಗಿ ಸುಪ್ರೀಂಕೋರ್ಟ್ ಮಂಗಳವಾರ ಹೇಳಿದೆ ಕೋರ್ಟ್ ನಿರ್ದೇಶನಗಳು ಭಾರತದಾದ್ಯಂತ ಅನ್ವಯಿಸುತ್ತವೆಯೇ ಹೊರತು ಒಬ್ಬ ವ್ಯಕ್ತಿ ಆರೋಪಿ ಅಥವಾ ಅಪರಾಧಿ ಎಂಬ ಕಾರಣಕ್ಕೆ ಅದು ಆಸ್ತಿ ಧ್ವಂಸಕ್ಕೆ ಆಧಾರವಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ.

ನಮ್ಮದು ಜಾತ್ಯತೀತ ರಾಷ್ಟ್ರ. ಇಲ್ಲಿ ನ್ಯಾಯಾಲಯ ಹೊರಡಿಸುವ ಆದೇಶ ಎಲ್ಲಾ ನಾಗರಿಕರಿಗೂ, ಸಂಸ್ಥೆಗಳಿಗೂ ಅನ್ವಯವಾಗುತ್ತವೆ ಹೊರತು ನಿರ್ದಿಷ್ಟ ಸಮುದಾಯಕ್ಕೆ ಅಲ್ಲ ಎಂದು ನ್ಯಾಯಮೂರ್ತಿಗಳಾದ ಬಿ ಆರ್ ಗವಾಯಿ ಮತ್ತು ಕೆ ವಿ ವಿಶ್ವನಾಥನ್ ಅವರನ್ನೊಳಗೊಂಡ ನ್ಯಾಯಪೀಠ ಹೇಳಿದೆ.

ಒಂದು ನಿರ್ದಿಷ್ಟ ಧರ್ಮಕ್ಕೆ ವಿಭಿನ್ನ ಕಾನೂನು ಇರಬಾರದು ಎಂದು ಗಮನಿಸಿದ ನ್ಯಾಯಪೀಠ, ಸಾರ್ವಜನಿಕ ರಸ್ತೆಗಳು, ಸರ್ಕಾರಿ ಭೂಮಿ ಅಥವಾ ಅರಣ್ಯಗಳಲ್ಲಿ ಯಾವುದೇ ಅನಧಿಕೃತ ನಿರ್ಮಾಣಗಳು ತಲೆಯೆತ್ತುವಂತಿಲ್ಲ ಮತ್ತು ಅವುಗಳನ್ನು ರಕ್ಷಿಸಲೂಬಾರದು ಎಂದು ಹೇಳಿದೆ. ಸಾರ್ವಜನಿಕ ಸುರಕ್ಷತೆಯು ಅತ್ಯುನ್ನತವಾಗಿದೆ.



ರಸ್ತೆ, ಜಲ ಮೂಲಗಳು ಅಥವಾ ರೈಲು ಹಳಿಗಳನ್ನು ಅತಿಕ್ರಮಿಸುವ ಯಾವುದೇ ಧಾರ್ಮಿಕ ರಚನೆಯನ್ನು ಸುಮ್ಮನೆ ಬಿಡಬಾರದು, ಕೆಡವಿ ಹಾಕಬೇಕು ಎಂದು ಸುಪ್ರೀಂಕೋರ್ಟ್ ಮಹತ್ತರ ಆದೇಶ ನೀಡಿದೆ.

ಬುಲ್ಡೋಜರ್ ಕಾರ್ಯಾಚರಣೆ ಮತ್ತು ಅತಿಕ್ರಮಣ ವಿರೋಧಿ ಕಾರ್ಯಾಚರಣೆಗಳಿಗೆ ಕೋರ್ಟ್ ನಿರ್ದೇಶನಗಳು ಧರ್ಮವನ್ನು ಲೆಕ್ಕಿಸದೆ ಎಲ್ಲಾ ನಾಗರಿಕರಿಗೆ ಅನ್ವಯಿಸುತ್ತದೆ ಎಂದು ನ್ಯಾಯಾಲಯ ಹೇಳಿದೆ. ನಮ್ಮ ಆದೇಶವು ಯಾವುದೇ ಸಾರ್ವಜನಿಕ ಸ್ಥಳಗಳನ್ನು ಅತಿಕ್ರಮಣದಾರರಿಗೆ ಸಹಾಯ ಮಾಡದಂತೆ ನೋಡಿಕೊಳ್ಳುವುದಾಗಿದೆ ಎಂದು ನ್ಯಾಯಪೀಠ ಹೇಳಿದೆ.

ಸಾರ್ವಜನಿಕ ಸ್ಥಳಗಳಲ್ಲಿ ಧಾರ್ಮಿಕ ಕಟ್ಟಡ ನಿರ್ಮಾಣಗಳ ಕುರಿತ ಪ್ರಕರಣದ ವಿಚಾರಣೆ ನಡೆಯುತ್ತಿದೆ. ಹಲವಾರು ರಾಜ್ಯಗಳಲ್ಲಿ ಆಸ್ತಿಗಳನ್ನು ನೆಲಸಮ ಮಾಡಲಾಗುತ್ತಿದೆ ಎಂದು ಆರೋಪಿಸಿ ಸಲ್ಲಿಸಿದ ಅರ್ಜಿಗಳ ನಮೂನೆಗಳ ಮೇಲಿನ ವಾದವನ್ನು ಸುಪ್ರೀಂ ಕೋರ್ಟ್ ಆಲಿಸುತ್ತಿದೆ. ಸೆಪ್ಟೆಂಬರ್ 17 ರಂದು ಸುಪ್ರೀಂ ಕೋರ್ಟ್, ತನ್ನ ಅನುಮತಿಯಿಲ್ಲದೆ ಅಕ್ಟೋಬರ್ 1 ರವರೆಗೆ ಧಾರ್ಮಿಕ ಕಟ್ಟಡಗಳನ್ನು ನೆಲಸಮ ಮಾಡಲಾಗುವುದಿಲ್ಲ ಎಂದು ಹೇಳಿತ್ತು. ಅಕ್ರಮ ನೆಲಸಮ ಮಾಡುವಿಕೆ ಸಂವಿಧಾನದ ತತ್ವಕ್ಕೆ ವಿರುದ್ಧವಾಗಿದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಈ ವಿಷಯದಲ್ಲಿ ತನ್ನ ತೀರ್ಪನ್ನು ಕಾಯ್ದಿರಿಸುತ್ತಿರುವುದಾಗಿ ಪೀಠವು ಹೇಳಿದ ನಂತರ, ಅರ್ಜಿದಾರರ ಪರ ಹಾಜರಾದ ವಕೀಲರೊಬ್ಬರು ಸೆ.17ರ ಸುಪ್ರೀಂ ಕೋರ್ಟ್‌ನ ಆದೇಶವನ್ನು ಉಲ್ಲೇಖಿಸಿದರು, ಅದು ಅಕ್ಟೋಬರ್‌ವರೆಗೆ ಅಪರಾಧದ ಆರೋಪಿಗಳು ಸೇರಿದಂತೆ ಆಸ್ತಿಗಳನ್ನು ನೆಲಸಮ ಮಾಡುವುದಿಲ್ಲ ಎಂದು ಆದೇಶ ನೀಡಿದ್ದಿರಲ್ಲವೇ. ತನ್ನ ಮಧ್ಯಂತರ ಆದೇಶವನ್ನು ವಿಸ್ತರಿಸುವಂತೆ ವಕೀಲರು ಪೀಠವನ್ನು ಒತ್ತಾಯಿಸಿದರು. ಅದಕ್ಕೆ ನ್ಯಾಯಾಲಯ ಈ ವಿಚಾರದ ಬಗ್ಗೆ ತೀರ್ಪು ಬರುವವರೆಗೆ ಮಧ್ಯಂತರ ತೀರ್ಪು ಮುಂದುವರಿಯುತ್ತದೆ ಎಂದರು. ಈ ಹಿಂದೆ ನ್ಯಾಯಾಲಯವು ಅಕ್ರಮ ಧ್ವಂಸ ಸಂವಿಧಾನ ತತ್ವಕ್ಕೆ ವಿರುದ್ಧ ಎಂದು ಹೇಳಿತ್ತು.

ಅ.3ರಿಂದ ಶರನ್ನವರಾತ್ರಿ ಶತಚಂಡೀಕಾ ಹೋಮ

ಮೈಸೂರು, ಅ.1– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ವಿರಾಜಮಾನರಾಗಿರುವ ಶಕ್ತಿದ್ವಯರಾದ ಶ್ರೀ ಬಾಲಾತ್ರಿಪುರಸುಂದರಿ ಮತ್ತು ಶ್ರೀ ಸಾಮ್ರಾಜ್ಯ ಲಕ್ಷ್ಮೀ ದಿವ್ಯ ಸಾನಿಧ್ಯದಲ್ಲಿ ಶರನ್ನವರಾತ್ರಿ ಪ್ರಯುಕ್ತ ಅ.3ರ ಗುರುವಾರ ಪಾಡ್ಯದಿಂದ ಅ.11ರ ಶುಕ್ರವಾರದವರೆವಿಗೆ ಪ್ರತಿನಿತ್ಯ ಶತಚಂಡೀಕಾ ಹೋಮ ಏರ್ಪಡಿಸಲಾಗಿದೆ.

ಬೆಳಗ್ಗೆ 9ಕ್ಕೆ ಪ್ರಾರಂಭವಾಗಿ ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ. ಅ.17ನೇ ಗುರುವಾರ ಹುಣ್ಣಿಮೆಯ ದಿನ ಶತಚಂಡೀ ಮಹಾಯಾಗದ ಪೂರ್ಣಾಹುತಿ. ವೇಬ್ರಶ್ರೀ ಡಾ.ಭಾನುಪ್ರಕಾಶ್ ಶರ್ಮಾ ಅವರ ಮಾರ್ಗದರ್ಶನ ಮತ್ತು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರು ಹಾಗೂ ಮೈಸೂರು ಜಿಲ್ಲಾ ಅಧ್ಯಕ್ಷರೂ ಆದ ಡಿ.ಟಿ. ಪ್ರಕಾಶ್ ಸಹಕಾರದಲ್ಲಿ, ವೇಬ್ರಶ್ರೀ ವಿದ್ವಾನ್ ಯಜ್ಞೇಶ್ವರ ಐತಾಳ್‌ರ ಉಪಸ್ಥಿತಿಯಲ್ಲಿ ಮೈ ಕುಮಾರ್, ಜಾತಕ ವಿಮರ್ಶಕರು ಇವರ ನೇತೃತ್ವದಲ್ಲಿ ಈ ಮಹಾಯಾಗವು ಜರುಗಲಿದೆ. ಪ್ರತಿನಿತ್ಯ ಪ್ರತ್ಯೇಕ ಸಂಕಲ್ಪ ಮಾಡಿಸಲಾಗುವುದು.

ಇಲವಾಲ ರೇವ್ ಪಾರ್ಟಿ ಪ್ರಕರಣ

ಮಂಜುನಾಥ್ ನಾಯಕ ಅಮಾನತು ರದ್ದತಿಗೆ ಆಗ್ರಹ

ಮೈಸೂರು,ಅ.1(ಬಿಎಲ್‌ಯು)– ರೇವ್ ಪಾರ್ಟಿ ಪ್ರಕರಣದಲ್ಲಿ ಇಲವಾಲ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಮಂಜುನಾಥ್ ನಾಯಕ ಅಮಾನತು ಆದೇಶ ರದ್ದು ಮಾಡುವಂತೆ ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಆಗ್ರಹಿಸಿದೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಮಂಗಳವಾರ ಸಭೆ ನಡೆಸಿದ ವೇದಿಕೆ ಸದಸ್ಯರು, ಯಾವುದೇ ತಪ್ಪು ಮಾಡದ ದಕ್ಷ ಪೊಲೀಸ್ ಅಧಿಕಾರಿ ಮಂಜುನಾಥ್ ನಾಯಕ ಅವರನ್ನು ಅಮಾನತು ಮಾಡಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದರು.

ರೇವ್ ಪಾರ್ಟಿ ನಡೆದಿರುವುದು ಮಂಜುನಾಥ್ ನಾಯಕರ ಗಮನಕ್ಕೆ ಬಂದಿಲ್ಲ. ಆದರೂ ಅವರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಮಂಜುನಾಥ ನಾಯಕ ಅಮಾನತು ಆದೇಶ ರದ್ದು ಮಾಡದಿದ್ದರೆ ಹೋರಾಟ ಮಾಡಬೇಕಾಗುತ್ತದೆ ಎಂದು ವೇದಿಕೆ ಸದಸ್ಯರು ಎಚ್ಚರಿಸಿದರು. ಈ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದೇವೆ. ಅವರು 2 ದಿನಗಳ ಕಾಲಾವಕಾಶ ಕೇಳಿದ್ದಾರೆ. ಒಂದು ವೇಳೆ ನಮ್ಮ ಮನವಿಗೆ ಸ್ಪಂದಿಸದಿದ್ದರೆ ಹೋರಾಟ ರೂಪಿಸುತ್ತೇವೆ ಎಂದು ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ್ ಎಚ್ಚರಿಸಿದರು. ವೇದಿಕೆಯ ಪ್ರಧಾನ ಕಾರ್ಯದರ್ಶಿ ಪ್ರಭಾಕರ್, ನಗರಾಧ್ಯಕ್ಷ ರಾಜು, ಜಿಲ್ಲಾ ಕಾರ್ಯದರ್ಶಿ ಸುರೇಶ್, ಖಜಾಂಚಿ ಮಾದೇಶ್ ಸೇರಿದಂತೆ ಹಲವರು ಸಭೆಯಲ್ಲಿ ಭಾಗವಹಿಸಿದ್ದರು.

ಶಾಸಕರಿಂದ ಪೋಸ್ಟರ್ ಬಿಡುಗಡೆ



ಕುಹೂ... ಕುಹೂ... ಕೋಗಿಲೆ ಸಂಗೀತ ಕಾರ್ಯಕ್ರಮದ ಪೋಸ್ಟರ್ ಅನ್ನು ಶಾಸಕ ಕೆ.ಹರೀಶ್‌ಗೌಡ ಬಿಡುಗಡೆ ಮಾಡಿದರು. ಈ ವೇಳೆ ಕಾರ್ಯಕ್ರಮದ ಆಯೋಜಕ ಸುರೇಶ್ ಬಾಬು, ಸಮಾಜ ಸೇವಕ ಸುಜಿತ್‌ಕುಮಾರ್, ಉದ್ಯಮಿ ಪ್ರದೀಪ್ ಸಿಂಗ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ರವಿ ರಾಜಕೀಯ, ಕೃಪಪಾಲ, ಅನುಷ್ ಶಿವಪ್ಪ, ಪಾಲಹಳ್ಳಿ ರಘು ಇನ್ನಿತರರಿದ್ದರು.

ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬದ ಪ್ರಯುಕ್ತ ರಂಗೋಲಿ ಸ್ಪರ್ಧೆ



ಚಾಮುಂಡೇಶ್ವರಿ ಗ್ರಾಮಾಂತರ ಮಹಿಳಾ ಮೋರ್ಚಾ ವತಿಯಿಂದ ಬೋಗಾದಿ ಬಸವೇಶ್ವರ ಸಮುದಾಯ ಭವನದಲ್ಲಿ ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬದ ಪ್ರಯುಕ್ತ ಮಹಿಳಾ ಮೋರ್ಚಾ ಅಧ್ಯಕ್ಷೆ ಸವಿತಾಗೌಡ ನೇತೃತ್ವದಲ್ಲಿ ರಂಗೋಲಿ ಸ್ಪರ್ಧೆ ಏರ್ಪಡಿಸಿ, ಬಹುಮಾನ ವಿತರಿಸಲಾಯಿತು. ಈ ವೇಳೆ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ ರಾಜು, ಪ್ರಧಾನ ಕಾರ್ಯದರ್ಶಿ ಚಂದ್ರಕಲಾ, ಕಾರ್ಯದರ್ಶಿ ಯಮುನಾ ಕೃಷ್ಣಮೂರ್ತಿ, ಇಂದಿರಾ, ಉಪಾಧ್ಯಕ್ಷರಾದ ಕೃಷ್ಣವೇಣಿ, ಗೀತಾ ಪ್ರಮೋದ್, ರೇಖಾ, ಶಾಲಿನಿ, ಶ್ರುತಿ, ಮಾಯ, ರಾಧಾ ಪಾಲಂದಿರಾ, ಚಾಲಕರಾದ ಜಾನ್ಸಿರಾಣಿ, ಪ್ರಮೀಳಾ ನಾಯಕ್, ಅನಿತಾ ಇನ್ನಿತರರಿದ್ದರು.

ಗಾಂಧಿ ಜಯಂತಿ: ಪುತ್ಥಳಿಗೆ ಮಾಲಾರ್ಪಣೆ



ಮೈಸೂರು,ಅ.1– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವತಿಯಿಂದ ಅಕ್ಟೋಬರ್ 2ರಂದು ಬೆಳಗ್ಗೆ 8 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಗಾಂಧಿವನದಲ್ಲಿ ಮಹಾತ್ಮ ಗಾಂಧಿ ಪುತ್ಥಳಿಗೆ ಮಾಲಾರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ.ವಿ.ಹಲಸೆ ಕಾರ್ಯಕ್ರಮದ ಅಧ್ಯಕತೆ ವಹಿಸಲಿದ್ದು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಕೆ.ಬಿ. ಪ್ರವೀಣ, ಕ.ರಾ.ಮು.ವಿ.ಯ ಡೀನ್ (ಶೈಕ್ಷಣಿಕ) ಪ್ರೊ.ಎನ್.ಲಕ್ಷ್ಮೀ, ಕ.ರಾ.ಮು.ವಿ.ಯ ಕುಲಸಚಿವ (ಪರೀಕ್ಷಾಂಗ) ಡಾ.ಹೆಚ್.ವಿಶ್ವನಾಥ್, ಕ.ರಾ.ಮು.ವಿ.ಯ ಹಣಕಾಸು ಅಧಿಕಾರಿಗಳಾದ ಹೆಚ್.ವಿ.ಶ್ವೇತ, ಕ.ರಾ.ಮು.ವಿ.ಯ ಡೀನ್(ಅಧ್ಯಯನ ಕೇಂದ್ರಗಳು) ಪ್ರೊ.ಎಂ.ರಾಮನಾಥಂ ನಾಯುಡು ಉಪಸ್ಥಿತರಿರಲಿದ್ದಾರೆ.

ಕ್ರೀಡಾ ಸಾಧನೆಯಿಂದ ಉದ್ಯೋಗ ಲಭಿಸಲಿದೆ

ಶಾಲಾ ವಿಭಾಗದ ವಾಲಿಬಾಲ್ ಪಂದ್ಯಾವಳಿ ಉದ್ಘಾಟಿಸಿ ಅಂತಾರಾಷ್ಟ್ರೀಯ ವಾಲಿಬಾಲ್ ಪಟು ಹೇಮಲತಾ

ಮೈಸೂರು,ಅ.1(ಪಿಎಂ)– ಕ್ರೀಡೆಯಲ್ಲಿ ಸಾಧನೆಗೈಯುವುದರಿಂದ ಉದ್ಯೋಗ ಗಳಿಸಿ ಜೀವನ ಸಹ ರೂಪಿಸಿಕೊಳ್ಳಬಹುದು ಎಂದು ಅಂತಾರಾಷ್ಟ್ರೀಯ ವಾಲಿಬಾಲ್ ಪಟು ಹೇಮಲತಾ ತಿಳಿಸಿದರು.

ಮೈಸೂರು ವಿವಿ ಪೆವಿಲಿಯನ್ ಮೈದಾನದಲ್ಲಿ ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ–ಮೈಸೂರು ಗ್ರಾಮಾಂತರ, ಮೇಜರ್ ಧ್ಯಾನ್‌ಚಂದ್ ಸ್ಪೋರ್ಟ್ ಫೌಂಡೇಷನ್ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 2024–25ನೇ ಸಾಲಿನ ಜಿಲ್ಲಾ ಮಟ್ಟದ ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿಭಾಗದ ವಾಲಿಬಾಲ್ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣದ ಜೊತೆಗೆ ಕ್ರೀಡಾ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದೂ ಮುಖ್ಯ. ಆ ಮೂಲಕ ಕ್ರೀಡೆಯಲ್ಲಿ ಸಾಧನೆಗೈದು ಉನ್ನತ ಮಟ್ಟದ ಉದ್ಯೋಗವನ್ನು ಪಡೆಯಬಹುದು. ಕ್ರೀಡೆಯಲ್ಲಿನ ಸಾಧನೆಗಾಗಿ ನಾನು ರೈಲ್ವೆ ಉದ್ಯೋಗಿ ಆಗಿದ್ದಾನೆ. ಹಾಗಾಗಿ ವಿದ್ಯಾರ್ಥಿಗಳು ಶೈಕ್ಷಣಿಕ ಚಟುವಟಿಕೆಯೊಂದಿಗೆ ಕ್ರೀಡೆಯಲ್ಲಿ ಉತ್ತಮ ಪ್ರದರ್ಶನ ತೋರುವುದಕ್ಕೂ ಹೆಚ್ಚಿನ ಆದ್ಯತೆ ನೀಡಬೇಕು ಎಂದು ನೆರೆದಿದ್ದ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.



ಮೈಸೂರು ವಿವಿ ಪೆವಿಲಿಯನ್ ಮೈದಾನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಶಾಲಾ ವಿಭಾಗದ ವಾಲಿಬಾಲ್ ಪಂದ್ಯಾವಳಿಯನ್ನು ಅಂತಾರಾಷ್ಟ್ರೀಯ ವಾಲಿಬಾಲ್ ಪಟು ಹೇಮಲತಾ ಉದ್ಘಾಟಿಸಿದರು.

ಪ್ರತಿಯೊಬ್ಬ ಕ್ರೀಡಾಪಟು ಯಾವುದೇ ಅಹಂಕಾರ ಬೆಳೆಸಿಕೊಳ್ಳದೇ ಕ್ರೀಡೆಯಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಳ್ಳಬೇಕು. ಕ್ರೀಡೆ ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡಿಕೊಳ್ಳಲೂ ಸಹಕಾರಿ. ಜೊತೆಗೆ ವ್ಯಕ್ತಿತ್ವದ ವಿಕಾಸಕ್ಕೂ ಪೂರಕವಾಗಲಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಕ್ರೀಡಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಬಾಲಕರು ಹಾಗೂ ಬಾಲಕಿಯರ ತಂಡಗಳು ಸೇರಿದಂತೆ ಸುಮಾರು 36 ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಿದ್ದವು. ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಸದಸ್ಯರಾದ ವಿವೇಕಾನಂದ, ಸಿಎನ್. ಮಂಜೇಗೌಡ, ಚಾಮರಾಜ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್, ಬಿಇಓ ಪ್ರಕಾಶ್, ತಾಲೂಕು ದೈಹಿಕ ಶಿಕ್ಷಣ ಪರೀಕ್ಷಕ ಮೂರ್ತಿ ನಾಯಕ್ ಮತ್ತಿತರರು ಹಾಜರಿದ್ದರು.

ಅ.3ರಂದು ದಾಖಲೆ ಸಮೇತ ವಿಚಾರಣೆಗೆ ಹಾಜರಾಗುವಂತೆ

ಸ್ನೇಹಮಯಿ ಕೃಷ್ಣಗೆ ಇಡಿ ಸಮನ್ಸ್

ಮೈಸೂರು,ಅ.1(ಪಿಎಂ)– ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬದ ಮುಡಾ ನಿವೇಶನ ಹಂಚಿಕೆ ಹಗರಣ ಸಂಬಂಧ ಅ.3ರಂದು ಖುದ್ದು ವಿಚಾರಣೆಗೆ ಹಾಜರಾಗುವಂತೆ ದೂರುದಾರ ಸ್ನೇಹಮಯಿ ಕೃಷ್ಣ ಅವರಿಗೆ ಜಾರಿ ನಿರ್ದೇಶಾಲಯ (ಇಡಿ) ಸಮನ್ಸ್ ನೀಡಿದೆ. ಮುಡಾ ನಿವೇಶನ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆ ನಡೆಸುವಂತೆ ಸ್ನೇಹಮಯಿ ಕೃಷ್ಣ ಇಡಿಗೆ ದೂರು ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಅ.3ರಂದು ಬೆಳಗ್ಗೆ 11ಕ್ಕೆ ದಾಖಲೆಗಳ ಸಮೇತ ಬೆಂಗಳೂರು ಸ್ಥಳೀಯ ಇಡಿ ಕಚೇರಿಯಲ್ಲಿ ಹಾಜರಿರುವಂತೆ ಸ್ನೇಹಮಯಿ ಕೃಷ್ಣ ಅವರಿಗೆ ಇಡಿ ಸಮನ್ಸ್ ನೀಡಿದೆ. ಖುದ್ದು ಹಾಜರಾಗುವ ಮುನ್ನ ಇ–ಮೇಲ್ ಮೂಲಕ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಲೂ ಇಡಿ ಅಧಿಕಾರಿಗಳು ಸಮನ್ಸ್‌ನಲ್ಲಿ ಸೂಚಿಸಿದ್ದಾರೆ.

ಮುಡಾ ಸೈಟ್ ವಾಪಸ್ ಮಾಡಿ ಮಾದರಿಯಾದ ಮುಖ್ಯಮಂತ್ರಿಗಳ ಪತ್ನಿ

ಮೈಸೂರು,ಅ.1(ಜಿಎ)–ಸಿಎಂ ಸಿದ್ದರಾಮಯ್ಯನವರ ಪತ್ನಿ ಮುಡಾ ಸೈಟ್ ವಾಪಸ್ ನೀಡುವ ಮೂಲಕ ಮಾದರಿಯಾಗಿದ್ದಾರೆ ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾ ನಿವೇಶನ ನನಗೆ ಬೇಡ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ವಾಪಸ್ ನೀಡಿದ್ದಾರೆ. ಸಿಎಂ ಪತ್ನಿಯಾಗಿ ಯಾವುದೇ ಆಸೆ ಆಕಾಂಕ್ಷೆಯನ್ನು ವ್ಯಕ್ತಪಡಿಸಿಲ್ಲ. ನಿಜಕ್ಕೂ ಬಿಜೆಪಿ ಮತ್ತು ಜೆಡಿಎಸ್ ನಾಯಕರ ದ್ವೇಷದ ರಾಜಕಾರಣವನ್ನು ನಾವು ಖಂಡಿಸುತ್ತೇವೆ ಎಂದರು.

ಸಿದ್ದರಾಮಯ್ಯ ಧರ್ಮಪತ್ನಿಗೆ ಎಷ್ಟು ನೋವಾಗಿರಬಹುದು. ಈ ರೀತಿಯ ನಿರ್ಧಾರದ ಹಿಂದೆ ಅವರು ತುಂಬಾ ನೋವು ಅನುಭವಿಸಿದ್ದಾರೆ. ಸಿದ್ದರಾಮಯ್ಯ ಪತ್ನಿ ಪಾರ್ವತಮ್ಮನವರು ಯಾವುದೇ ರಾಜಕೀಯ ಸಭೆ ಸಮಾರಂಭದ ವೇದಿಕೆಗೆ ಬಂದವರಲ್ಲ. ಗಂಡನ ರಾಜಕೀಯ ಏಳಿಗೆಯನ್ನು ದೂರದಲ್ಲೇ ನಿಂತು ಸಂತಸ ಪಡುತ್ತಿದ್ದರು. ಇಂತಹ ಕುಟುಂಬದ ವಿರುದ್ಧ ಬಿಜೆಪಿ, ಜೆಡಿಎಸ್ ನಾಯಕರು ದ್ವೇಷದ ರಾಜಕಾರಣ ಮಾಡಿದ್ದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ದೇಶ – ವಿದೇಶ

ಶಾಲಾ ಬಸ್‌ಗೆ ಬೆಂಕಿ ತಗುಲಿ ಶಿಕ್ಷಕರು ಸೇರಿ 25 ವಿದ್ಯಾರ್ಥಿಗಳು ಸಾವು



ಬ್ಯಾಂಕಾಕ್: ಥಾಯ್ಲೆಂಡ್ ರಾಜಧಾನಿ ಬ್ಯಾಂಕಾಕ್‌ನ ಹೊರವಲಯದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಕರೆದೊಯ್ಯುತ್ತಿದ್ದ ಶಾಲಾ ಬಸ್‌ಗೆ ಬೆಂಕಿ ತಗುಲಿದ ಪರಿಣಾಮ 25 ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆಯಲ್ಲಿ 16 ವಿದ್ಯಾರ್ಥಿಗಳು ಮತ್ತು ಮೂವರು ಶಿಕ್ಷಕರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸಾರಿಗೆ ಸಚಿವ ಸೂರಿಯಾ ಜುವಾಂಗ್ರುಂಗ್ ಕಿಟ್ ಹೇಳಿದ್ದಾರೆ. ಬಸ್‌ಗೆ ಬೆಂಕಿ ತಗುಲಿದ ಪರಿಣಾಮ ಘಟನಾ ಸ್ಥಳದಲ್ಲಿ ದಟ್ಟವಾದ ಹೊಗೆ ಆವರಿಸಿದೆ. ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಲು ಕಾರ್ಯಾಚರಣೆ ನಡೆಸುತ್ತಿರುವ ಫೋಟೋ ಮತ್ತು ವಿಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿವೆ. ಘಟನೆ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆ ಸಂಬಂಧ ಥಾಯ್ಲೆಂಡ್ ಪ್ರಧಾನಿ ಪೀಟೊಂಗ್ಟಾರ್ನ್ ಶಿನವತ್ರಾ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

ನಕಲಿ ಖಾತೆ ಸೃಷ್ಟಿಸಿ ಯುವತಿಯರಿಗೆ ಬ್ಲ್ಯಾಕ್‌ಮೇಲ್: ಆರೋಪಿ ಬಂಧನ



ಬರೇಲಿ: ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಖಾತೆಗಳನ್ನು ಸೃಷ್ಟಿಸಿ, ಮಹಿಳೆಯರು ಹಾಗೂ ಯುವತಿಯರೊಂದಿಗೆ ಸ್ನೇಹ ಬೆಳಸಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪದಡಿ ವ್ಯಕ್ತಿಯೊಬ್ಬನನ್ನು ಉತ್ತರ ಪ್ರದೇಶದ ಬರೇಲಿಯಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಯನ್ನು ದಿಲ್ಶಾದ್ ಅಲಿಯಾಸ್ ದಿಲ್ಶಾದ್ ಜಮಾಲಿ ಎಂದು ಗುರುತಿಸಲಾಗಿದೆ. ಆರೋಪಿಯು 10 ವರ್ಷಗಳ ಹಿಂದಿನ ನಕಲಿ ಆಧಾರ್ ಕಾರ್ಡ್‌ಗಳನ್ನು ಬಳಸಿ ಸಾಮಾಜಿಕ ಜಾಲತಾಣದಲ್ಲಿ ನಕಲಿ ಖಾತೆಗಳನ್ನು ಸೃಷ್ಟಿಸಿ, ಮಹಿಳೆಯರು ಮತ್ತು ಯುವತಿಯೊಂದಿಗೆ ಸ್ನೇಹ ಬೆಳೆಸುತ್ತಿದ್ದನು. ಬಳಿಕ ಬೇಡಿಕೆಗಳನ್ನು ಪೂರೈಸದಿದ್ದರೆ ಸಂತ್ರಸ್ತೆಯರ ಖಾಸಗಿ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿ ಬಿಡುವುದಾಗಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದನು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಇದೇ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದ್ದು, ವಿಚಾರಣೆ ವೇಳೆ ದಿಲ್ಶಾದ್ ಜಮಾಲಿ ಬಗ್ಗೆ ಮಾಹಿತಿ ದೊರಕಿತು ಎಂದು ಪೊಲೀಸರು ಹೇಳಿದ್ದಾರೆ. ದಿಲ್ಶಾದ್ ಜಮಾಲಿನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಜೈಲಿಗೆ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಮೆರಿಕ: ಭಾರತೀಯರಿಗೆ 2.5 ಲಕ್ಷ ಹೆಚ್ಚುವರಿ ವೀಸಾ



ವಾಷಿಂಗ್ಟನ್: ಪ್ರವಾಸಿಗರು, ನುರಿತ ಕೆಲಸಗಾರರು ಮತ್ತು ವಿದ್ಯಾರ್ಥಿಗಳು ಸೇರಿದಂತೆ ಭಾರತೀಯರಿಗೆ ಅಮೆರಿಕವು ಹೆಚ್ಚುವರಿಯಾಗಿ 2.5 ಲಕ್ಷ ವೀಸಾ ನೀಡಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇತ್ತೀಚೆಗೆ ಬಿಡುಗಡೆ ಮಾಡಲಾದ ವೀಸಾ ವಿತರಣೆಯ ಹೊಸ ಸ್ಲಾಟ್‌ಗಳು ಭಾರತೀಯ ಅರ್ಜಿದಾರರಿಗೆ ಸಕಾಲಿಕವಾಗಿ ಸಂದರ್ಶನಕ್ಕೆ ಹಾಜರಾಗಲು ನೆರವಾಗಲಿವೆ. ಅಲ್ಲದೆ, ಉಭಯ ದೇಶಗಳ ಬಾಂಧವ್ಯ ವೃದ್ಧಿಯನ್ನು ಸುಗಮಗೊಳಿಸಲಿದೆ ಎಂದು ಅಮೆರಿಕ ರಾಯಭಾರ ಕಚೇರಿ ಹೇಳಿದೆ.

'ಪ್ರಧಾನಿ ನರೇಂದ್ರ ಮೋದಿ ಮತ್ತು ಅಧ್ಯಕ್ಷ ಜೋ ಬೈಡನ್ ಅವರು ಉಭಯ ದೇಶಗಳ ನಡುವಿನ ವೀಸಾ ಪ್ರಕ್ರಿಯೆಯನ್ನು ಸುಧಾರಿಸಲು ಮತ್ತು ಚುರುಕುಗೊಳಿಸಲು ಮಹತ್ವಾಕಾಂಕ್ಷೆಯ ಗುರಿ ಹೊಂದಿದ್ದಾರೆ. ರಾಯಭಾರ ಕಚೇರಿಯಲ್ಲಿನ ನಮ್ಮ ಕಾನ್ಸುಲರ್ ತಂಡಗಳು ಮತ್ತು ನಾಲ್ಕು ದೂತಾವಾಸಗಳು, ಹೆಚ್ಚುತ್ತಿರುವ ವೀಸಾ ಬೇಡಿಕೆಯನ್ನು ಈಡೇರಿಸಲು ಅವಿರತವಾಗಿ ಕೆಲಸ ಮಾಡುತ್ತಿವೆ' ಎಂದು ಭಾರತದಲ್ಲಿನ ಅಮೆರಿಕ ರಾಯಭಾರಿ ಎರಿಕ್ ಗಾರ್ಸೆಟ್ಟಿ ಹೇಳಿದರು.

ಮಾನನಷ್ಟ ಮೊಕದ್ದಮೆ ಪ್ರಕರಣ: ಸಾವರ್ಕರ್ ಟೀಕಿಸಿದ್ದ ರಾಹುಲ್ ಗಾಂಧಿಗೆ ಸಮನ್ಸ್



ಮುಂಬೈ: ಹಿಂದುತ್ವವಾದಿ ವಿನಾಯಕ್ ದಾಮೋದರ್ ಸಾವರ್ಕರ್ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ಸಂಬಂಧ ದಾಖಲಾಗಿರುವ ಮಾನನಷ್ಟ ಮೊಕದ್ದಮೆ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿಗೆ ಮಹಾರಾಷ್ಟ್ರದ ನಾಸಿಕ್ ಜಿಲ್ಲಾ ನ್ಯಾಯಾಲಯ ಸಮನ್ಸ್ ಜಾರಿ ಮಾಡಿದೆ. ನಾಸಿಕ್‌ನ ಹೆಚ್ಚುವರಿ ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್, ದೀಪಾಲಿ ಪರಿಮಳ್ ಕಡುಸ್ಕರ್ ಅವರು, ಸೆ.27ರಂದು ರಾಹುಲ್ ಗಾಂಧಿಗೆ ಸಮನ್ಸ್ ನೀಡಿದ್ದು, ಮುಂದಿನ ವಿಚಾರಣೆಗೆ ವೈಯಕ್ತಿಕವಾಗಿ ಅಥವಾ ನಿಮ್ಮ ಕಾನೂನು ಪ್ರತಿನಿಧಿಯ ಮೂಲಕ ಹಾಜರಾಗಬೇಕು ಎಂದು ಸೂಚಿಸಿದೆ. ಆದರೆ ದಿನಾಂಕ ಇನ್ನೂ ನಿರ್ಧರಿಸಿಲ್ಲ. ರಾಹುಲ್ ಗಾಂಧಿ ಅವರು ಸಾವರ್ಕರ್ ಅವರ ಪ್ರತಿಷ್ಠೆಗೆ ಧಕ್ಕೆ ತಂದಿದ್ದಾರೆ ಎಂದು ಎನ್‌ಜಿಒವೊಂದರ ನಿರ್ದೇಶಕರಾಗಿರುವ ದೂರುದಾರರು ಆರೋಪಿಸಿದ್ದು, ತಾನು ಹಿಂಗೋಲಿಯಲ್ಲಿ ಗಾಂಧಿಯವರು ನಡೆಸಿದ ಪತ್ರಿಕಾಗೋಷ್ಠಿ ಮತ್ತು ನವೆಂಬರ್ 2022ರಲ್ಲಿ ಕಾಂಗ್ರೆಸ್ ನಾಯಕ ಮಾಡಿದ ಭಾಷಣವನ್ನು ವೀಕ್ಷಿಸಿದ್ದೇನೆ ಎಂದು ಹೇಳಿದ್ದಾರೆ. ದೂರುದಾರರ ಪ್ರಕಾರ, 'ಸಾವರ್ಕರ್ ಬಿಜೆಪಿ ಮತ್ತು ಆರ್‌ಎಸ್‌ಎಸ್ ಜೀನ್' ಎಂದು ರಾಹುಲ್ ಗಾಂಧಿ ಹೇಳಿದ್ದು, ಅದು ಮಾನಹಾನಿಕರವಾಗಿದೆ.

ಬಿಯರ್‌ಗಾಗಿ 3 ತಿಂಗಳ ಮಗು ಮಾರಿದ ದಂಪತಿ



ವಾಷಿಂಗ್ಟನ್: ಬಿಯರ್‌ಗಾಗಿ ದಂಪತಿಯೊಂದು ತಮ್ಮ ಮೂರು ತಿಂಗಳ ಹಸುಗೂಸನ್ನೇ ಮಾರಾಟ ಮಾಡಿರುವ ಘಟನೆ ಅಮೆರಿಕದ ವಾಷಿಂಗ್ಟನ್‌ನಲ್ಲಿ ನಡೆದಿದೆ. ಮಾಹಿತಿ ತಿಳಿಯುತ್ತಿದ್ದಂತೆ ಪೊಲೀಸರು ರೋಜರ್ಸ್‌ನ ಕ್ಯಾಂಪ್ ಗ್ರೌಂಡ್‌ಗೆ ತೆರಳಿ ಮಗುವನ್ನು ರಕ್ಷಿಸಿದ್ದಾರೆ. ಮಗುವಿನ ಪೋಷಕರಾದ ಡೇರಿಯನ್ ಅರ್ಬನ್ ಮತ್ತು ಶಲೇನ್ ಎಹ್ಲರ್ ಅನ್ನು ಪೊಲೀಸರು ಬಂಧಿಸಿರುವುದಾಗಿ ವರದಿಯಾಗಿದೆ. ಸೆ.21ರಂದು ಹಸುಗೂಸನ್ನು ಸುಮಾರು 83 ಸಾವಿರ ರೂ. ನಗದು ಹಣ ಮತ್ತು ಬಿಯರ್‌ಗೆ ಮಾರಾಟ ಮಾಡಿದ್ದರು. ಈ ಬಗ್ಗೆ ಸ್ಥಳೀಯರೊಬ್ಬರು ಪೊಲೀಸರಿಗೆ ಮಾಹಿತಿ ನೀಡಿದ್ದು, ದೂರಿನ ಆಧಾರದ ಮೇಲೆ ಪೊಲೀಸರು ತಕ್ಷಣ ಸ್ಥಳಕ್ಕೆ ಧಾವಿಸಿ ಮಗುವನ್ನು ರಕ್ಷಿಸಿದ್ದಾರೆ. ಆದರೆ ಅದಾಗಲೇ ಮಗುವಿನ ಪೋಷಕರು ಅಲ್ಲಿಂದ ಪರಾರಿಯಾಗಿದ್ದಾರೆ. ಈ ದಂಪತಿ ಸಾವಿರ ಡಾಲರ್‌ಗಳಿಗೆ ಮಾರಾಟ ಮಾಡಲು ಒಪ್ಪಿದ ಪತ್ರ ವಾಸಿಸುತ್ತಿದ್ದ ಟೆಂಟ್‌ನಲ್ಲಿ ಪತ್ತೆಯಾಗಿವೆ. ಇದರಲ್ಲಿ ನಗದು ಜೊತೆಗೆ ಬಿಯರ್ ನೀಡಲು ಒಪ್ಪಂದ ಮಾಡಿಕೊಂಡಿರುವುದನ್ನು ಕಂಡು ಪೊಲೀಸರು ದಂಗಾಗಿ ಹೋಗಿದ್ದಾರೆ.

ಮೈಸೂರು ಮಿತ್ರ ಬುಧವಾರ 2 ಅಕ್ಟೋಬರ್ 2024

ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಮನವಿ ಸಲ್ಲಿಕೆ



ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ನಿವೃತ್ತ ನೌಕರರ ವೇದಿಕೆಯಿಂದ ಎಡಿಸಿ ಆರ್.ಐಶ್ವರ್ಯ ಅವರಿಗೆ ಮನವಿ ಸಲ್ಲಿಸಲಾಯಿತು.

ಮಡಿಕೇರಿ, ಅ.1–ಏಳನೇ ವೇತನ ಆಯೋಗದ ಶಿಫಾರಸಿನಂತೆ ನಿವೃತ್ತಿ ಆರ್ಥಿಕ ಸೌಲಭ್ಯ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ನಿವೃತ್ತ ನೌಕರರ ವೇದಿಕೆಯ ಕೊಡಗು ಜಿಲ್ಲಾ ಘಟಕದಿಂದ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಆರ್ಥಿಕ ತಾರತಮ್ಯ ಸರಿಪಡಿಸುವಂತೆ ಒತ್ತಾಯಿಸಿದರು. 2022ರ ಜು.1ರಿಂದ 2024ರ ಜು.31ರ ಅವಧಿಯಲ್ಲಿ ನಿವೃತ್ತಿಯಾದ ನೌಕರರಿಗೆ 6ನೇ ಆಯೋಗದ ಲೆಕ್ಕಾಚಾರದ ಅನುಸಾರ ಡಿಸಿಆರ್‌ಜಿ ಕಮ್ಯುಟೇಶನ್, ರಜೆ ನಗದೀಕರಣಗಳ ನಿವೃತ್ತಿ ಆರ್ಥಿಕ ಸೌಲಭ್ಯವನ್ನು ನೀಡಲಾಗಿದೆ. ಈ ಕ್ರಮದಿಂದ ನಮಗೆ ಆರ್ಥಿಕ ನಷ್ಟವುಂಟಾಗಿ ಅನ್ಯಾಯವಾಗಿದೆ. ಸರ್ಕಾರ ತಕ್ಷಣ 2022ರ ಜು.1ರಿಂದ 2024ರ ಜು.31ರ ಅವಧಿಯೊಳಗೆ ನಿವೃತ್ತಿಯಾದ ರಾಜ್ಯ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ನಿವೃತ್ತಿ ಆರ್ಥಿಕ ಸೌಲಭ್ಯ ಕಲ್ಪಿಸಬೇಕು ಎಂದು ವೇದಿಕೆ ಜಿಲ್ಲಾ ಸಂಚಾಲಕ ಪಿ.ಎಸ್.ಜನಾರ್ಧನ ಒತ್ತಾಯಿಸಿದರು.

30–40 ವರ್ಷ ಸುದೀರ್ಘ ಸೇವೆ ಸಲ್ಲಿಸಿದ ನಮ್ಮನ್ನು ಕಡೆಗಣಿಸಲಾಗಿದೆ. ಮತ್ತೊಮ್ಮೆ ಸರ್ಕಾರದ ಗಮನ ಸೆಳೆಯಲು ರಾಜ್ಯಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ನಮ್ಮ ಬೇಡಿಕೆ ನ್ಯಾಯ ಸಮ್ಮತವಾಗಿದ್ದು, ಇದು ಈಡೇರುವವರೆಗೂ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರು, ಕ್ಷೇತ್ರದ ಶಾಸಕರು, ಜಿಲ್ಲಾಧಿಕಾರಿಗಳು ಹಾಗೂ ಎಲ್ಲಾ ತಹಸೀಲ್ದಾರ್‌ಗಳ ಮೂಲಕ ನಿವೃತ್ತ ನೌಕರರು ಮನವಿ ಸಲ್ಲಿಸಿದ್ದಾರೆ. ಅಲ್ಲದೆ, ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಸುಮಾರು 12 ಸಾವಿರ ನಿವೃತ್ತ ನೌಕರರು ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗಡೆ, ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ, ನಿವೃತ್ತ ನೌಕರರ ಸಂಘದ ರಾಜ್ಯಾಧ್ಯಕ್ಷ ಡಾ.ಎಲ್.ಭೈರಪ್ಪ ಸಮ್ಮುಖದಲ್ಲಿ ನಮಗೆ ಆಗಿರುವ ಅನ್ಯಾಯದ ಕುರಿತು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗೆ ಮನವಿ ನೀಡಿದ್ದರೂ ಸ್ಪಂದನೆ ದೊರೆತ್ತಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ನಂತರ ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಸಂಚಾಲಕರಾದ ಜಿ.ಎಂ.ಚಿನ್ನಯ್ಯ, ಕೆ.ಯು.ರಂಜಿತ್, ಸಿ.ಕೆ.ಶಿವಕುಮಾರ್, ಎಂ.ಪಿ.ನಾಣ್ಯಪ್ಪ, ಪದಾಧಿಕಾರಿಗಳಾದ ಪಿ.ಪಿ.ಇಂದಿರಾ, ಎಂ.ಜೆಗಂಗಮ್ಮ, ಕೆ.ಕೆ.ಅವನಿಜ ಮತ್ತಿತರರು ಪಾಲ್ಗೊಂಡಿದ್ದರು.

ಅ.4ರಿಂದ ದಕ್ಷಿಣ ವಲಯ ಹಾಕಿ ಪಂದ್ಯಾವಳಿ



ಸುದ್ದಿಗೋಷ್ಠಿಯಲ್ಲಿ ಪ್ರಾಂಶುಪಾಲೆ ಕೆ.ಎಸ್.ಸುಮಿತ್ರ ಮಾತನಾಡಿದರು.

ಮಡಿಕೇರಿ: ಕೊಡಗು ವಿದ್ಯಾಲಯ ವಿದ್ಯಾಸಂಸ್ಥೆ ವತಿಯಿಂದ ಎರಡನೇ ಬಾರಿಗೆ ಅ.4ರಿಂದ 7ರವರೆಗೆ ಸಿಬಿಎಸ್‌ಇ ದಕ್ಷಿಣ ವಲಯ–2ರ ಹಾಕಿ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ಶಿಕ್ಷಣ ಸಂಸ್ಥೆ ಪ್ರಾಂಶುಪಾಲೆ ಕೆ.ಎಸ್.ಸುಮಿತ್ರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಕ್ಷಿಣ ವಲಯಕ್ಕೆ ಒಳಪಡುವ ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರಗಳಲ್ಲಿನ ಸಿಬಿಎಸ್‌ಇ ಶಿಕ್ಷಣ ಸಂಸ್ಥೆಗಳ ಕ್ರೀಡಾಪಟುಗಳಿಗೆ ಸೀಮಿತವಾಗಿ ಹಾಕಿ ಪಂದ್ಯಾವಳಿ ಆಯೋಜಿಸಲಾಗಿದೆ. ಪಂದ್ಯಗಳು ಕೂಡಿಗೆ ಮತ್ತು ಸೋಮವಾರಪೇಟೆಯ ಆಸ್ಟ್ರೋಟರ್ಫ್ ಮೈದಾನದಲ್ಲಿ ನಡೆಯಲಿದೆ. ಪಂದ್ಯಾವಳಿ 14,17 ಮತ್ತು 19 ವರ್ಷದೊಳಗಿನ 3 ವಿಭಾಗಗಳಲ್ಲಿ ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕವಾಗಿ ನಡೆಯಲಿದೆ. ಒಟ್ಟು 37 ತಂಡಗಳು ಪಾಲ್ಗೊಳ್ಳಲಿವೆ. ಕ್ರೀಡಾಪಟುಗಳು, ತರಬೇತುದಾರರು ಮತ್ತು ವ್ಯವಸ್ಥಾಪಕರು ಸೇರಿದಂತೆ ಸುಮಾರು 700 ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು.

ಲೀಗ್ ಮತ್ತು ನಾಕೌಟ್ ಮಾದರಿಯಲ್ಲಿ 60 ಪಂದ್ಯಾವಳಿಗಳು ನಡೆಯಲಿದ್ದು, ಹಾಕಿ ಕೂರ್ಗ್‌ನ ಅಂತಾರಾಷ್ಟ್ರೀಯ ತೀರ್ಪುಗಾರರು ಪಂದ್ಯಗಳನ್ನು ನಿರ್ವಹಿಸಲಿದ್ದಾರೆ. ಆಟಗಾರರು ಮತ್ತು ತಂಡದ ಸಿಬ್ಬಂದಿಗೆ ಮಡಿಕೇರಿಯ ಕೊಡಗು ವಿದ್ಯಾಲಯದಲ್ಲಿ ಊಟ ಮತ್ತು ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. ಕೂಡಿಗೆ ಮತ್ತು ಸೋಮವಾರಪೇಟೆಯಲ್ಲಿ ನಡೆಯುವ ಪಂದ್ಯಗಳಿಗೆ ತಂಡಗಳನ್ನು ಶಾಲಾ ಬಸ್‌ನಲ್ಲಿ ಕರೆದೊಯ್ಯಲು ಅಗತ್ಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದರು.

ಉದ್ಘಾಟನೆ ಪಂದ್ಯಾವಳಿ ಉದ್ಘಾಟನಾ ಸಮಾರಂಭ ಅ.4ರಂದು ಬೆಳಗ್ಗೆ 8.30ಕ್ಕೆ ಮಡಿಕೇರಿಯ ಕೊಡಗು ವಿದ್ಯಾಲಯ ಮೈದಾನದಲ್ಲಿ ನಡೆಯಲಿದೆ. ರಾಷ್ಟ್ರೀಯ ಬಾಸ್ಕೆಟ್ ಬಾಲ್ ಆಟಗಾರ್ತಿ ಪುಷ್ಪಾ ಕುಟ್ಟಣ್ಣ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಭಾರತೀಯ ಕ್ರೀಡಾ ಪ್ರಾಧಿಕಾರ(ಸಾಯಿ) ತಂಡ ಮತ್ತು ಕೊಡಗು ವಿದ್ಯಾಲಯದ ಅಲ್ಯೂಮಿನಿ ಅಸೋಸಿಯೇಷನ್ ತಂಡಗಳ ನಡುವೆ ಪ್ರದರ್ಶನ ಪಂದ್ಯ ಆಯೋಜಿಸಲಾಗಿದೆ. ಅಂತಿಮ ಪಂದ್ಯಗಳು ಅ.7ರಂದು ಕೂಡಿಗೆಯಲ್ಲಿ ನಡೆಯಲಿದ್ದು, ಸಮಾರೋಪದಲ್ಲಿ ಅಂತಾರಾಷ್ಟ್ರೀಯ ಮಾಜಿ ಒಲಂಪಿಯನ್ ಬಿ.ಕೆ.ಸುಬ್ರಮಣಿ ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಪಂದ್ಯಾವಳಿ ಆಯೋಜನಾ ಸಮಿತಿ ನಿರ್ದೇಶಕ ಡಿ.ದಾಮೋದರಗೌಡ, ಕೊಡಗು ವಿದ್ಯಾಲಯ ವಿದ್ಯಾಸಂಸ್ಥೆ ವ್ಯವಸ್ಥಾಪಕ ಪಿ.ರವಿ, ದೈಹಿಕ ಶಿಕ್ಷಣ ಶಿಕ್ಷಕರಾದ ಹೆಚ್.ಟಿ.ದೀನ ಮತ್ತು ಕೆ.ಎ.ಪಾರ್ವತಿ ಇದ್ದರು.

ಮೈಸೂರು ದಸರಾ ಚಲನಚಿತ್ರೋತ್ಸವದಲ್ಲಿ ಅ.4ಕ್ಕೆ ಕಂದೀಲು ಪ್ರದರ್ಶನ

ಮಡಿಕೇರಿ, ಅ.1–ಸ್ವಸ್ತಿಕ್ ಎಂಟರ್ಟೈನ್ಮೆಂಟ್ ಬ್ಯಾನರ್ ಅಡಿಯಲ್ಲಿ ಕೊಡಗಿನ ಕೊಟ್ಟುಕತ್ತೀರ ಯಶೋಧಾ ಪ್ರಕಾಶ್ ನಿರ್ಮಾಣ ಮತ್ತು ನಿರ್ದೇಶನದ ಕನ್ನಡ ಚಲನಚಿತ್ರ 'ಕಂದೀಲು' ವಿಶ್ವ ವಿಖ್ಯಾತ ಮೈಸೂರು ದಸರಾ ಚಲನಚಿತ್ರೋತ್ಸವದಲ್ಲಿ ಅ.4ರಂದು ಪ್ರದರ್ಶನಗೊಳ್ಳಲಿದೆ.



ಕೋಲ್ಕತ್ತಾ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ರಾಷ್ಟ್ರೀಯ ಸ್ಪರ್ಧೆಗೆ ಆಯ್ಕೆಯಾಗಿದ್ದ ಕಂದೀಲು ಚಿತ್ರ 15ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕನ್ನಡ ಸಿನಿಮಾದ ಸ್ಪರ್ಧಾತ್ಮಕ ವಿಭಾಗದಲ್ಲಿ 2ನೇ ಅತ್ಯುತ್ತಮ ಚಿತ್ರ ಪ್ರಶಸ್ತಿ ತನ್ನದಾಗಿಸಿಕೊಂಡಿತ್ತು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿರುವ ಈ ಚಿತ್ರ ಮೈಸೂರಿನ ಐನಾಕ್ಸ್ ಚಿತ್ರಮಂದಿರದಲ್ಲಿ ಶುಕ್ರವಾರ ಬೆಳಗ್ಗೆ 10.15ಕ್ಕೆ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ನಿರ್ಮಾಪಕಿ ಯಶೋಧಾ ಪ್ರಕಾಶ್ ತಿಳಿಸಿದ್ದಾರೆ.

ನಾಳೆ ಮಡಿಕೇರಿ ದಸರಾಕ್ಕೆ ವಿಧ್ಯುಕ್ತ ಚಾಲನೆ

- ಶಕ್ತಿ ದೇವತೆಗಳ 4 ಕರಗಗಳ ಪ್ರದಕ್ಷಿಣೆ
- ಗಾಂಧಿ ಮೈದಾನದಲ್ಲಿ ಬೃಹತ್ ವೇದಿಕೆ ನಿರ್ಮಾಣ



ಮಡಿಕೇರಿ ಗಾಂಧಿ ಮೈದಾನದಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ವೇದಿಕೆ ನಿರ್ಮಿಸುತ್ತಿರುವುದು.

ಧರೆಗಿಳಿಯಲಿರುವ ದೈವಿ ಲೋಕ

ಮಡಿಕೇರಿ ದಸರಾದ ಕೇಂದ್ರ ಬಿಂದುವಾಗಿರುವ ದಶಮಂಟಪಗಳ ಶೋಭಾಯಾತ್ರೆಯಲ್ಲಿ ಈ ಬಾರಿ ದೈವಿ ಲೋಕವೇ ಧರೆಗಿಳಿಯಲಿದೆ. ಅದರಲ್ಲೂ ದಶಮಂಟಪಗಳ ನಡುವೆ ಸ್ಪರ್ಧೆ ಇರುವ ಹಿನ್ನೆಲೆಯಲ್ಲಿ ಅದ್ದೂರಿ ಮಂಟಪಗಳನ್ನು ಹೊರತರಲು ಸಮಿತಿಗಳು ಸಿದ್ಧತೆ ಮಾಡಿಕೊಳ್ಳುತ್ತಿವೆ.

ಪ್ರತಿ ಮಂಟಪಗಳು ಪೌರಾಣಿಕ ಕಥಾ ಹಂದರಗಳ ಒಂದು ಭಾಗಗಳನ್ನು ಆಯ್ದುಕೊಂಡಿದ್ದು, ಅದಕ್ಕೆ ತಕ್ಕಂತೆ ದೇವಾನು ದೇವತೆಗಳು, ಋಷಿ ಮುನಿಗಣ, ಅಸುರರ ಕಲಾಕೃತಿಗಳು, ಸನ್ನಿವೇಶ, ಮಂಟಪಗಳ ರಚನೆ ಮಾಡಲಾಗುತ್ತಿದೆ. ಕಲಾಕಾರರು ಮತ್ತು ತಂತ್ರಜ್ಞರು ಹಗಲಿರುಳು ಈ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಮಡಿಕೇರಿ, ಅ.1–ಐತಿಹಾಸಿಕ ಹಿನ್ನೆಲೆ ಹೊಂದಿರುವ ಮಡಿಕೇರಿ ದಸರಾ ಜನೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ಅ.3ರಂದು ಶಕ್ತಿ ದೇವತೆಗಳ 4 ಕರಗಗಳ ಪ್ರದಕ್ಷಿಣೆ ಮೂಲಕ ಮಡಿಕೇರಿ ದಸರಾಕ್ಕೆ ವಿಧ್ಯುಕ್ತ ಚಾಲನೆ ದೊರೆಯಲಿದೆ.

ನಗರದ ಗಾಂಧಿ ಮೈದಾನದಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಗಾಗಿ ಬೃಹತ್ ವೇದಿಕೆ ಸಿದ್ಧಪಡಿಸಲಾಗುತ್ತಿದೆ. ಅ.4ರಿಂದ ಸಂಜೆ 6 ಗಂಟೆಗೆ 9 ದಿನಗಳ ಕಾಲ 'ಕಲಾ ಸಂಭ್ರಮ' ವೇದಿಕೆಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ. 300 ಅಡಿ ಉದ್ದ, 100 ಅಡಿ ಅಗಲದ ವಾಟರ್ ಪ್ರೂಫ್ ವೀಕ್ಷಕರ ಗ್ಯಾಲರಿ ಅಳವಡಿಸಲಾಗುತ್ತಿದ್ದು, 70 ಅಡಿ ಉದ್ದ ಮತ್ತು 40 ಅಡಿ ಅಗಲದ ಸಾಂಸ್ಕೃತಿಕ ವೇದಿಕೆ ನಿರ್ಮಿಸಲಾಗುತ್ತಿದೆ. 5 ಸಾವಿರ ಮಂದಿ ಏಕಕಾಲದಲ್ಲಿ ಕುಳಿತು ಕಾರ್ಯಕ್ರಮ ವೀಕ್ಷಿಸಬಹುದು. ಅಲ್ಲದೆ, ವೇದಿಕೆಯಲ್ಲಿ ಬೃಹತ್ ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗುತ್ತಿದ್ದು, ವೇದಿಕೆಯ ಹಿಂಬದಿಯ ವೀಕ್ಷಕರಿಗೂ ಕಾರ್ಯಕ್ರಮ ಆಸ್ವಾದಿಸಲು ಇದರಿಂದ ಸಾಧ್ಯವಾಗಲಿದೆ.

ತಾಲೂಕು ಕಚೇರಿ ಕಚೇರಿ, ಸ್ಟೋನ್ ಹಿಲ್, ಡೈರಿ ರಸ್ತೆ ಮತ್ತು ನಗರ ಪ್ರವೇಶಿಸುವ ದ್ವಾರದಲ್ಲಿ ನವದುರ್ಗೆಯರ ವಿದ್ಯುತ್ ಅಲಂಕೃತ ಕಲಾಕೃತಿಗಳನ್ನು ಅಳವಡಿಸುವ ಕಾರ್ಯ ಮಾತ್ರ ನಡೆಯಬೇಕಿದೆ. ದಸರಾ ಸಂಭ್ರಮ ಕಣ್ತುಂಬಿಕೊಳ್ಳಲು ಜಿಲ್ಲೆಗೆ ಅತೀ ಹೆಚ್ಚಿನ ಪ್ರವಾಸಿಗರನ್ನು ಸೆಳೆಯಲು ಕೂಡ ವಿವಿಧ ಯೋಜನೆಯನ್ನು ದಸರಾ ಸಮಿತಿಗಳು ರೂಪಿಸುತ್ತಿವೆ. ದಸರಾ ಜನೋತ್ಸವದಲ್ಲಿ ಇದೇ ಮೊದಲ ಬಾರಿಗೆ ಕಾಫಿ ಉದ್ಯಮ ಪ್ರತಿಬಿಂಬಿಸಲು 2 ದಿನ 'ಕಾಫಿ ದಸರಾ' ಆಯೋಜಿಸಲು ದಸರಾ ಸಾಂಸ್ಕೃತಿಕ ಸಮಿತಿ ಮುಂದಾಗಿದೆ.

ದಸರಾ ದಶಮಂಟಪಗಳು ಶೋಭಾಯಾತ್ರೆಯಲ್ಲಿ ಸಾಗಿ ಬರುವ ಪ್ರಮುಖ ರಸ್ತೆಯ ಒಂದು ಬದಿಯಲ್ಲಿ ವೀಕ್ಷಕರ ಗ್ಯಾಲರಿ ನಿರ್ಮಾಣ ಕಾರ್ಯವೂ ನಡೆಯಲಿದೆ. ಪೊಲೀಸ್ ಠಾಣೆ, ನಗರಸಭೆ ಕಚೇರಿ ಮುಂಭಾಗ ಪ್ರತಿ ವರ್ಷದಂತೆ ಈ ಬಾರಿಯೂ ಗ್ಯಾಲರಿಗಳು ನಿರ್ಮಾಣವಾಗಲಿದೆ. ನಗರದ ಗುಂಡಿ ಬಿದ್ದ ರಸ್ತೆಗಳಿಗೆ ಡಾಂಬರು ಹಾಕಿ ಗುಂಡಿ ಮುಚ್ಚುವ ಕಾರ್ಯ ಮಾಡಲಾಗುತ್ತಿದ್ದು, ದಶಮಂಟಪಗಳ ಶೋಭಾಯಾತ್ರೆ ತೆರಳುವ ರಸ್ತೆಗಳನ್ನು ಮೊದಲು ದುರಸ್ತಿಗೊಳಿಸಲಾಗುತ್ತಿದೆ.

ಪೌರಕಾರ್ಮಿಕರ ಕುಂದುಕೊರತೆ ನಿವಾರಣೆಗೆ ಪಪಂ ಬದ್ಧ



ವಿರಾಜಪೇಟೆ ಪುರಭವನದಲ್ಲಿ ನಡೆದ ಪೌರಕಾರ್ಮಿಕರ ದಿನಾಚರಣೆಯನ್ನು ಪಪಂ ಅಧ್ಯಕ್ಷೆ ಮನೆಯಪಂಡ ದೇಚಮ್ಮ ಉದ್ಘಾಟಿಸಿದರು.

ವಿರಾಜಪೇಟೆ, ಅ.1–ದಿನನಿತ್ಯ ಸ್ವಚ್ಛತೆ ಕಾರ್ಯದಲ್ಲಿ ತೊಡಗುವ ಪೌರಕಾರ್ಮಿಕರು ನಿಮ್ಮ ಆರೋಗ್ಯದ ಕಡೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಮನೆಯಪಂಡ ದೇಚಮ್ಮ ಹೇಳಿದರು.

ಪಟ್ಟಣದ ಪುರಭವನದಲ್ಲಿ ಮಂಗಳವಾರ ನಡೆದ ಪೌರಕಾರ್ಮಿಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಪೌರಕಾರ್ಮಿಕರಿಗೆ ಸ್ವಚ್ಛತೆಗೆ ಬೇಕಾದ ಪರಿಕರ, ಸಮವಸ್ತ್ರ ಒದಗಿಸುವುದು ಸೇರಿದಂತೆ ಅವರ ಕುಂದುಕೊರತೆ ನಿವಾರಿಸಲು ಪಪಂ ಬದ್ಧವಾಗಿದೆ. ಪಪಂನ ಎಲ್ಲಾ ಸಿಬ್ಬಂದಿ ಸಾರ್ವಜನಿಕರಿಂದ ಯಾವುದೇ ದೂರು ಬಾರದಂತೆ ಕರ್ತವ್ಯ ನಿರ್ವಹಿಸಬೇಕು. ಸಾರ್ವಜನಿಕರ ಕೆಲಸಗಳನ್ನು ಸಕಾಲದಲ್ಲಿ ಮಾಡಿದಾಗ ಮಾತ್ರ ಆಡಳಿತದಲ್ಲಿ ಯಶಸ್ಸು ಕಾಣಲು ಸಾಧ್ಯ ಎಂದರು.

ಸ್ವಚ್ಛತೆ ಕುರಿತು ಗಮನವಿಟ್ಟು ಕೆಲಸ ಮಾಡಬೇಕು. ಉತ್ತಮವಾಗಿ ಕೆಲಸ ಮಾಡಿದರು ಸಾರ್ವಜನಿಕರು ಅದನ್ನು ಗುರುತಿಸುತ್ತಿಲ್ಲ ಎಂದರೆ, ಎಲ್ಲಿ ಲೋಪವಾಗಿದೆ ಎಂಬುದನ್ನು ಅವಲೋಕನ ಮಾಡಿಕೊಳ್ಳುವ ಮೂಲಕ ಸರಿಪಡಿಸಬೇಕು. ಪಪಂನಲ್ಲಿ ಏನೇ ಸಮಸ್ಯೆಗಳಿದ್ದಲ್ಲಿ ನನ್ನ ಗಮನಕ್ಕೆ ತಂದರೆ ಪರಿಹರಿಸಲಾಗುವುದು ಎಂದು ತಿಳಿಸಿದರು.


ಮುಖ್ಯಾಧಿಕಾರಿ ಚಂದ್ರಕುಮಾರ್, ಉಪಾಧ್ಯಕ್ಷೆ ಫಾಸಿಹಾ ತಬ್ಸುಂ, ಸದಸ್ಯ ಸಿ.ಕೆ.ಪೃಥ್ವಿನಾಥ್ ಮಾತನಾಡಿದರು. ಇದೇ ವೇಳೆ ಪೌರಕಾರ್ಮಿಕರು, ಪಪಂ ಸದಸ್ಯರು ಮತ್ತು ಸಿಬ್ಬಂದಿಗೆ ಆಯೋಜಿಸಿದ್ದ ಕ್ರೀಡಾಕೂಟ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಸದಸ್ಯರಾದ ಎಸ್.ಹೆಚ್.ಮತೀನ್, ಡಿ.ಪಿ.ರಾಜೇಶ್, ಮಹ್ಮದ್ ರಾಫಿ, ಜಲೀಲ್, ಪೂರ್ಣಿಮಾ, ರಜನಿಕಾಂತ್, ರಂಜಿ ಪೂಣಚ್ಚ, ನಾಮನಿರ್ದೇಶಿತ ಸದಸ್ಯರಾದ ಜಿ.ಜಿ.ಮೋಹನ್, ದಿನೇಶ್, ನೌಕರರ ಸಂಘದ ಅಧ್ಯಕ್ಷ ಇರ್ಫಾನ್, ಕಾರ್ಯದರ್ಶಿ ವೇಲು, ಪೌರಕಾರ್ಮಿಕರಾದ ಸುಬ್ರಹ್ಮಣಿ, ಗೌರಿ, ಮುರುಗ, ಪರಿಸರ ಇಂಜಿನಿಯರ್ ನೀತು ಉಪಸ್ಥಿತರಿದ್ದರು.

ಬೇಗೂರು ಬಸ್ ನಿಲ್ದಾಣದಲ್ಲಿ 3 ಮೊಬೈಲ್, ಪರ್ಸ್ ಕಳವು

ಬೇಗೂರು, ಅ.1–ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ಸಾರಿಗೆ ಬಸ್ ನಿಲ್ದಾಣದಲ್ಲಿ ಮೂವರ ಮೊಬೈಲ್ ಹಾಗೂ ಪರ್ಸ್ ಕಳವಾಗಿದೆ.

ನಿಲ್ದಾಣದಿಂದ ಮೈಸೂರಿಗೆ ಬಸ್ ಹತ್ತುವಾಗ ಹೊಸಪುರ ಗ್ರಾಮದ ರೇಣುಕ ಪ್ರಸಾದ, ನಾಗೇಶ್ ಬೇಗೂರು, ಆಲತ್ತೂರು ಶೆಟ್ಟಹಳ್ಳಿ ಗ್ರಾಮದ ಮಹೇಶ್ ಮೊಬೈಲ್ ಹಾಗೂ ಮಹಿಳೆಯೊಬ್ಬರ ಪರ್ಸ್ ಅನ್ನು ಕಳವು ಮಾಡಲಾಗಿದೆ. ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಳೆದ ವರ್ಷ ಬಸ್ ನಿಲ್ದಾಣದ ಧ್ವನಿ ವರ್ಧಕ ಕಳುವಾಗಿತ್ತು. ಈ ರೀತಿಯ ಕಳವು ಪ್ರಕರಣಗಳು ಹಾಗಾಗ ಬಸ್ ನಿಲ್ದಾಣದಲ್ಲಿ ನಡೆಯುತ್ತಲೇ ಇವೆ. ಆದರೆ, ಪೊಲೀಸರು ಈ ಬಗ್ಗೆ ಗಮನ ಹರಿಸುತ್ತಿಲ್ಲ. ಬಸ್ ನಿಲ್ದಾಣದಲ್ಲಿ ಪೊಲೀಸರು ಇಲ್ಲದಿರುವ ಕಾರಣ ಕಳ್ಳರು ಪದೇ ಪದೇ ಕೈಚಳಕದಿಂದ ವಸ್ತುಗಳನ್ನು ಕಳವು ಮಾಡುತ್ತಿದ್ದಾರೆ.



ಬೇಗೂರು ಸಾರಿಗೆ ಬಸ್ ನಿಲ್ದಾಣದಲ್ಲಿ ಕತ್ತಲು ಆವರಿಸಿರುವುದು.

ಕ್ಯಾಮರಾ ಅಳವಡಿಕೆಗೆ ಆಗ್ರಹ: ಇಲ್ಲಿ ಬಸ್ ನಿಲ್ದಾಣ ಸಂಚಾರಿ ನಿಯಂತ್ರಕರ ಕೊಠಡಿ ಬಳಿ ಎರಡು ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಆದರೆ, ಹೆಡೆಯಾಲ, ಚಿಕ್ಕಬರಗಿ ಮತ್ತು ಕಬ್ಬಹಳ್ಳಿ ಗ್ರಾಮಗಳ ಕಡೆಗೆ ತೆರಳುವ ಬಸ್‌ಗಳು ನಿಲ್ಲುವ ಸ್ಥಳಗಳಲ್ಲಿ ಕ್ಯಾಮರಾ ಅಳವಡಿಸಿಲ್ಲ. ಹೀಗಾಗಿ ಕಳ್ಳರು ತಮ್ಮ ಕೈಚಳಕ ತೋರಿಸುತ್ತಿದ್ದಾರೆ.

ನಿಲ್ದಾಣದಲ್ಲಿ ಕತ್ತಲು: ಬಸ್ ನಿಲ್ದಾಣ ಒಳ ಆವರಣದಲ್ಲಿ ವಿದ್ಯುತ್ ದೀಪಗಳಿದ್ದರೆ, ಕಬ್ಬಳ್ಳಿ, ಹೆಡಿಯಾಲ, ಕೋಟೆಕೆರೆ ಸೇರಿದಂತೆ ಕೆಲ ಗ್ರಾಮಗಳಿಗೆ ತೆರಳುವ ಸ್ಥಳಗಳಲ್ಲಿ ವಿದ್ಯುತ್ ದೀಪಗಳಿಲ್ಲದೆ ಕತ್ತಲು ಆವರಿಸುತ್ತದೆ.

ಬಸ್ ನಿಲ್ದಾಣ ಸುತ್ತಲೂ ವಿದ್ಯುತ್ ದೀಪ ಮತ್ತು ಸಿಸಿ ಕ್ಯಾಮರಾ ಅಳವಡಿಸಿ, ಪೊಲೀಸರನ್ನು ನಿಯೋಜಿಸುವ ಮೂಲಕ ಕಳ್ಳರ ಹಾವಳಿ ತಡೆಗೆ ಗ್ರಾಮದ ಗ್ರಾಮಸ್ಥರು ಮತ್ತು ಪ್ರಯಾಣಿಕರು ಆಗ್ರಹಿಸಿದ್ದಾರೆ.

ಕ್ಷುಲ್ಲಕ ವಿಚಾರಕ್ಕೆ ಯುವಕನಿಗೆ ಚಾಕುವಿನಿಂದ ಇರಿತ

ಚಾಮರಾಜನಗರ, ಅ.1–ಕ್ಷುಲ್ಲಕ ವಿಚಾರಕ್ಕೆ ಜಗಳ ನಡೆದು ಯುವಕನೋರ್ವ ಮತ್ತೊಬ್ಬ ಯುವಕನಿಗೆ ಚಾಕುವಿನಿಂದ ಇರಿದಿರುವ ಘಟನೆ ಚಾಮರಾಜನಗರದ ಕರಿನಂಜನಪುರ ಹುಣಿಸೆ ಮರದ ಬಳಿ ಮಂಗಳವಾರ ನಡೆದಿದೆ.

ಇಬ್ಬರು ಯುವಕರ ವೈಯಕ್ತಿಕ ವಿಚಾರಕ್ಕೆ ಜಗಳ ನಡೆದಿದ್ದು, ಈ ಸಂದರ್ಭದಲ್ಲಿ ಯುವಕನೋರ್ವ ಮತ್ತೊಬ್ಬ ಯುವಕನ ಎಡಗೈಗೆ ಚಾಕುವಿನಿಂದ ಇರಿದಿದ್ದಾನೆ. ಗಾಯವಾದ ಯುವಕನನ್ನು ನಗರದ ಸಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾನೆ. ಹಲ್ಲೆ ಆರೋಪಿಯನ್ನು ಬಂಧಿಸಲಾಗದೆ ಎಂದು ಡಿವೈಎಸ್‌ಪಿ ಲಕ್ಷ್ಮಯ್ಯ ತಿಳಿಸಿದ್ದು, ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪ್ರಾಪ್ತೆ ಗರ್ಭಿಣಿ ಪ್ರಕರಣ ಪೋಕ್ಸೋ ಕಾಯ್ದೆಯಡಿ ವ್ಯಕ್ತಿ ಬಂಧನ

ಯಳಂದೂರು, ಅ.1– ಅಪ್ರಾಪ್ತೆ ಗರ್ಭಿಣಿಯಾಗಲು ಕಾರಣನಾದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಸಮೀಪದ ಚಾಟೀಪುರ ಗ್ರಾಮದ ಮಹೇಶ್ ಬಂಧಿತ ಆರೋಪಿ. ಈತ ಅಪ್ರಾಪ್ತೆಯ ಮನೆಗೆ ಬಂದು ಹೋಗುತ್ತಿದ್ದ. ಈ ವೇಳೆ ಆಕೆಯೊಂದಿಗೆ ದೈಹಿಕ ಸಂಬಂಧ ಬೆಳೆಸಿ, ಗರ್ಭಿಣಿಯಾಗಲು ಕಾರಣನಾಗಿದ್ದಾನೆ.

ಈಕೆಯ ಆರೋಗ್ಯ ತಪಾಸಣೆಗೆಂದು ಮನೆಯವರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ತಪಾಸಣೆ ವೇಳೆ ಗರ್ಭಿಣಿಯಾಗಿರುವುದು ಪತ್ತೆಯಾಗಿದೆ. ನಂತರ ವೈದ್ಯರು ಸಂತೆಮರಹಳ್ಳಿ ಸಿಡಿಪಿಓ ಕಚೇರಿಗೆ ಮಾಹಿತಿ ನೀಡಿದ್ದಾರೆ.

ಬಳಿಕ ಸಿಡಿಪಿಓ ಕಚೇರಿ ಸಿಬ್ಬಂದಿ ಹಾಗೂ ಯಳಂದೂರು ಠಾಣೆ ಪೊಲೀಸ್ ವಿಚಾರಣೆ ನಡೆಸಿ ಆರೋಪಿಯನ್ನು ಬಂಧಿಸಿ, ಪೋಕ್ಸೋ ಪ್ರಕರಣ ದಾಖಲಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

657 ಫಲಾನುಭವಿಗಳಿಗೆ ಸಲಕರಣೆ ವಿತರಣೆ

ಸರ್ಕಾರ, ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ 60 ಲಕ್ಷ ರೂ. ವೆಚ್ಚ

ಚಾಮರಾಜನಗರ, ಅ.1–ರಾಷ್ಟ್ರೀಯ ವಯೋಶ್ರೀ ಹಾಗೂ ವಿಶೇಷಚೇತನರ ಸಹಾಯ ಯೋಜನೆಯಡಿ ಜಿಲ್ಲೆಯ 240 ಹಿರಿಯ ನಾಗರಿಕರು ಹಾಗೂ 417 ವಿಶೇಷ ಚೇತನರು ಸೇರಿದಂತೆ ಒಟ್ಟು 657 ಫಲಾನುಭವಿಗಳಿಗೆ 60 ಲಕ್ಷ ರೂ. ಮೊತ್ತದ ಸಾಧನ ಸಲಕರಣೆಗಳನ್ನು ನಗರದಲ್ಲಿ ಮಂಗಳವಾರ ಉಚಿತವಾಗಿ ವಿತರಿಸಲಾಯಿತು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಅಂತಾರಾಷ್ಟ್ರೀಯ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಹಿರಿಯ ನಾಗರಿಕರ ಸಬಲೀಕರಣ, ವಿಕಲಚೇತನರ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಆರ್ಟಿಫೀಶಿಯಲ್ ಲಿಂಬ್ಸ್ ಮ್ಯಾನುಫ್ಯಾಕ್ಚರಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ (ಅಲಿಂಕೋ) ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಫಲಾನುಭವಿಗಳಿಗೆ ಸಲಕರಣೆ ವಿತರಣೆ ವಿತರಿಸಿದರು.

ಬಳಿಕ ಮಾತನಾಡಿದ ಶಾಸಕ ಪುಟ್ಟರಂಗಶೆಟ್ಟಿ, ದೇಹದ ಯಾವುದೇ ಭಾಗದಲ್ಲಿ ಊನವಾದರೂ ಅದು ಅಂಗವಿಲತೆಯಾಗುತ್ತದೆ. ಅಂಗವಿಕಲತೆ ಹುಟ್ಟಿನಿಂದ ಅಥವಾ ಹುಟ್ಟಿದ ಬಳಿಕ ಬರಬಹುದು. ಅಂಗವಿಕಲತೆ ಕತ್ತಲೆಯ ಬದುಕಾಗಿದೆ. ಹಾಗಂತ ಯಾವುದೇ ಅಂಗವಿಕಲರು ಧೃತಿಗೆಡಬಾರದು. ಅಗತ್ಯ ಸೌಲಭ್ಯಗಳನ್ನು ನೀಡಿ ಅವರ ಬಾಳಿನಲ್ಲಿ ಬೆಳಕು ಮೂಡಿಸಲು ಸರ್ಕಾರದೊಂದಿಗೆ ವಿವಿಧ ಸಂಘ–ಸಂಸ್ಥೆಗಳು ನೆರವಾಗಿವೆ. ಅವುಗಳಲ್ಲಿ ಅಲಿಂಕೋ ಸಂಸ್ಥೆಯು ಒಂದಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪನಾಗ್, ವಿಶೇಷ ಚೇತನರಿಗೆ ಅನುಕಂಪ ಬೇಡ, ಅವಕಾಶ ನೀಡಬೇಕು. ಸರ್ಕಾರ ವಿಶೇಷಚೇತನರ ಪುನರ್ವಸತಿಗಾಗಿ ಹಲವಾರು ಸೌಲಭ್ಯಗಳನ್ನು ಜಾರಿಗೊಳಿಸಿದೆ. ವಿಶೇಷಚೇತನರಿಗೆ ಮೀಸಲಾಗಿರುವ ಸೌಲಭ್ಯಗಳನ್ನು ತಲುಪಿಸಿ ಸಮಾಜದಲ್ಲಿ ಎಲ್ಲರಂತೆ ಬದುಕಲು ಅವಕಾಶ ಮಾಡಿಕೊಡಬೇಕು. ಗೌರವದಿಂದ ನೋಡಿಕೊಳ್ಳಬೇಕು. ಆಗಮಾತ್ರ ಸಮಸಮಾಜ ನಿರ್ಮಾಣ ಸಾಧ್ಯ. ಇದೊಂದು ಅರ್ಥಪೂರ್ಣ ಕಾರ್ಯಕ್ರಮವಾಗಿದೆ ಎಂದರು.

ವಿಪರ್ಯಾಸ ಎಂದರೇ ನಾವು ಆಧುನೀಕತೆಗೆ ಮಾರುಹೋಗಿ ಮಾನವೀಯ ಮೌಲ್ಯಗಳನ್ನು ಕಳೆದುಕೊಳ್ಳುತ್ತಿದ್ದೇವೆ. ಹಿರಿಯ ಜೀವಗಳನ್ನು ವೃದ್ಧಾಶ್ರಮಕ್ಕೆ ದೂಡುತ್ತಿದ್ದೇವೆ. ಮುಂದುವರಿದ ಸಮಾಜ ಹಾಗೂ ಅನುಕೂಲಕರ ವ್ಯಕ್ತಿಗಳೇ ಹಿರಿಯರನ್ನು ಸಹಿಸಿಕೊಳ್ಳಲಾಗದೇ ವೃದ್ಧಾಶ್ರಮಕ್ಕೆ ಕಳುಹಿಸುತ್ತಿದ್ದು, ಇದು ತಪ್ಪಬೇಕು. ತಂದೆ–ತಾಯಿಗಳೇ ಕಣ್ಣಿಗೆ ಕಾಣುವ ನಿಜವಾದ ದೇವರು. ಹಿರಿಯ ನಾಗರಿಕರ ಜ್ಞಾನ, ಅನುಭವ ನಮಗೆ, ಮುಂದಿನ ಪೀಳಿಗೆಗೆ ಅವಶ್ಯವಾಗಿದೆ ಎಂದು ತಿಳಿಸಿದರು.



ಚಾಮರಾಜನಗರದಲ್ಲಿ ಹಿರಿಯ ನಾಗರಿಕರು ಹಾಗೂ ವಿಶೇಷಚೇತನರಿಗೆ ಸಾಧನ ಸಲಕರಣೆ ವಿತರಿಸಲಾಯಿತು.

ಜಿಪಂ ಸಿಇಓ ಮೋನಾ ರೋತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಚಿದಂಬರ, ನಗರಸಭೆ ಅಧ್ಯಕ್ಷ ಎಸ್.ಸುರೇಶ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಮಂಜುನಾಥ್, ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ಸಕಲೇಶ್ವರ, ಅಲಿಂಕೋ ಸಂಸ್ಥೆ ಕಿರಿಯ ವ್ಯವಸ್ಥಾಪಕ ರಿಷಭ್ ಮಲ್ಹೋತ್ರ, ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ಆರಂಭದಲ್ಲಿ ನಗರದ ಪೇಟೆ ಪ್ರೈಮರಿ ಶಾಲೆ 3ನೇ ತರಗತಿ ವಿದ್ಯಾರ್ಥಿನಿ ನುಸಹಾ ಫಾತಿಮಾ ಖಾನ್ ಸಂವಿಧಾನ ಪೀಠಿಕೆ ಬೋಧಿಸಿದಳು.

> ಸಾಮಾಜಿಕ ವ್ಯವಸ್ಥೆಯಲ್ಲಿ ಹಿರಿಯರು ಹಾಗೂ ವಿಶೇಷಚೇತನರನ್ನು ಎಲ್ಲರಂತೆ ಗೌರವದಿಂದ ನಡೆಸಿಕೊಳ್ಳಬೇಕು. ಜಿಲ್ಲೆಯಲ್ಲಿ 18,416 ವಿಶೇಷಚೇತನರನ್ನು ಗುರುತಿಸಲಾಗಿದ್ದು, ಅವರಿಗೆ ಸರ್ಕಾರದ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ತಲುಪಿಸಬೇಕಾದ ಜವಾಬ್ದಾರಿ ನಮ್ಮೆಲ್ಲರಿಗಿದೆ. ಇತ್ತೀಚೆಗೆ ಪ್ಯಾರಿಸ್‌ನಲ್ಲಿ ನಡೆದ ಪ್ಯಾರಾಲಂಪಿಕ್ಸ್‌ನಲ್ಲಿ ವಿಶೇಷಚೇತನರು ಚಿನ್ನ ಸೇರಿದಂತೆ ಒಟ್ಟು 60 ಪದಕಗಳನ್ನು ಗೆದ್ದು ದೇಶಕ್ಕೆ ಕೀರ್ತಿ ತಂದಿದ್ದಾರೆ. ಈ ನಿಟ್ಟಿನಲ್ಲಿ ವಿಶೇಷಚೇತನರಿಗೆ ಸಮಾನಾವಕಾಶ ನೀಡಿ ಗುರಿಮುಟ್ಟಲು ಪ್ರೇರೇಪಿಸಬೇಕು.
>
> –ಎ.ಆರ್.ಕೃಷ್ಣಮೂರ್ತಿ, ಶಾಸಕ

ವಾಣಿಜ್ಯ ವಿದ್ಯಾಸಂಸ್ಥೆಗೆ ಶೇ.95ರಷ್ಟು ಫಲಿತಾಂಶ



ಎಂ.ದರ್ಶಿನಿ

ಚಾಮರಾಜನಗರ: ನಗರದ ಶ್ರೀ ವಾಣಿಜ್ಯ ಮತ್ತು ಕಂಪ್ಯೂಟರ್ ವಿದ್ಯಾಸಂಸ್ಥೆಗೆ ಕಂಪ್ಯೂಟರ್, ಟೈಪಿಂಗ್ ಮತ್ತು ಶಾರ್ಟ್‌ಹ್ಯಾಂಡ್ ಪರೀಕ್ಷೆಯಲ್ಲಿ ಶೇ.95ರಷ್ಟು ಫಲಿತಾಂಶ ಬಂದಿದೆ.

ಸಂಸ್ಥೆಯ 13 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, ಐವರು ಪ್ರಥಮ ದರ್ಜೆ, ಒಬ್ಬರು ದ್ವಿತಿಯ ಹಾಗೂ ಇಬ್ಬರು ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಎಂ.ದರ್ಶಿನಿ, ಎಸ್.ಸಿದ್ದೇಶ್, ಹೆಚ್.ಎಸ್.ಕಲಾವತಿ, ನಂದನ್, ಎಸ್.ಭಾರದ್ವಜ್, ಬಿ.ಭಾವನಾ, ಎಂ.ಅಶ್ವಿನಿ, ಟಿ.ಎಂ.ಲಕ್ಷ್ಮೀದೇವಿ, ಮಹೇಶ್ವರಿ ಪ್ರಿಯಾ ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದು ಸಂಸ್ಥೆಗೆ ಕೀರ್ತಿ ತಂದಿದ್ದಾರೆ ಎಂದು ಪ್ರಾಂಶುಪಾಲ ಆರ್.ವಿ.ಮಹದೇವಪ್ಪ ಹಾಗೂ ಶಿಕ್ಷಕಿ ಲತಾ ಮಹದೇವಪ್ಪ ಅಭಿನಂದನೆ ಸಲ್ಲಿಸಿದ್ದಾರೆ.

ಜಿಂಕೆ ಬೇಟೆಗಾರನ ಬಂಧನ...



ರಾಮಾಪುರ ವನ್ಯಜೀವಿ ವಲಯದ ಕೌದಳ್ಳಿ ವ್ಯಾಪ್ತಿಯ ಮಹದೇಶ್ವಬೆಟ್ಟ ಮುಖ್ಯ ರಸ್ತೆ ಬಳಿ ನಾಡಬಂದೂಕಿನಿಂದ 3 ಜಿಂಕೆಗಳನ್ನು ಬೇಟೆಯಾಡಿದ್ದ ಹರೀಶ ಆರೋಪಿಯನ್ನು ಅರಣ್ಯಾಧಿಕಾರಿ ಕಾಂತರಾಜ ಎಸ್.ಚವ್ಹಾಣ್, ಉಪ ವಲಯ ಅರಣ್ಯಾಧಿಕಾರಿ ಆನಂದ ಹಲಸಪ್ಪಗೋಳ, ಗಸ್ತು ಅರಣ್ಯ ಪಾಲಕರಾದ ಸಿ.ಬಿ.ರಕ್ಷಿತ್, ಕಲ್ಮೇಶ್ ತುರಮುರಿ, ವೀರೇಶ, ಶಿದ್ದಪ್ಪ ಮಾರುತಿ ಮನೀಕಟ್ಟಿ ಬಂಧಿಸಿದ್ದಾರೆ. ಪರಾರಿಯಾದ ಮತ್ತಿಬ್ಬರು ಗೋವಿಂದ ಮತ್ತು ಪ್ರಭು ಆರೋಪಿಗಳ ಪತ್ತೆ ಕಾರ್ಯವನ್ನು ಅರಣ್ಯಾಧಿಕಾರಿಗಳು ಕೈಗೊಂಡಿದ್ದಾರೆ.

ಚಾಮರಾಜನಗರದಲ್ಲಿ ನಿವೃತ್ತ ನೌಕರರ ಪ್ರತಿಭಟನೆ

ಚಾಮರಾಜನಗರ, ಅ.1–ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ನಿವೃತ್ತ ನೌಕರರ ವೇದಿಕೆ ವತಿಯಿಂದ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾಡಳಿತ ಭವನದ ಎದುರು ಜಮಾಯಿಸಿದ ವೇದಿಕೆಯ ಪದಾಧಿಕಾರಿಗಳು ಹಾಗೂ ನಿವೃತ್ತ ನೌಕರರು ಕಪ್ಪು ಪಟ್ಟಿ ಧರಿಸಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ವೇದಿಕೆ ಸಂಚಾಲಕ ಎ.ಶಿವಣ್ಣ ಮಾತನಾಡಿ, 2022ರ ಜು.1ರಿಂದ 2024ರ ಜ.31ರ ಅವಧಿಯಲ್ಲಿ ನಿವೃತ್ತರಾದ ನೌಕರರಿಗೆ ಡಿಸಿಆರ್‌ಜಿ ಕಮ್ಯುಟೇಶನ್ ಗಳಿಕೆ ರಜೆ ನಗದೀಕರಣದ ಮೊತ್ತವನ್ನು ಏಳನೇ ವೇತನ ಆಯೋಗದ ಲೆಕ್ಕಾಚಾರದಲ್ಲಿ ನೀಡಬೇಕು ಹಾಗೂ ಪರಿಷ್ಕೃತ ಆದೇಶ ಹೊರಡಿಸಬೇಕು ಎಂದು ಒತ್ತಾಯಿಸಿದರು. ನಂತರ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ವೇದಿಕೆ ಜಿಲ್ಲಾ ಸಂಚಾಲಕ ಎನ್.ಎಸ್. ಶಿವಸ್ವಾಮಿ, ತಾಲೂಕು ಸಂಚಾಲಕ ಎಚ್.ಮಹದೇವಯ್ಯ, ಗುರುಸಿದ್ದಪ್ಪ, ಪದಾಧಿಕಾರಿಗಳಾದ ಮಹದೇವನಾಯಕ, ಶಿವನಾಗಪ್ಪ, ಭಾಗ್ಯ, ಗುರುಸಿದ್ದಪ್ಪ, ರುದ್ರಸ್ವಾಮಿ, ನಾಗರತ್ನ, ರಾಧಾ, ರತ್ನಮ್ಮ ಇತರರು ಭಾಗವಹಿಸಿದ್ದರು.



ಚಾಮರಾಜನಗರ ಜಿಲ್ಲಾಡಳಿತ ಭವನದ ಎದುರು ನಿವೃತ್ತ ನೌಕರರು ಪ್ರತಿಭಟನೆ ನಡೆಸಿದರು.

ದಸರಾ ಮಹೋತ್ಸವ: ಮೈಸೂರಿನ ಲಿಂಗಾಂಬುದಿ ಕೆರೆಯ 'ಬೊಟಾನಿಕಲ್ ಗಾರ್ಡನ್'ನಲ್ಲೂ ಫಲಪುಷ್ಪ ಪ್ರದರ್ಶನ

ಅ.3ರಿಂದ 13ರವರೆಗೆ ಕಣ್ಮನ ಸೆಳೆಯಲಿದೆ ಪುಷ್ಪ-ಫಲರಾಶಿ





ಮೈಸೂರಿನ ಲಿಂಗಾಂಬುದಿ ಕೆರೆ ಆವರಣದಲ್ಲಿರುವ ಬೊಟಾನಿಕಲ್ ಗಾರ್ಡನ್‌ನಲ್ಲಿ ದಸರಾ ಫಲಪುಷ್ಪ ಪ್ರದರ್ಶನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

● ಎಂ.ಟಿ. ಯೋಗೇಶ್ ಕುಮಾರ್

ಮೈಸೂರು, ಅ.1– ದಸರಾ ಮಹೋತ್ಸವದಲ್ಲಿ ಈ ಬಾರಿ ಮೈಸೂರಿನ ಜನರಿಗೆ ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಡಬಲ್ ಧಮಾಕ ದೊರೆತಿದ್ದು, ಲಿಂಗಾಂಬುದಿ ಕೆರೆ ಆವರಣದಲ್ಲಿ ಊಟಿ ಮಾದರಿಯಲ್ಲಿ ನಿರ್ಮಾಣಗೊಂಡಿರುವ ಬೊಟಾನಿಕಲ್ ಗಾರ್ಡನ್‌ನಲ್ಲಿ ಮೊದಲ ಬಾರಿಗೆ ಫಲಪುಷ್ಪ ಪ್ರದರ್ಶನ ಏರ್ಪಡಿಸಲಾಗಿದೆ.

ಲಿಂಗಾಂಬುದಿ ಕೆರೆ ಆವರಣದಲ್ಲಿ 15 ಎಕರೆ ವಿಸ್ತೀರ್ಣದಲ್ಲಿ ಮೈದಳೆದಿರುವ ಬೊಟಾನಿಕಲ್ ಗಾರ್ಡನ್‌ನಲ್ಲಿ ಈಗಾಗಲೇ ಹಲವು ಬಗೆಯ ಸಸ್ಯ ಸಂಪತ್ತು ಇದ್ದು, ಅಳಿವಿನಂಚಿನಲ್ಲಿರುವ ಸಸ್ಯ ಸಂಪತ್ತನ್ನು ಸಂರಕ್ಷಣೆ ಮಾಡಲಾಗಿದೆ. ನೈಸರ್ಗಿಕ ವಾತಾವರಣದಲ್ಲಿ ಮೂಡಿ ಬಂದಿರುವ ಬೊಟಾನಿಕಲ್ ಗಾರ್ಡನ್ ಬೆಂಗಳೂರಿನ ಲಾಲ್‌ಬಾಗ್ ಸಸ್ಯೋದ್ಯಾನ ಮತ್ತು ಊಟಿಯಲ್ಲಿರುವ ಬೊಟಾನಿಕಲ್ ಗಾರ್ಡನ್‌ಗೆ ಪರ್ಯಾಯವಾದ ಗಾರ್ಡನ್ ಆಗಿ ಹೊರಹೊಮ್ಮಲಿದೆ.

ಲಿಂಗಾಂಬುದಿ ಕೆರೆ ಆವರಣದ ಬೊಟಾನಿಕಲ್ ಗಾರ್ಡನ್‌ನಲ್ಲಿ ಸ್ಥಳೀಯವಾಗಿ ಬೆಳೆಯುವ ಗಿಡ–ಮರ, ಅಳಿವಿನಂಚಿನಲ್ಲಿರುವ ಗಿಡ–ಮರ ಸೇರಿದಂತೆ ಒಟ್ಟು 300 ಬಗೆಯ ಗಿಡ ಮರಗಳನ್ನು ಬೆಳೆಸಲಾಗಿದೆ. ಅಲ್ಲದೆ, ಸ್ಥಳೀಯವಾಗಿ ಬೆಳೆಯುವ ಬೇವು, ಆಲ, ಅರಳಿಮರ, ಅಲ್ಬಿಜಿಯಾ, ದೊಡ್ಡ ಹೂವಿನ ಬಾಗೆ, ಕೃಷ್ಣ ಸಿರಿಸ್, ಕಪ್ಪು ವಾರ್ನಿಷ್ ಮರ, ಕರೆನ್ ವುಡ್, ಮಾರ್ಕಿಂಗ್ ಅಡಿಕೆ ಮರ, ಹಿಪ್ಪೇಜ್, ವೀಪಿಂಗ್ ಬಾಟಲ್ ಬ್ರಷ್, ರೆಡ್ ಬಾಟಲ್ ಬ್ರಷ್, ಆರೆಂಜ್ ಬಳ್ಳಿ ಸೇರಿದಂತೆ 26 ಬಗೆಯ ಸ್ಥಳೀಯ ಮರಗಳನ್ನು ಬೆಳೆಸಲಾಗಿದೆ. ಅಳಿವಿನಂಚಿನಲ್ಲಿರುವ ಅಲ್ಬಿಜಿಯಾ, ಬೇ ಮರ, ಬಿಲ್ವ ಮರ, ರಕ್ತಚಂದನ ಸೇರಿದಂತೆ ಇನ್ನಿತರ ಮರಗಳ ಸಂತತಿಗೂ ಕ್ರಮ ಕೈಗೊಳ್ಳಲಾಗಿದೆ. ವಿದೇಶಿ ಮರಗಳಾದ ಅಗಾಥಿಸ್, ರೋಬಸ್ಟಾ ಸೈಥೋಲೋಬಿಯಂ, ಪ್ಯಾರಾಹೈಬಾ, ಬ್ರಾಚಿಚಿಟಾನ್, ಅಡಾನ್ಸೋನಿಯಂ ಸೇರಿದಂತೆ ಇನ್ನಿತರ ವಿದೇಶಿ ತಳಿಯ ಮರಗಳನ್ನು ಬೆಳೆಸಲಾಗಿದೆ.

ಫಲಪುಷ್ಪ ಪ್ರದರ್ಶನ: ಕಳೆದ ಒಂದು ವರ್ಷದಿಂದ ಮೈಸೂರಿನ ಬೊಟಾನಿಕಲ್ ಗಾರ್ಡನ್ ಪ್ರೇಕ್ಷಕರ ಕಣ್ಮನ ಸೆಳೆಯುತ್ತಿದೆ. ಅಮೂಲ್ಯ ಸಸ್ಯ ಸಂಪತ್ತು ಹೊಂದಿರುವ ಈ ಗಾರ್ಡನ್‌ನಲ್ಲಿ ಗಿಡದಿಂದಲೇ ವಿವಿಧ ಆಕೃತಿಗಳ ರಚಿಸಿರುವ ಟೊಪೆರರಿ ಗಾರ್ಡನ್ ಗಮನ ಸೆಳೆಯಲಿದೆ. ಇದೀಗ ಅ.3ರಿಂದ 13ರವರೆಗೆ ಬೊಟಾನಿಕಲ್ ಗಾರ್ಡನ್‌ನಲ್ಲಿ ಫಲಪುಷ್ಪ ಪ್ರದರ್ಶನ ಆಯೋಜಿಸಲಾಗಿದ್ದು, 35ಕ್ಕೂ ಹೆಚ್ಚು ಬಗೆಯ 25 ಸಾವಿರ ಹೂವಿನ ಕುಂಡಗಳನ್ನು ಜೋಡಿಸಲಾಗಿದೆ. ಬಣ್ಣ ಬಣ್ಣದ ಹೂವಿನ ಗಿಡಗಳು ನೋಡುಗರನ್ನು ಆಕರ್ಷಿಸುತ್ತಿವೆ. ಫ್ರೆಂಚ್ ಮೇರಿ ಗೋಲ್ಡ್, ಡಯಾಂತರ್ಸ್, ವರ್ಬಿನ, ಬಿಗೋನಿಯಾ, ದಾಲಿಯಾ, ಫೈರ್ ಬುಸ್, ಆರ್ನಮೆಂಟಲ್ ಕೇಲಾ, ಜೀನಿಯಾ, ವಿಂಕಾ, ಸಾಲ್ವಿಯಾ, ಮಾರಿಗೋಲ್ಡ್, ಸ್ವೀಟ್ ವಿಲಿಯಮ್, ಸೆಲೋಶಿಯಾ ಸೇರಿದಂತೆ ವಿವಿಧ ತಳಿಯ ಗಿಡಗಳನ್ನು ಬೆಳೆಸಲಾಗಿದೆ.

ವಿವಿಧ ಗಾರ್ಡನ್‌ಗಳು: ಬೊಟಾನಿಕಲ್ ಗಾರ್ಡನ್‌ನಲ್ಲಿ ಪ್ರವಾಸಿಗರು ಹಾಗೂ ಸಸ್ಯಪ್ರಿಯರಿಗೆ ಮುದ ನೀಡಲು ವಿವಿಧ ಗಾರ್ಡನ್ ನಿರ್ಮಿಸಲಾಗುತ್ತಿದೆ. ಅದರಲ್ಲಿ ಔಷಧೀಯ ಸಸ್ಯಗಳ ಉದ್ಯಾನ, ಆರೊಮ್ಯಾಟಿಕ್ ಗಾರ್ಡನ್, ರೋಸ್ ಗಾರ್ಡನ್, ಟೋಪಿಯರಿ ಗಾರ್ಡನ್, ಚಿಟ್ಟೆ ಪಾರ್ಕ್, ಬಿದಿರಿನ ಬ್ಲಾಕ್, ಫಿಕಸ್ ಬ್ಲಾಕ್, ರಾಕರಿ, ಅರ್ಬೊರೇಟಂ, ಫ್ರಾಗ್ರೆನ್ಸ್ ಬ್ಲಾಕ್, ಪಾಲ್ಮೇಟಮ್, ಮೈನರ್ ಫ್ರೂಟ್ಸ್ ಬ್ಲಾಕ್ ಮತ್ತು ಉತ್ತಮವಾಗಿ ನಿರ್ವಹಿಸಲಾದ ನೀರಿನ ಪೂಲ್‌ಗಳು ಸೇರಿದಂತೆ ಥೀಮ್‌ಗಳೊಂದಿಗೆ ಹಾಕಲಾಗಿದೆ. ಆಕ್ವಾ ಪಕ್ಷಿಗಳ ಪಾರ್ಕ್ ನಿರ್ಮಿಸಲಾಗುತ್ತದೆ.

ಪರ್ಗೋಲಾ: ಲಿಂಗಾಂಬುದಿ ಕೆರೆಯ ಬೊಟಾನಿಕಲ್ ಗಾರ್ಡನ್‌ನಲ್ಲಿ 150 ಅಡಿ ಉದ್ದ ಮತ್ತು 12 ಅಡಿ ಅಗಲದ ಪರ್ಗೋಲಾ ನಿರ್ಮಿಸಲಾಗಿದೆ. ಗಾರ್ಡನ್‌ಗೆ ಬರುವ ಪ್ರವಾಸಿಗರು ವಿಹರಿಸಲು ಉತ್ತಮ ವಾತಾವರಣ ಕಲ್ಪಿಸಲಿದೆ. ಪರ್ಗೋಲಾದ ಮೇಲೆ ರೆಡ್ ಜೇಡ್ ವೈನ್ ಬಳ್ಳಿ ಬೆಳೆಸಲಾಗಿದ್ದು, ಇದು ವರ್ಷದಲ್ಲಿ ಎರಡು ಬಾರಿ ಅರಳಿ ಕೆಂಪು ಬಣ್ಣದ ಹೂವು ಬಿಡುತ್ತವೆ. ಇದರಿಂದ ಬೊಟಾನಿಕಲ್ ಗಾರ್ಡನ್‌ಗೆ ಮೆರುಗು ಹೆಚ್ಚುತ್ತದೆ.

ಫಲಪುಷ್ಪ ಪ್ರದರ್ಶನ

ಅ.3ರಂದು ಉದ್ಘಾಟನೆಗೊಳ್ಳಲಿದೆ. ಅ.13ರಂದು ಸಂಜೆ 7ಗಂಟೆಗೆ ಅಂತ್ಯಗೊಳ್ಳಲಿದೆ. ಪ್ರತಿದಿನ ಬೆಳಗ್ಗೆ 9 ಗಂಟೆಯಿಂದ ಸಂಜೆ 7 ಗಂಟೆವರೆಗೆ ಬೊಟಾನಿಕಲ್ ಗಾರ್ಡನ್‌ನಲ್ಲಿನ ಫಲಪುಷ್ಪ ಪ್ರದರ್ಶನ ವೀಕ್ಷಿಸಬಹುದು. 6ರಿಂದ 12 ವರ್ಷದೊಳಗಿನ ಮಕ್ಕಳಿಗೆ 30ರೂ., ವಯಸ್ಕರಿಗೆ 60 ರೂ. ಸ್ಟಿಲ್ ಕ್ಯಾಮರಾಗೆ 50 ರೂ., ವಿಡಿಯೋ ಕ್ಯಾಮರಾಗೆ 100 ರೂ. ದರ ನಿಗದಿ ಮಾಡಲಾಗಿದೆ.



ಲಿಂಗಾಂಬುದಿ ಕೆರೆ

ಮೈಸೂರು ಸಂಸ್ಥಾನದ ದೊರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಲಿಂಗಾಂಬುದಿ ಕೆರೆಯನ್ನು 1828ರಲ್ಲಿ ಮಹಾರಾಣಿ ಕೃಷ್ಣ ವಿಲಾಸ ಲಿಂಗಾಜಮ್ಮಣ್ಣಿ ಅವರ ನೆನಪಿಗಾಗಿ ನಿರ್ಮಿಸಿದರು. ಇದು 250 ಎಕರೆ ವಿಸ್ತೀರ್ಣ ಹೊಂದಿದ್ದು, ಇದರಲ್ಲಿ ಲಿಂಗಾಂಬುದಿ ಸರ್ವೆ ನಂ 23ರಲ್ಲಿ 51.3 ಎಕರೆ, ದಟ್ಟಗಳ್ಳಿ ಸರ್ವೆ ನಂ. 82ರಲ್ಲಿ 136.11 ಎಕರೆ ಮತ್ತು ಅಯ್ಯಜ್ಜಯ್ಯನಹುಂಡಿ ಸರ್ವೆ ನಂ.11 ರಲ್ಲಿ 28.23 ಎಕರೆ ಒಳಗೊಂಡಿದೆ. ಕೆರೆಯ 150 ಎಕರೆ ಪ್ರದೇಶ ನೀರಿನಿಂದ ಆವೃತವಾಗಿದ್ದರೆ, ಉಳಿದ 100 ಎಕರೆ ಪ್ರದೇಶವನ್ನು ಮೀಸಲು ಅರಣ್ಯ ಪ್ರದೇಶ ಎಂದು ಘೋಷಿಸಲಾಗಿದೆ.

ದಸರಾ ಮಹೋತ್ಸವ; ಮೈಸೂರಲ್ಲಿ ಅ.3ರಿಂದ 12ರವರೆಗೆ ಕೆಲವೆಡೆ ವಾಹನ ಸಂಚಾರ, ನಿಲುಗಡೆಗೆ ನಿರ್ಬಂಧ

ಮೈಸೂರು,ಅ.1(ಎಸ್‌ಪಿಎನ್)– 2024ರ ಮೈಸೂರು ದಸರಾ ಮಹೋತ್ಸವದ ಪ್ರಯುಕ್ತ ಮೈಸೂರು ನಗರದಲ್ಲಿ ವಾಹನ ಸಂಚಾರ ಹೆಚ್ಚಾಗುವ ಸಂಭವವಿದ್ದು, ಈ ಹಿನ್ನೆಲೆಯಲ್ಲಿ ಅ.3ರಿಂದ ಅ.12ರವರೆಗೆ ಪ್ರತಿ ದಿನ ಸಂಜೆ 4ರಿಂದ ರಾತ್ರಿ 12ಗಂಟೆಯವರೆಗೆ ಸುಗಮ ಸಂಚಾರಕ್ಕಾಗಿ ಕೆಲ ರಸ್ತೆಗಳಲ್ಲಿ ಏಕಮುಖ ಸಂಚಾರ ಮತ್ತು ವಾಹನಗಳ ನಿಲುಗಡೆಗೆ ನಿರ್ಬಂಧ ವಿಧಿಸಿ ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಂಗಳವಾರ (ಅ.1)ಅಧಿಸೂಚನೆ ಹೊರಡಿಸಿದ್ದಾರೆ.

ಮೈಸೂರು 2024ರ ದಸರಾ ಮಹೋತ್ಸವ ಅ.3ರಂದು ಆರಂಭಗೊಂಡು ಅ.12ರಂದು ಮುಕ್ತಾಯಗೊಳ್ಳಲಿದೆ. ಈ ಸಂದರ್ಭದಲ್ಲಿ ಮೈಸೂರು ನಗರದ ಹೃದಯ ಭಾಗದಲ್ಲಿ ವಾಹನ ಸಂಚಾರ ಅಧಿಕಗೊಳ್ಳುವುದರಿಂದ ಸುಗಮ ವಾಹನ ಸಂಚಾರಕ್ಕಾಗಿ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಕೆಲವೊಂದು ರಸ್ತೆಗಳಲ್ಲಿ ಏಕಮುಖ ಸಂಚಾರ ಮತ್ತು ವಾಹನಗಳ ನಿಲುಗಡೆ ವ್ಯವಸ್ಥೆಯಲ್ಲಿ ಕೆಲವೊಂದು ನಿರ್ಬಂಧಗಳನ್ನು ವಿಧಿಸುವುದು ಅತ್ಯವಶ್ಯಕವಾಗಿರುತ್ತದೆ ಎಂದು ಸಂಚಾರ ವಿಭಾಗದ ಎಸಿಪಿ ವರದಿ ಮೇರೆಗೆ ಅಧಿಸೂಚನೆ ಹೊರಡಿಸಿದ್ದಾರೆ.

ಗಣ್ಯರ ವಾಹನ ಹೊರತುಪಡಿಸಿ: ಈ ಹಿನ್ನೆಲೆಯಲ್ಲಿ ಏಕಮುಖ ಸಂಚಾರ ಹಾಗೂ ವಾಹನ ನಿಲುಗಡೆಗೆ ಕೆಲ ನಿರ್ಬಂಧಗಳನ್ನು ವಿಧಿಸಿದ್ದು, ಈ ನಿರ್ಬಂಧ ಗಣ್ಯರು ಮತ್ತು ಅತಿಗಣ್ಯರ ವಾಹನಗಳ ಸಂಚಾರ ಹೊರತುಪಡಿಸಿ ಇತರೆ ಎಲ್ಲಾ ಮಾದರಿಯ ವಾಹನಗಳ ಸಂಚಾರದ ಮೇಲೆ ನಿರ್ಬಂಧ ವಿಧಿಸಿ ಭಾರತೀಯ ವಾಹನ ಕಾಯ್ದೆ 1988 ಕಲಂ 115 ಹಾಗೂ ಸೆಕ್ಷನ್(3) ಆಫ್ ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಕಾಯ್ದೆ 1960ರಲ್ಲಿ ದತ್ತವಾದ ಅಧಿಕಾರ ಬಳಸಿದ್ದಾರೆ.

ಅರಮನೆ ಸುತ್ತಮುತ್ತ ವಾಹನ ಸಂಚಾರ, ನಿಲುಗಡೆಗೆ ನಿರ್ಬಂಧ: ಮೈಸೂರು ದಸರಾ ಮಹೋತ್ಸವ ಪ್ರಯುಕ್ತ ಅ.3ರಿಂದ ಅ.12ರವರೆಗೆ ಪ್ರತಿ ಸಂಜೆ 4ರಿಂದ ರಾತ್ರಿ 12ಗಂಟೆಯವರೆಗೆ ಮೈಸೂರು ಅರಮನೆ ಸುತ್ತಮುತ್ತಲಿನ ರಸ್ತೆಗಳಾದ ಜಯಚಾಮರಾಜ ಒಡೆಯರ್ ವೃತ್ತ(ಹಾರ್ಡಿಂಜ್ ವೃತ್ತ)– ಆಲ್ಬರ್ಟ್ ವಿಕ್ಟರ್ ರಸ್ತೆ ಚಾಮರಾಜ ಒಡೆಯರ್ ವೃತ್ತ(ಓಲ್ಡ್ ಸ್ಟಾಚ್ಯು ವೃತ್ತ), ಕೆ.ಆರ್.ವೃತ್ತ, ನ್ಯೂ ಸಯ್ಯಾಜಿರಾವ್ ರಸ್ತೆ, ರಾಚಯ್ಯ ವೃತ್ತ, ಬಸವೇಶ್ವರ ವೃತ್ತ, ಶ್ರೀಶಿವರಾತ್ರಿ ರಾಜೇಂದ್ರ ವೃತ್ತ(ಗನ್ ಹೌಸ್), ನಂಜನಗೂಡು ರಸ್ತೆ, ರಾಜಹಂಸ ಜಂಕ್ಷನ್, ಲಾರಿ ಟರ್ಮಿನಲ್ ರಸ್ತೆ, ಎಂ.ಎಲ್.ಸೋಮಸುಂದರಂ ವೃತ್ತ, ಎಸ್.ಲಿಂಗಣ್ಣ ವೃತ್ತ, ಲೋಕರಂಜನ್ ರಸ್ತೆ, ಜಯಚಾಮರಾಜ ಒಡೆಯರ್ ವೃತ್ತ (ಹಾರ್ಡಿಂಜ್ ವೃತ್ತ) ಏಕಮುಖ ಸಂಚಾರಕ್ಕೆ ಅನುಮತಿ ನೀಡಿದೆ.

ಈ ರಸ್ತೆಗಳಲ್ಲಿ ಗಡಿಯಾರದ ಮುಳ್ಳು ಸುತ್ತುವ ದಿಕ್ಕಿನಲ್ಲಿ(ಕ್ಲಾಕ್ ವೈಸ್) ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ. ಆದರೆ, ಬಸವೇಶ್ವರ ವೃತ್ತ, ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ–ನಂಜನಗೂಡು ರಸ್ತೆ, ರಾಜಹಂಸ ಜಂಕ್ಷನ್, ಸೋಮಸುಂದರಂ ವೃತ್ತದವರೆಗಿನ ರಸ್ತೆ ಹೊರತುಪಡಿಸಲಾಗಿದೆ.

ಕೆ.ಆರ್.ವೃತ್ತ–ಆಯುರ್ವೇದಿಕ್ ವೃತ್ತ–ನೆಹರು ವೃತ್ತ– ಚಾಮರಾಜ ಒಡೆಯರ್ ವೃತ್ತ(ಓಲ್ಡ್ ಸ್ಟಾಚ್ಯು ವೃತ್ತ)– ಕೆ.ಆರ್. ವೃತ್ತ(ಕ್ಲಾಕ್ ವೈಸ್) ಸಂಚಾರ ವ್ಯವಸ್ಥೆಗೆ ಅನುಮತಿ ನೀಡಿದ್ದು, ಕೆ.ಆರ್.ವೃತ್ತ–ನ್ಯೂ ಸಯ್ಯಾಜಿರಾವ್ ರಸ್ತೆ, ಬಾಟಾ ಜಂಕ್ಷನ್–ಆಯುರ್ವೇದಿಕ್ ವೃತ್ತ–ನೆಹರು ವೃತ್ತ–ಅಶೋಕ ರಸ್ತೆ– ಮಹಾವೀರ ವೃತ್ತ(ದೊಡ್ಡಗಡಿಯಾರ)–ಚಾಮರಾಜ ಒಡೆಯರ್ ವೃತ್ತ(ಓಲ್ಡ್ ಸ್ಟಾಚ್ಯು ವೃತ್ತ)–ಕೆ.ಆರ್.ವೃತ್ತ ಸಂಪರ್ಕಿಸುವ ರಸ್ತೆಗಳ ಮಧ್ಯ ಇರುವ ಪ್ರದೇಶವನ್ನು ಕೇಂದ್ರ ಬಿಂದುವನ್ನಾಗಿಸಿ ಗಡಿಯಾರದ ಮುಳ್ಳು ಸುತ್ತುವ ದಿಕ್ಕಿಗೆ (ಕ್ಲಾಕ್ ವೈಸ್) ವಾಹನಗಳು ಸಂಚರಿಸಲು ಅವಕಾಶ ನೀಡಿರುತ್ತದೆ. ಗಡಿಯಾರದ ಮುಳ್ಳು ಸುತ್ತುವ ವಿರುದ್ಧ ದಿಕ್ಕಿನಲ್ಲಿ(ಆ್ಯಂಟಿ ಕ್ಲಾಕ್‌ವೈಸ್) ವಾಹನಗಳು ಸಂಚರಿಸದಂತೆ ನಿರ್ಬಂಧಿಸಲಾಗಿದೆ.

ದೇವರಾಜ ರಸ್ತೆಯಲ್ಲಿ ನಿರ್ಬಂಧ: ದೇವರಾಜ ಅರಸು ರಸ್ತೆಯಲ್ಲಿ (ಪ್ರತಿ ದಿನ ಸಂಜೆ 4ರಿಂದ ಮಧ್ಯರಾತ್ರಿ 12 ಗಂಟೆಯವರೆಗೆ) ಕೆ.ಆರ್.ವೃತ್ತದಿಂದ ಜೆಎಲ್‌ಬಿ ಜಂಕ್ಷನ್‌ವರೆಗೆ ಎಲ್ಲಾ ಮಾದರಿಯ ವಾಹನಗಳ ಪ್ರವೇಶ ಮತ್ತು ವಾಹನ ನಿಲುಗಡೆಯನ್ನು ನಿಷೇಧಿಸಿದೆ. ಪುರಂದರ ರಸ್ತೆಯಲ್ಲಿ ರಾಚಯ್ಯ ವೃತ್ತದಿಂದ ಕುಸ್ತಿ ಅಖಾಡ ಜಂಕ್ಷನ್‌ವರೆಗೆ ಎಲ್ಲಾ ಮಾದರಿಯ ವಾಹನಗಳ ಪ್ರವೇಶ ಮತ್ತು ವಾಹನ ನಿಲುಗಡೆಯನ್ನು (ಮೈಸೂರು ಅರಮನೆ ಆವರಣದ ಕಾರ್ಯಕ್ರಮಕ್ಕೆ ಬರುವ ವಾಹನಗಳನ್ನು ಹೊರತುಪಡಿಸಿ)ನಿಷೇಧಿಸಿದೆ.

ಏಕಮುಖ ಸಂಚಾರಕ್ಕೆ ಅನುಮತಿ: ಅ.11 ಮತ್ತು ಅ.12ರಂದು ಬೆಳಗ್ಗೆ 6ರಿಂದ ಮಧ್ಯರಾತ್ರಿ 12 ಗಂಟೆವರೆಗೆ ಹಳೆ ಬೆಂಗಳೂರು–ಮೈಸೂರು ರಸ್ತೆ ಮಾರ್ಗವಾಗಿ ಬರುವ ವಾಹನಗಳು ಲಿಂಕ್ ರಸ್ತೆ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಮೌಲಾನಾ ಅಬ್ದುಲ್ ಕಲಾಂ ಅಜಾದ್ ವೃತ್ತ– ರಾಜೇಂದ್ರ ನಗರ ಮುಖ್ಯರಸ್ತೆ– ಡಾ.ರಾಜಕುಮಾರ್ ವೃತ್ತದವರೆಗೆ (ಫೌಂಟೆನ್ ವೃತ್ತ) ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಿದೆ ಹಾಗೂ ಸದರಿ ಮಾರ್ಗದಲ್ಲಿ ವಿರುದ್ಧ ದಿಕ್ಕಿನಲ್ಲಿ ಬರುವ ಎಲ್ಲಾ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಡಾ.ರಾಜಕುಮಾರ್ ವೃತ್ತದಿಂದ (ಫೌಂಟೆನ್ ವೃತ್ತ) ಬೆಂಗಳೂರು ರಸ್ತೆಗೆ ಸಾಗುವ ವಾಹನಗಳಿಗೆ ಟಿಪ್ಪು ವೃತ್ತದ ಕಡೆಯಿಂದ ಹಳೆ ಮೈಸೂರು–ಬೆಂಗಳೂರು ರಸ್ತೆಯ ಲಿಂಕ್ ರಸ್ತೆ ಜಂಕ್ಷನ್‌ವರೆಗೆ ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಮಾರ್ಗದಲ್ಲಿ ವಿರುದ್ಧ ದಿಕ್ಕಿನಲ್ಲಿ ಬರುವ ಎಲ್ಲ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.(ಎಲ್‌ಐಸಿ ವೃತ್ತದ ಕಡೆಗೆ ಸಂಚರಿಸುವಂತಿಲ್ಲ).

ಟಿ.ಎನ್.ನರಸಿಂಹಮೂರ್ತಿ ವೃತ್ತದಿಂದ (ಎಲ್‌ಐಸಿ ವೃತ್ತ) ಹಳೆ ಮೈಸೂರು –ಬೆಂಗಳೂರು ರಸ್ತೆ ಲಿಂಕ್ ರಸ್ತೆ ಜಂಕ್ಷನ್ ಕಡೆಗೆ ಪೂರ್ವದಿಂದ ಪಶ್ಚಿಮಕ್ಕೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ. ಟಿ.ಎನ್.ನರಸಿಂಹ ಮೂರ್ತಿ ವೃತ್ತ(ಎಲ್‌ಐಸಿ ವೃತ್ತ) ದಿಂದ ಲಿಂಕ್ ರಸ್ತೆಯಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಲಾಗಿದೆ.

ಜಂಬೂಸವಾರಿ ದಿನ ನಿರ್ಬಂಧ: ಅ.12ರಂದು ಬೆಳಗ್ಗೆ 6ರಿಂದ ಮಧ್ಯರಾತ್ರಿ 12 ಗಂಟೆಯವರೆಗೆ ಜಂಜೂಸವಾರಿ ಮೆರವಣಿಗೆ ಸಾಗುವ ಮಾರ್ಗವಾದ ಅರಮನೆಯ ಬಲರಾಮ ದ್ವಾರ, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಆಯುರ್ವೇದಿಕ್ ವೃತ್ತ, ಹೈವೇ ವೃತ್ತ, ನೆಲ್ಸನ್ ಮಂಡೇಲಾ ರಸ್ತೆ, ಬನ್ನಿಮಂಟಪದ ಮುಖ್ಯದ್ವಾರದವರೆಗೆ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಿದೆ.

ಕವಾಯಿತು ಮೈದಾನ ಸುತ್ತಮುತ್ತ ನಿರ್ಬಂಧ: ಅ.12ರಂದು ಬನ್ನಿಮಂಟಪ ಕವಾಯಿತು ಮೈದಾನದ ಉತ್ತರ ಭಾಗದ ರಸ್ತೆಯಲ್ಲಿ ಹನುಮಂತನಗರ 3ನೇ ಮುಖ್ಯರಸ್ತೆ ಜಂಕ್ಷನ್‌ನಿಂದ ನ್ಯೂ ಬೆಂಗಳೂರು–ಮೈಸೂರು ರಸ್ತೆಯಲ್ಲಿ ಓಲ್ಡ್ ಟೋಲ್‌ಗೇಟ್ ಜಂಕ್ಷನ್‌ವರೆಗೆ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಿದೆ. ಅ.12ರಂದು ನಂಜನಗೂಡು ರಸ್ತೆ, ಟಿ.ನರಸೀಪುರ ರಸ್ತೆ, ಬನ್ನೂರು ರಸ್ತೆ, ಬೆಂಗಳೂರು ರಸ್ತೆ, ಕೆಆರ್‌ಎಸ್ ರಸ್ತೆ, ಬೋಗಾದಿ ರಸ್ತೆ ಮತ್ತು ಹೆಚ್.ಡಿ.ಕೋಟೆ ರಸ್ತೆ ಮೂಲಕ ಮೈಸೂರು ನಗರಕ್ಕೆ ಆಗಮಿಸುವ ಭಾರಿ ಮತ್ತು ಲಘು ಸರಕು ಸಾಗಾಣಿಕಾ ವಾಹನಗಳು ಮೈಸೂರು ನಗರ ಪ್ರವೇಶಿಸದಂತೆ ನಿರ್ಬಂಧ ವಿಧಿಸಲಾಗಿದೆ ಎಂದು ಅಧಿಸೂಚನೆಯಲ್ಲಿ ಉಲ್ಲೇಖಿಸಿದ್ದಾರೆ.

ಶಾಲಾ ಬಾಲಕಿಯ ವಿವಾಹ; ಸೋದರ ಮಾವ ಸೇರಿ 9 ಮಂದಿ ವಿರುದ್ಧ ಪ್ರಕರಣ ದಾಖಲು

ಮೈಸೂರು, ಅ.1(ಎಸ್‌ಬಿಡಿ)– ಬಾಲಕಿಯನ್ನು ಶಾಲೆ ಬಿಡಿಸಿ, ಸೋದರ ಮಾವನೊಂದಿಗೆ ವಿವಾಹ ಮಾಡಿದ ಆರೋಪದಡಿ ಮೈಸೂರಿನ ಪೊಲೀಸ್ ಠಾಣೆಯೊಂದರಲ್ಲಿ ಪ್ರಕರಣ ದಾಖಲಾಗಿದೆ.

ನಗರ ಯೋಜನೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ ಮೇಲ್ವಿಚಾರಕರ ದೂರಿನ ಮೇರೆಗೆ 14 ವರ್ಷದ ಬಾಲಕಿಯನ್ನು ವಿವಾಹವಾದ ಸೋದರಮಾವ, ಆಕೆಯ ಪೋಷಕರು, ಸಂಬಂಧಿಕರು ಸೇರಿ 9 ಮಂದಿ ವಿರುದ್ಧ ಬಾಲ್ಯ ವಿವಾಹ ನಿಷೇದ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಚೈಲ್ಡ್ ಹೆಲ್ಪ್ ಲೈನ್ ಮೂಲಕ ದೂರು ಬಂದ ಹಿನ್ನೆಲೆಯಲ್ಲಿ ಬಾಲಕಿಯನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಿ, ಆಪ್ತ ಸಮಾಲೋಚನೆಗೆ ಒಳಪಡಿಸಿದಾಗ ಬಾಲ್ಯ ವಿವಾಹ ಆಗಿರುವುದು ಗೊತ್ತಾಗಿದೆ. ಶಾಲೆಗೆ ಹೋಗುವಾಗ ಹುಡುಗನೊಬ್ಬ ಪ್ರಪೋಸ್ ಮಾಡಿದ್ದ. ಈ ಬಗ್ಗೆ ಮನೆಯವರಿಗೆ ಗೊತ್ತಾಗಿ ಶಾಲೆಗೆ ಕಳುಹಿಸುತ್ತಿರಲಿಲ್ಲ. 15 ದಿನಗಳ ಹಿಂದೆ ಬೆಳಗಿನ ಜಾವ ಸೋದರ ಮಾವನೊಂದಿಗೆ ಬಲವಂತವಾಗಿ ವಿವಾಹ ಮಾಡಿಸಿದ್ದಾಗಿ ಆಕೆ ತಿಳಿಸಿರುವುದಾಗಿ ಶಿಶು ಅಭಿವೃದ್ಧಿ ಇಲಾಖೆ ಅಧಿಕಾರಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಕನ್ನಡ ಕಹಳೆ, ಜಾನಪದ ಝೇಂಕಾರದೊಂದಿಗೆ ದಸರಾ ಯುವ ಸಂಭ್ರಮಕ್ಕೆ ತೆರೆ



ಬ್ರೈಟ್ ಪಿಯು ಕಾಲೇಜು ವಿದ್ಯಾರ್ಥಿಗಳಿಂದ ಕನ್ನಡಾಭಿಮಾನ ನೃತ್ಯ ಪ್ರದರ್ಶನ



ಚಾ.ನಗರ ಕುದೇರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಂದ ಜಾನಪದ ನೃತ್ಯ



ಮಾನಸಗಂಗೋತ್ರಿಯ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಮಹಿಳಾ ಸಬಲೀಕರಣ ನೃತ್ಯ ರೂಪಕ

ಮೈಸೂರು, ಅ.1(ಎಂಕೆ)– ಆಶ್ರಯದಾತೆ ಕನ್ನಡ ಮಾತೆಗೆ ಕೈ ಮುಗಿಯಿರಿ... ನಮ್ಮ ನಡೆ–ನುಡಿ ಎಲ್ಲವೂ ಕನ್ನಡವಾಗಿರಲಿ... ಎನ್ನುತ್ತಾ ಜಾನಪದವೆಂಬ ಮಲ್ಲಿಗೆ ಹೂ ಚೆಲ್ಲಿ ವಿಶ್ವ ವಿಖ್ಯಾತ ಮೈಸೂರು ದಸರಾ ಪರಂಪರೆ, ನವರಾತ್ರಿ ವೈಭವ ಸಾರಿದ ಯುವ ಮನಸುಗಳ ಯುವ ಸಂಭ್ರಮಕ್ಕೆ ಮಂಗಳವಾರ ವರ್ಣರಂಜಿತ ತೆರೆಬಿದ್ದಿತು.

ಮೈಸೂರು ದಸರಾ ಮಹೋತ್ಸವ–2024ರ ಅಂಗವಾಗಿ ಮೈಸೂರು ವಿವಿ ಮಾನಸ ಗಂಗೋತ್ರಿ ಬಯಲು ರಂಗ ಮಂದಿರ ಸಾಂಸ್ಕೃತಿಕ ವೇದಿಕೆಯಲ್ಲಿ 8 ದಿನಗಳ ಕಾಲ ಅತ್ಯಾಕರ್ಷಕ, ಅಮೋಘ ನೃತ್ಯ ಸಂಯೋಜನೆಗಳ ಮೂಲಕ ಯುವ ಸಮೂಹದ ಸಂಭ್ರಮವನ್ನು ಇಮ್ಮಡಿಗೊಳಿಸಿ, ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ ಜೊತೆಗೆ ಸ್ವಾತಂತ್ರ್ಯ ವೀರರು, ಯೋಧರು, ಅನ್ನ ನೀಡುವ ಅನ್ನದಾತರು, ಮಹಿಳಾ ಸಾಹಸಿಗಳ ಸ್ಮರಣೆಯೊಂದಿಗೆ ರಾಷ್ಟ್ರೀಯ ಭಾವೈಕ್ಯತೆ, ಸಮಾನತೆ ಮಹತ್ವವನ್ನು ಅನಾವರಣಗೊಳಿಸಿದ ಯುವ ಸಂಭ್ರಮ ಯಶಸ್ವಿ ತೆರೆಕಂಡಿತು.

ಹೆಣ್ಣು ಅಬಲೆಯಲ್ಲಾ ಸಬಲೆ...

ಹೆಣ್ಣು ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಕುರಿತು ಬೆಳಕು ಚೆಲ್ಲಿದ ರಾಮನಗರದ ನ್ಯೂ ಎಕ್ಸ್‌ಪರ್ಟ್ ಪ್ರಥಮ ದರ್ಜೆ ಕಾಲೇಜು ಹಾಗೂ ಮೈಸೂರು ಮಾನಸಗಂಗೋತ್ರಿಯ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಸಮಾಜದಲ್ಲಿ ಲಿಂಗತಾರತಮ್ಯ ಸಲ್ಲದು. ಹೆಣ್ಣು ಮಕ್ಕಳು ಪುರುಷರಷ್ಟೇ ಸರಿಸಮಾನರು.. ಅವಕಾಶ ನೀಡಿದರೆ ಸಾಧಿಸುತ್ತೇವೆ... ಲೈಂಗಿಕ ದೌರ್ಜನ್ಯ ನಡೆಸಿದರೆ ಸಿಡಿದೇಳುತ್ತೇವೆ ಎಂಬುದನ್ನು ಸಾಬೀತುಪಡಿಸಿದರು.

ಸಂಪೂರ್ಣ ಭರ್ತಿ...

ಮೈಸೂರು ವಿವಿ ಮಾನಸ ಗಂಗೋತ್ರಿ ಬಯಲುರಂಗಮಂದಿರದಲ್ಲಿ ನಡೆದ ಯುವ ಸಂಭ್ರಮ ಯಶಸ್ವಿಯಾಗಿ ಸಂಪನ್ನಗೊಂಡಿತು. ಆರಂಭದ ದಿನದಿಂದ ಕಡೆ ದಿನದವರೆಗೂ ವೇದಿಕೆ ಮುಂಭಾಗ ಕಾಲಿಡಲೂ ಸಾಧ್ಯವಿಲ್ಲದಷ್ಟು ಯುವಕ–ಯುವತಿಯರು ಕಿಕ್ಕಿರಿದು ತುಂಬಿದ್ದರು. ಶಿಳ್ಳೆ–ಚಪ್ಪಾಳೆ ತಟ್ಟಿ ನಿಂತಲ್ಲೇ ಕುಣಿದು ಕುಪ್ಪಳಿಸಿ, ಸಂಭ್ರಮಿಸಿದ ಯುವ ಜನಸ್ತೋಮ ಕಲಾತಂಡಗಳನ್ನು ಪ್ರೋತ್ಸಾಹಿಸಿದರು.

ರೀಲ್ಸ್ ಮಾಡಿ ಬಹುಮಾನ ಗೆಲ್ಲಿ...!

ದಸರಾ ಮಹೋತ್ಸವಕ್ಕೆ ಸಂಬಂಧಿಸಿದಂತೆ ರೀಲ್ಸ್ ಮಾಡಿ ಪ್ರವಾಸೋದ್ಯಮ ಇಲಾಖೆಯ ಅಧಿಕೃತ ವೆಬ್‌ಸೈಟ್ ಮತ್ತು ಇನ್ಸ್ಟಾಗ್ರಾಮ್‌ನ ಅಧಿಕೃತ ಪೇಜ್ https://mysore.nic.in/en/tourism-tenders/ ಅಥವಾ visit_mysuru ಪೇಜ್ ಅನ್ನು ಟ್ಯಾಗ್ ಮಾಡುವ ಉತ್ತಮ ರೀಲ್ಸ್ ವಿಡಿಯೋಗಳಿಗೆ ಬಹುಮಾನ ದೊರೆಯಲಿದೆ.

- ಎಂ.ಕೆ. ಸವಿತಾ, ಜಂಟಿ ನಿರ್ದೇಶಕಿ, ಪ್ರವಾಸೋದ್ಯಮ ಇಲಾಖೆ

ಕಡೇ ದಿನವಾದ ಮಂಗಳವಾರ ನೃತ್ಯ ಪ್ರದರ್ಶನ ನೀಡಿದ 50ಕ್ಕೂ ಹೆಚ್ಚು ವಿವಿಧ ಕಾಲೇಜು ತಂಡಗಳು, ಕನ್ನಡ ಭಾಷೆಯ ಹಿರಿಮೆ–ಗರಿಮೆಯನ್ನು ಸಾರಿದರು. ಅಲ್ಲದೆ ಜಾನಪದ ನೃತ್ಯ ಕಲಾಪ್ರಕಾರಗಳ ಪ್ರದರ್ಶನದೊಂದಿಗೆ ನೆಲದ ಸಂಸ್ಕೃತಿ ಅನಾವರಣಗೊಳಿಸಿದರು. ಸಮಾಜದಲ್ಲಿ ಲಿಂಗತಾರತಮ್ಯ ಸಲ್ಲದು ಎಂದು ಪ್ರತಿಪಾದಿಸಿದರಲ್ಲದೆ ನವರಾತ್ರಿ ವೈಭವ ಸೃಷ್ಟಿಸಿದರು.

ಮೈಸೂರು ಬೆಳಗೊಳದ ಜಿಟಿಟಿಸಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಸಂಸ್ಥೆ, ಬ್ರೈಟ್ ಪಿಯು ಕಾಲೇಜ್, ಸೆಂಟ್ರಲ್ ಇನ್ಸ್‌ಟಿಟ್ಯೂಟ್ ಆಫ್ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಹಾಗೂ ಎಂಸಿಎಂ ಫಸ್ಟ್ ಗ್ರೇಡ್ ಕಾಲೇಜು ವಿದ್ಯಾರ್ಥಿಗಳು ಕನ್ನಡವೇ ನಮ್ಮಮ್ಮ... ಅವಳಿಗೆ ಕೈ ಮುಗಿಯಿರಿ... ಕನ್ನಡ ನಮ್ಮ ಉಸಿರಾಗಲಿ ಎಂದು ಕನ್ನಡಾಭಿಮಾನ ಮೆರೆದರು. ಇದರೊಟ್ಟಿಗೆ ಜೇಮ್ಸ್ ಪಿಯು ಕಾಲೇಜ್ ವಿದ್ಯಾರ್ಥಿಗಳು ಕರುನಾಡಿನ ವೀರ ವನಿತೆಯರಾದ ಜಾನ್ಸಿ ರಾಣಿ ಲಕ್ಷ್ಮಿ ಬಾಯಿ, ಕಿತ್ತೂರು ರಾಣಿ ಚೆನ್ನಮ್ಮ ಸಾಹಸ ಹಾಗೂ ಹುಣಸೂರು ಶಾಸ್ತ್ರಿ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯರ ವಿಜಯಯಾತ್ರೆಯನ್ನು ಅನಾವರಣಗೊಳಿಸಿದರು.

ಚೆಲ್ಲಿದರೂ ಮಲ್ಲಿಗೆಯಾ!: ಜಾನಪದ ನೃತ್ಯ ಕಲಾಪ್ರಕಾರಗಳಾದ ಕಂಸಾಳೆ, ಕೋಲಾಟ, ಪೂಜಾ ಕುಣಿತ, ಯಕ್ಷಗಾನ ಹಾಗೂ ಕರಗ ಉತ್ಸವ ಮತ್ತು ದೈವ ನರ್ತನ ಪ್ರದರ್ಶಿಸಿದ ಮೈಸೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಾ.ನಗರ ಕುದೇರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪೇಟೆ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಹೆಚ್.ಡಿ.ಕೋಟೆ ಸೆಂಟ್ ಮೇರಿಸ್ ಪಿಯು ಕಾಲೇಜು ವಿದ್ಯಾರ್ಥಿಗಳು ಚೆಲ್ಲಿದರೂ ಮಲ್ಲಿಗೆಯಾ ಹಾಡಿನಂತೆ ಯುವ ವೇದಿಕೆಯಲ್ಲಿ ಜಾನಪದವೆಂಬ ಮಲ್ಲಿಗೆ ಹೂ ಚೆಲ್ಲಿದರು. ಹಾಗೆಯೇ ಸಿಟಿಜನ್ ಫಸ್ಟ್ ಗ್ರೇಡ್ ಕಾಲೇಜ್ ಆಫ್ ಸೈನ್ಸ್ ಅಂಡ್ ಕಾಮರ್ಸ್ ಮ್ಯಾನೇಜ್ಮೆಂಟ್ ವಿದ್ಯಾರ್ಥಿಗಳು ದಸರಾ ಅರ್ಜುನ ಆನೆಯನ್ನು ಸ್ಮರಿಸಿದರು.

ಭಕ್ತಿ ಸುಧೆ: ಮೈಸೂರಿನ ವಿದ್ಯಾಹಾರಿದೆ ಸಂಯುಕ್ತ ಪದವಿ ಪೂರ್ವ ಕಾಲೇಜು, ಬನ್ನೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ನಟರಾಜ ಪದವಿ ಪೂರ್ವ ಕಾಲೇಜು ಸೇರಿದಂತೆ ವಿವಿಧ ಕಾಲೇಜು ತಂಡಗಳು ಗಣಪತಿ ಬಪ್ಪ... ಮಂಗಳ ಮೂರ್ತಿ ಎನ್ನುತ್ತಾ ವಿಘ್ನನಿವಾರಕ ಹಾಗೂ ದುಷ್ಟ ಸಂಹಾರಿ ದುರ್ಗೆಯನ್ನು ನೆನೆದು ಭಕ್ತಿ ಸುಧೆ ಹರಿಸಿದರೆ, ಬೆಂಗಳೂರು ಆಕ್ಸ್‌ಫರ್ಡ್ ಬ್ಯುಸಿನೆಸ್ ಕಾಲೇಜು ವಿದ್ಯಾರ್ಥಿಗಳು ನವರಾತ್ರಿ ವೈಭವವನ್ನು ಆತ್ಯಾಕರ್ಷಕ ನೃತ್ಯ ಸಂಯೋಜನೆ ಮೂಲಕ ಕಣ್ಮುಂದೆ ತಂದರು.

ನದಿ, ಪರಿಸರ ಸ್ವಚ್ಛತೆ ಪ್ರತಿಯೊಬ್ಬರ ಕರ್ತವ್ಯ

ಕಪಿಲಾ ನದಿ ಸ್ವಚ್ಛತೆಗೆ ಚಾಲನೆ ನೀಡಿದ ಶಾಸಕ ದರ್ಶನ್



ಕಪಿಲಾ ನದಿ ಸ್ವಚ್ಛತಾ ಕಾರ್ಯಕ್ಕೆ ಶಾಸಕ ದರ್ಶನ್ ಚಾಲನೆ ನೀಡಿದರು.

ನಂಜನಗೂಡು, ಅ.1– ನಮ್ಮ ನದಿ, ಪರಿಸರಗಳ ನೈರ್ಮಲ್ಯ ಕಾಪಾಡುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ಪರಿಸರ, ಕುಡಿಯುವ ನೀರು, ಉಸಿರಾಡುವ ಗಾಳಿ ಶುದ್ಧವಾಗಿಟ್ಟುಕೊಳ್ಳಲು ಮುಂದಾಗೋಣ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಶ್ರೀಕಂಠೇಶ್ವರ ದೇವಸ್ಥಾನದ ಸ್ನಾನಘಟ್ಟದಲ್ಲಿ ಮಂಗಳವಾರ ಮಹಾತ್ಮ ಗಾಂಧಿ ಜಯಂತಿ ಪ್ರಯುಕ್ತ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಕಪಿಲಾ ನದಿ ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಕೃತಿಯನ್ನು ನಾವು ಕಾಪಾಡಿದರೆ, ಪ್ರಕೃತಿ ನಮ್ಮನ್ನು ಕಾಪಾಡುತ್ತದೆ. ದೇವಾಲಯಕ್ಕೆ ಭೇಟಿ ನೀಡುವ ಭಕ್ತರು ಪುಣ್ಯಸ್ನಾನದ ನಂತರ ಬಟ್ಟೆ ಹೂವಿನ ತ್ಯಾಜ್ಯಗಳನ್ನು ನದಿಗೆ ಬಿಡಬಾರದು. ನದಿಗೆ ಕೊಳಕನ್ನು ಸೇರಿಸುವುದರಿಂದ ಪಾಪ ಬರುತ್ತದೆಯೇ ವಿನಹಃ ಪುಣ್ಯ ಬರುವುದಿಲ್ಲ. ಪುಣ್ಯ ಕ್ಷೇತ್ರಗಳನ್ನು ಶುಚಿಯಾಗಿಟ್ಟುಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ, ಸಿ.ಎಂ. ಶಂಕರ್, ಜಯರಾಮ್ ನೆಲ್ಲಿತ್ತಾಯ, ಹೊನ್ನೇಗೌಡ, ವಿಜಯ್ ಕುಮಾರ್, ಸೋಮಶೇಖರ ಮೂರ್ತಿ ಹಾಗೂ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕಾಕನಕೋಟೆ (ದಮ್ಮನಕಟ್ಟೆ) ಸಫಾರಿ ಕೇಂದ್ರದಲ್ಲಿ

ಆಡಿಟೋರಿಯಂ ನಿರ್ಮಾಣಕ್ಕೆ ಅರಣ್ಯ ಸಚಿವರಿಗೆ ಪ್ರಸ್ತಾವನೆ

– ಶಾಸಕ ಅನಿಲ್

ಹೆಚ್.ಡಿ.ಕೋಟೆ, ಅ.1– ತಾಲೂಕಿನ ಕಾಕನಕೋಟೆ(ದಮ್ಮನಕಟ್ಟೆ) ಸಫಾರಿ ಕೇಂದ್ರದಲ್ಲಿ ಆಡಿಟೋರಿಯಂ ನಿರ್ಮಾಣಕ್ಕೆ ಅರಣ್ಯ ಸಚಿವರಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಶಾಸಕ ಅನಿಲ್ ತಿಳಿಸಿದರು.

ತಾಲೂಕಿನ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಮೇಟಿಕುಪ್ಪೆ, ಅಂತರಸಂತೆ ಮತ್ತು ಡಿ.ಬಿ.ಕುಪ್ಪೆ ಅರಣ್ಯ ವಲಯದ ವತಿಯಿಂದ (ಕಾಕನಕೋಟೆ) ದಮ್ಮನಕಟ್ಟೆ ಸಫಾರಿ ಕೇಂದ್ರದಲ್ಲಿ 2024ನೇ ವನ್ಯಜೀವಿ ಸಪ್ತಾಹ ಅಂಗವಾಗಿ ಹ್ಯಾಂಡ್ ಪೋಸ್ಟ್ ಅರಣ್ಯ ಕೇಂದ್ರದಿಂದ ದಮ್ಮನಕಟ್ಟೆ ವರಗೆ ಆಯೋಜಿಸಿದ್ದ ಮ್ಯಾರಥಾನ್ ಉದ್ಘಾಟಿಸಿ ಮಾತನಾಡಿದ ಅವರು, ಸಫಾರಿಗೆ ಬಂದು ಟಿಕೆಟ್ ಸಿಗದಿದ್ದಲ್ಲಿ ಅವರಿಗೆ ಈ ಆಡಿಟೋರಿಯಂನಲ್ಲಿ ಒಂದು ಗಂಟೆ ನಾಗರಹೊಳೆಯ ಪ್ರಾಣಿಗಳು ಮತ್ತು ಅರಣ್ಯದಲ್ಲಿನ ಮರಗಿಡಗಳ ಕುರಿತು ವಿಡಿಯೋ ಪ್ರದರ್ಶನ ಮಾಡಲು ಯೋಜನೆ ರೂಪಿಸಲಾಗುವುದು ಎಂದರು.

ಆಡಿಟೋರಿಯಂನಲ್ಲಿ ವನ್ಯಜೀವಿ ಛಾಯಾಗ್ರಾಹಕರು ತೆಗೆದ ಛಾಯಾಚಿತ್ರಗಳನ್ನು ಪ್ರದರ್ಶನಕ್ಕಿಡಬೇಕು. ಜೊತೆಗೆ ಫೋಟೋಗಳನ್ನು ಕೊಳ್ಳುವವರಿಗೂ ಸಹ ಅವಕಾಶ ಮಾಡಿಕೊಡುವಂತೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕಿ ಪಿ.ಎಸ್.ಸೀಮಾ ಅವರಿಗೆ ಸೂಚಿಸಿದರು.



ದಮ್ಮನಕಟ್ಟೆಯಲ್ಲಿ ಮ್ಯಾರಥಾನ್ ಕಾರ್ಯಕ್ರಮ ನಡೆಯಿತು. ಈ ವೇಳೆ ಶಾಸಕ ಅನಿಲ್ ಸೇರಿದಂತೆ ಇನ್ನಿತರರಿದ್ದರು.

ಕಾಡಂಚಿನ ಗ್ರಾಮಗಳಲ್ಲಿ ಮಾನವ ವನ್ಯಜೀವಿ ಸಂಘರ್ಷ ಹೆಚ್ಚಾಗಿ ನಡೆಯುತ್ತಿದ್ದು, ಅದನ್ನು ಪ್ರಾಮಾಣಿಕವಾಗಿ ತಡೆಯುವ ಕೆಲಸ ಅರಣ್ಯ ಇಲಾಖೆಯಿಂದ ಆಗಬೇಕು. ಜೊತೆಗೆ ಸಾರ್ವಜನಿಕರೊಂದಿಗೆ ಉತ್ತಮ ಸಂವಹನ ನಡೆಸಿ ಅವರ ಸಹಕಾರದಿಂದ ಸಂಘರ್ಷ ತಡೆಯಲು ಯತ್ನಿಸಿ ಎಂದರು. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕಿ ಪಿ.ಎಸ್.ಸೀಮಾ ಮಾತನಾಡಿ, ವನ್ಯಜೀವಿ ಸಪ್ತಾಹವು 8 ದಿನಗಳ ಕಾಲ ನಡೆಯುತ್ತಿದ್ದು, ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳಬೇಕು. ಜೊತೆಗೆ ಏಳು ದಿನಗಳ ಕಾಲ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ಈ ಸ್ಪರ್ಧೆಗಳಲ್ಲಿ ಸಾರ್ಜನಿಕರು ಭಾಗವಹಿಸಿ ಅರಣ್ಯ ಇಲಾಖೆಯೊಂದಿಗೆ ಉತ್ತಮ ಭಾಂದವ್ಯ ಬೆಳೆಸಿಕೊಳ್ಳಿ ಎಂದು ಕರೆ ನೀಡಿದರು.

ಬುಧವಾರ ಹುಣಸೂರು ಅರಣ್ಯ ಕಚೇರಿಯಿಂದ ಕಾಕನಕೋಟೆ ಸಫಾರಿ ಕಚೇರಿವರೆಗೆ ಸೈಕ್ಲಿಂಗ್ ಸ್ಪರ್ಧೆ ಏರ್ಪಡಿಸಲಾಗಿದೆ. ಆಸಕ್ತರು ಭಾಗವಹಿಸುವಂತೆ ತಿಳಿಸಿದರಲ್ಲದೇ ಸೈಕಲ್ ಇಲ್ಲದಿದ್ದವರಿಗೆ ಸ್ಪರ್ಧೆಗೆ ಸೈಕಲ್ ಗಳನ್ನು ನೀಡಲಾಗುವುದು ಎಂದರು.

ಮ್ಯಾರಥಾನ್‌ನಲ್ಲಿ ವಿನೋದ್ ಪ್ರಥಮ, ಅರ್ಚನ ದ್ವಿತೀಯ, ತೃತೀಯ ಬಹುಮಾನವನ್ನು ಕೆ.ಎಂ.ಮನು ಪಡೆದರು. ಉಳಿದಂತೆ ಅನಿಲ್ ಗೌಡನಕಟ್ಟೆ, ಸತೀಶ್, ಸಂಜು, ಬಿ.ಎಂ.ವೆಂಕಟೇಶ್, ಪ್ರಜ್ವಲ್, ಚೇತನ್ ಕುಂಬ್ರೆಲ್, ಸಿಜು ಅವರಿಗೆ ಸಮಾಧಾನಕರ ಬಹುಮಾನ ನೀಡಲಾಯಿತು.

15 ಕಿಲೋಮೀಟರ್ ನಡೆದ ಮ್ಯಾರಥಾನ್‌ನಲ್ಲಿ 80ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ದಾರಿಯುದ್ದಕ್ಕೂ ಸ್ಪರ್ಧಿಗಳಿಗೆ ನೀರು, ತಂಪುಪಾನೀಯ, ಚಾಕಲೇಟ್, ಗ್ಲೂಕೋಸ್ ಅನ್ನು ಇಲಾಖೆ ವತಿಯಿಂದ ವಿತರಿಸಲಾಯಿತು.


ಇದೇ ವೇಳೆ ತಹಸೀಲ್ದಾರ್ ಶ್ರೀನಿವಾಸ್, ಹುಣಸೂರಿನ ಎಸಿಎಫ್ ಲಕ್ಷ್ಮೀಕಾಂತ್, ಹೆಚ್.ಡಿ.ಕೋಟೆ ವಲಯದ ಎಸ್‌ಟಿಎಫ್ ಸತೀಶ್, ನಾಗರಹೊಳೆ ಎಸಿಎಫ್ ಅನನ್ಯ ಕುಮಾರ್, ವಲಯ ಅರಣ್ಯಾಧಿಕಾರಿಗಳಾದ ಸಿದ್ದರಾಜು, ಮಧು ದೇವಯ್ಯ, ರಶ್ಮಿ, ಸುಬ್ರಹ್ಮಣ್ಯ, ದೇವರಾಜು, ಅಭಿಷೇಕ್, ರಾಜಶೇಖರ್, ಅಭಿಷೇಕ್, ಸತೀಶ್, ಡಿಆರ್‌ಎಫ್‌ಓ ಮಂಜುನಾಥ ಆರಾಧ್ಯ, ಡಿಆರ್‌ಎಫ್‌ಓ ಎಸ್‌ಡಿಪಿಎಫ್ ನವೀನ್, ಛಾಯಾಗ್ರಾಹಕ ಸಂಘದ ಅಧ್ಯಕ್ಷ ರವಿಕುಮಾರ್, ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ್, ರಘುರಾಮ್, ಸಮೀರ್, ಮೋಹನ್ ಕುಮಾರ್ ವೆಂಕಿ, ಪ್ರತಾಪ್, ಮಹೇಂದ್ರ, ಗುರು, ಪಿ.ಕೆ.ಕುಮಾರ್, ದಿನೇಶ್, ಸಂಜು, ಕುಮಾರ್, ಪರಶಿವಮೂರ್ತಿ, ಪ್ರದೀಪ್ ಇದ್ದರು.

ಕೇಂದ್ರ ಸಚಿವರಿಗೆ ಅಪಮಾನ ಮಾಡಿರುವ

ಎಡಿಜಿಪಿ ಚಂದ್ರಶೇಖರ್ ಅಮಾನತಿಗೆ ಒತ್ತಾಯ

ಕೆ.ಆರ್.ನಗರ, ಅ.1– ಜನತಂತ್ರ ವ್ಯವಸ್ಥೆಯಲ್ಲಿ ಚುನಾಯಿತ ಜನಪ್ರತಿನಿಧಿಗಳ ವಿರುದ್ಧ ಅವಾಚ್ಯ ಪದ ಬಳಕೆ ಮಾಡಿ ಪ್ರಜಾಪ್ರಭುತ್ವಕ್ಕೆ ಅಪಮಾನ ಮಾಡಿರುವ ಲೋಕಾಯುಕ್ತ ಎಡಿಜಿಪಿ ಚಂದ್ರಶೇಖರ್ ಅವರನ್ನು ಕೂಡಲೇ ಅಮಾನತುಗೊಳಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಒತ್ತಾಯಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರಧಾನಿ ನರೇಂದ್ರ ಮೋದಿ ಸಂಪುಟದಲ್ಲಿ ಗೌರವ ಸ್ಥಾನ ಅಲಂಕರಿಸಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ವಿಚಾರದಲ್ಲಿ ಸರ್ಕಾರದ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಒಬ್ಬ ಅಧಿಕಾರಿ ಈ ರೀತಿ ನಡೆದುಕೊಂಡಿರುವುದು ರಾಜ್ಯದ ಜನತೆಗೆ ಮಾಡಿದ ಅಪಮಾನ. ಆದ್ದರಿಂದ ಎಡಿಜಿಪಿ ಚಂದ್ರಶೇಖರ್ ರಾಜ್ಯದ ಜನತೆ ಹಾಗೂ ಕುಮಾರಸ್ವಾಮಿಯವರ ಕ್ಷಮೆಯಾಚಿಸಬೇಕು ಎಂದ ಅವರು, ಸರ್ಕಾರ ಅವರನ್ನು ಕೂಡಲೇ ಅಮಾನತುಗೊಳಿಸಿ ರಾಜ್ಯದಿಂದ ಗಡಿಪಾರು ಮಾಡುವ ಮೂಲಕ ಚುನಾಯಿತ ಪ್ರತಿನಿಧಿಯ ಗೌರವ ಉಳಿಸಬೇಕು. ಇಲ್ಲದಿದ್ದರೆ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಮೊದಲು ಆ ಪಕ್ಷದ ಸಚಿವರು,



ಶಾಸಕರು ವಿಪಕ್ಷದ ನಾಯಕರ ಬಗ್ಗೆ ಕ್ಷುಲ್ಲಕ ಹೇಳಿಕೆ ನೀಡುತ್ತಿದ್ದರು. ಅವರ ಚಾಳಿ ಇದೀಗ ಅಧಿಕಾರಿಗಳಿಗೂ ಅಂಟಿ ಕೊಂಡಿದ್ದು, ಇದರ ಹಿಂದೆ ಕಾಂಗ್ರೆಸ್ ಸರ್ಕಾರದ ಕೈವಾಡವಿದೆ ಎಂದು ಸಂಶಯ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸಚಿವರಿಗೆ ಅಮಮಾನವಾಗುವಂತೆ ಮಾತನಾಡಿರುವ ಪೊಲೀಸ್ ಅಧಿಕಾರಿಯನ್ನು ಸಮರ್ಥಿಸಿಕೊಳ್ಳುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಜಿ. ಪರಮೇಶ್ವರ್ ಅವರ ವರ್ತನೆ ಖಂಡನೀಯ. ಸರ್ಕಾರ ನಡೆಸುವವರು ಈಗಲಾದರೂ ಎಚ್ಚೆತ್ತುಕೊಂಡು ದುರ್ವರ್ತನೆ ತೋರಿರುವ ಪೊಲೀಸ್ ಅಧಿಕಾರಿ ವಿರುದ್ಧ ಕಠಿಣ ಕ್ರಮ ಕೈಗೊಂಡು ರಾಜ್ಯದ ಗೌರವ ಎತ್ತಿ ಹಿಡಿಯುವಂತೆ ಸಲಹೆ ನೀಡಿದ್ದಾರೆ.

ಭ್ರಷ್ಟ ಮತ್ತು ಒಂದು ಪಕ್ಷದ ಪರವಾಗಿ ಹೇಳಿಕೆ ನೀಡುವ ಅಧಿಕಾರಿಗಳಿಗೆ ಕಡಿವಾಣ ಹಾಕದಿದ್ದರೆ ಭವಿಷ್ಯದಲ್ಲಿ ಅವರು ತಮ್ಮ ಹುದ್ದೆಯ ಘನತೆ ಮತ್ತು ಗೌರವ ಮರೆತು ಅವರಿವರ ಮನೆ ಬಾಗಿಲಿಗೆ ಹೋಗಿ ಸಂವಿಧಾನಕ್ಕೆ ಅಪಚಾರವಾಗುವಂತೆ ನಡೆದುಕೊಳ್ಳುವ ಸಾಧ್ಯತೆ ಇದೆ. ಇದು ಸಮಾಜಕ್ಕೆ ಮತ್ತು ಯುವ ಪೀಳಿಗೆಗೆ ಕೆಟ್ಟ ಸಂದೇಶ ನೀಡುವುದರಿಂದ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ವಿಪಕ್ಷದ ನಾಯಕರ ವಿರುದ್ಧ ಇಂತಹ ಹೇಳಿಕೆಗಳನ್ನು ಎಲ್ಲಾ ಅಧಿಕಾರಿ ವರ್ಗ ನೀಡುವುದರಿಂದ ಇದನ್ನು ಎಲ್ಲರೂ ಪಕ್ಷಾತೀತವಾಗಿ ಖಂಡಿಸಬೇಕೆಂದು ಒತ್ತಾಯಿಸಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಪುತ್ರ, ಮಾಜಿ ಮುಖ್ಯಮಂತ್ರಿ, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ವಿಚಾರದಲ್ಲಿ ಅಗೌರವದಿಂದ ನಡೆದುಕೊಂಡಿರುವ ಈ ಪೊಲೀಸ್ ಅಧಿಕಾರಿ ಬೇರೆಯವರೊಂದಿಗೆ ಹೇಗೆ ನಡೆದುಕೊಳ್ಳಬಹುದು ಎಂಬುದು ಈ ಹೇಳಿಕೆಯಿಂದಲೇ ಅರ್ಥವಾಗುತ್ತದೆ. ರಾಜ್ಯ ಸರ್ಕಾರ ಇಷ್ಟೋತ್ತಿಗೆ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕಾಗಿತ್ತು. ಇನ್ನೂ ಕಾಲ ಮಿಂಚಿಲ್ಲ. ತಕ್ಷಣ ಸರ್ಕಾರ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೇ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

ತ್ರಿವಿಧ ದಾಸೋಹಿ ರಾಜೇಂದ್ರ ಶ್ರೀಗಳ ಸೇವೆ ಅನನ್ಯ

ರಾಜೇಂದ್ರ ಶ್ರೀಗಳ 109ನೇ ಜಯಂತಿಯಲ್ಲಿ ವಾಟಾಳು ಶ್ರೀಗಳನ್ನು ಸನ್ಮಾನಿಸಲಾಯಿತು.



ತಿ.ನರಸೀಪುರ, ಅ.1– ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಬಡ ವಿದ್ಯಾರ್ಥಿಗಳಿಗೆ ಅನ್ನ, ಅಕ್ಷರ, ಆರೋಗ್ಯ, ಆಶ್ರಯ, ಆಧ್ಯಾತ್ಮ ವಿಚಾರಧಾರೆಗಳನ್ನು ನೀಡಿದ್ದಾರೆ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಬಣ್ಣಿಸಿದರು.

ಪಟ್ಟಣದ ವಿದ್ಯೋದಯ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಮತ್ತು ತಾಲೂಕು ಶರಣ ಸಾಹಿತ್ಯ ಪರಿಷತ್, ಡಾ.ಶ್ರೀಶಿವಕುಮಾರ ಸ್ವಾಮೀಜಿಗಳ ಸೇವಾ ಟ್ರಸ್ಟ್ ಸಹಯೋಗದಲ್ಲಿ ನಡೆದ ಡಾ.ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿ 109ನೇ ಜಯಂತಿಯಲ್ಲಿ ಮಾತನಾಡಿದ ಅವರು, ಇಡೀ ದೇಶದಲ್ಲಿ ಸುತ್ತೂರು ಮಠ ಅನ್ನ ದಾಸೋಹ ಮತ್ತು ಶಿಕ್ಷಣಕ್ಕೆ ಹೆಸರುವಾಸಿಯಾಗಿದೆ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಆಶೀರ್ವಾದದಿಂದಾಗಿ ಲಕ್ಷಾಂತರ ವಿದ್ಯಾರ್ಥಿಗಳು ಉನ್ನತ ಹುದ್ದೆ ಅಲಂಕರಿಸಿದ್ದಾರೆ ಎಂದರು.

ಶ್ರೀಗಳಿಗೆ ನುಡಿನಮನ ಸಲ್ಲಿಸಿ ಮಾತನಾಡಿದ ಸುತ್ತೂರು ಸಂಸ್ಥೆಗಳ ಸಂಯೋಜನಾಧಿಕಾರಿ ಜಿ.ಎಲ್.ತ್ರಿಪುರಾಂತಕ, ರಾಜೇಂದ್ರ ಶ್ರೀಗಳವರ ತ್ಯಾಗ ಹಾಗೂ ನಿಸ್ವಾರ್ಥ ಸೇವೆಯಿಂದ ಮೈಸೂರು ಸೇರಿದಂತೆ ರಾಜ್ಯದ ಗ್ರಾಮೀಣ ಮಕ್ಕಳು ವಿದ್ಯಾವಂತರಾಗಿ ಸುಸ್ಥಿರ ಬದುಕನ್ನು ಕಂಡುಕೊಳ್ಳುವಂತಾಯಿತು. ತ್ರಿವಿಧ ದಾಸೋಹಿಯಾದ ಅವರು ನಾಡಿಗೆ ಸಲ್ಲಿಸಿದ ಸೇವೆ ಅನನ್ಯ. ಶ್ರೀಗಳ ಸೇವೆ ಪರಿಗಣಿಸಿ ಅಂದಿನ ಮೈಸೂರು ಮಹಾರಾಜ ಶ್ರೀಜಯಚಾಮರಾಜೇಂದ್ರ ಒಡೆಯರ್ ಅವರು ರಾಜಗುರು ತಿಲಕ ಬಿರುದನ್ನು ಪ್ರದಾನ ಮಾಡಿದ್ದನ್ನು ಸ್ಮರಿಸಬಹುದು ಎಂದರು. ಶ್ರೀಗಳ ಸೇವೆ ಮನಗಂಡು ಸಾರ್ವಜನಿಕರು ಸಹ ಸಮಾಜಕ್ಕೆ ತಮ್ಮ ಕೈಲಾದ ಕೊಡುಗೆ ಕೊಟ್ಟರೆ ಅವರ ಜಯಂತಿ ಆಚರಣೆ ಸಾರ್ಥಕವಾಗುತ್ತದೆ ಎಂದರು.

ಸೂರ್ಯ ಸಿಂಹಾಸನ ಮಠದ ಡಾ.ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು. ಮಾಡ್ರಳ್ಳಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಗ್ರಾಮ ವಿದ್ಯೋದಯ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಚಂದ್ರಶೇಖರ್, ಶ್ರೀಶಿವಕುಮಾರಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ ನಿಂಗಪ್ಪ, ಕಾರ್ಯದರ್ಶಿ ಮಲ್ಲೇಶ್, ಖಜಾಂಚಿ ಕೆಬ್ಬೆಹುಂಡಿ ಮಹೇಶ್, ಸಹ ಕಾರ್ಯದರ್ಶಿ ಗುರುಪಾದಸ್ವಾಮಿ, ಉಪಾಧ್ಯಕ್ಷ ಎಸ್.ಸೋಮಣ್ಣ, ಸಂಚಾಲಕರಾದ ಅದೃಷ್ಟ ಮಾದಪ್ಪ, ಬಸಪ್ಪ, ಕಾರು ಮಲ್ಲಪ್ಪ, ಲೋಕೇಶ್, ಪರಮೇಶ್ ಪಟೇಲ್, ಮೋಹನ್, ರಾಜಶೇಖರ, ಪರಮೇಶ, ಶಿವಕುಮಾರ ಹೆಬ್ಬೆಹುಂಡಿ, ರಾಜಶೇಖರ ಇದ್ದರು.

ಬೈಕ್‌ಗೆ ಮಿನಿ ಲಾರಿ ಡಿಕ್ಕಿ: ಸವಾರ ಸಾವು

ತಿ.ನರಸೀಪುರ, ಅ.1– ಬೈಕ್‌ಗೆ ಮಿನಿ ಲಾರಿ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಬನ್ನೂರು ಪೊಲೀಸ್ ಠಾಣೆ ವ್ಯಾಪ್ತಿಯ ಸೋಸಲೆ ಗ್ರಾಮದ ಬಳಿ ಮಂಗಳವಾರ ಬೆಳಗ್ಗೆ ನಡೆದಿದೆ.



ತಾಲೂಕಿನ ಚಿಕ್ಕಲಕ್ಷ್ಮೀಪುರ ಗ್ರಾಮದ ಶಿವಮೂರ್ತಿ(28) ಸಾವನ್ನಪ್ಪಿದವರು. ಈತ ಮೈಸೂರಿನ ಹೆಚ್‌ಡಿಎಫ್‌ಸಿ ಬ್ಯಾಂಕ್ ಉದ್ಯೋಗಿಯಾಗಿದ್ದು, ಬೆಳಗ್ಗೆ ತನ್ನ ಬೈಕ್(ಕೆಎ.09, ಜೆಪಿ 5124)ನಲ್ಲಿ ಮೈಸೂರಿಗೆ ತೆರಳುತ್ತಿದ್ದ ವೇಳೆ ತಿ.ನರಸೀಪುರ ಕಡೆಯಿಂದ ಬಂದ ಮಿನಿ ಲಾರಿ (ಕೆಎ.55, ಎ3614) ಸೋಸಲೆ ಗ್ರಾಮದ ತಿರುವಿನಲ್ಲಿ ಬೈಕಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಶಿವಮೂರ್ತಿ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಬನ್ನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ವೃತ್ತ ನಿರೀಕ್ಷಕ ಮನೋಜ್ ಕುಮಾರ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸಾಗುವಳಿಗೆ ಧಕ್ಕೆ ತರುವವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ

ಸರಗೂರು, ಅ.1– ಬಿದರಹಳ್ಳಿ ಸರ್ವೆ ನಂ.83ರ ದಲಿತರ ಸಾಗುವಳಿಗೆ ಧಕ್ಕೆ ತರುತ್ತಿರುವವರ ಮೇಲೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಪಟ್ಟಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ತಾಲೂಕು ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಸಿಪಿಐಎಂಎಲ್ ಜಿಲ್ಲಾ ಕಾರ್ಯದರ್ಶಿ ಜವರಯ್ಯ ಮಾತನಾಡಿ, ಶತಮಾನಗಳಿಂದ ವಂಚನೆಗೊಳಗಾದ ಆದಿವಾಸಿ ಹಾಗೂ ಶೋಷಿತ ಸಮೂಹ ಅಂಬೇಡ್ಕರ್ ಸಂವಿಧಾನದಡಿ ಒಂದಷ್ಟು ಸೌಲಭ್ಯ ಪಡೆದುಕೊಂಡಿದ್ದರೂ, ರಾಜ್ಯ ಮತ್ತು ಜಿಲ್ಲೆಯ ಭೂರಹಿತ ಸಾಗುವಳಿದಾರರಿಗೆ ಮೋಸವಾಗುತ್ತಿದೆ. ಭೂರಹಿತರಲ್ಲಿ ಶೆ.70ರಷ್ಟು ಎಸ್‌ಸಿ/ಎಸ್‌ಟಿಗಳಿದ್ದಾರೆ. ಇವರು ಎಲ್ಲಾ ಕಾಲಕ್ಕೂ ಭೂಮಿಯಲ್ಲಿ ದುಡಿದವರು. ಆದರೆ ಇವರಿಗೆ ಸ್ವಂತ ಭೂಮಿ ಇಲ್ಲ. ಮಣ್ಣನ್ನೇ ಮುಟ್ಟದ ಕೆಲವು ಶ್ರೀಮಂತ ಭೂ ಮಾಲೀಕರ ಕೈಯಲ್ಲಿ ಸಾವಿರಾರು ಎಕರೆ ಭೂಮಿ ಇದೆ. ಹೆಚ್.ಡಿ.ಕೋಟೆ, ಸರಗೂರು ತಾಲೂಕುಗಳಲ್ಲಿ ಕಬಿನಿ, ತಾರಕ, ನುಗು, ಹೆಬ್ಬಾಳ ಜಲಾಶಯಗಳಿಗೆ ಭೂಮಿ ಕಳೆದುಕೊಂಡವರಿಗೆ ಇನ್ನೂ ಸಹ ನ್ಯಾಯಯುತ ಪರಿಹಾರ ನೀಡಿಲ್ಲ. ಅಲ್ಲದೇ ಪರ್ಯಾಯ ಜಮೀನುಗಳನ್ನು ನೀಡದೆ ವಂಚಿಸಲಾಗಿದೆ. ಸರಗೂರು ತಾಲೂಕಿನ ಲಕ್ಷ್ಮಣಪುರ ಸರ್ಕಾರಿ ಕರಾಬಿನ 729 ಪ್ರದೇಶದಲ್ಲಿ 152 ಆದಿವಾಸಿ ಕುಟುಂಬಗಳು ವ್ಯವಸಾಯ ಮಾಡುತ್ತಿದ್ದವರನ್ನು ಕಳೆದ 7–8 ವರ್ಷಗಳಿಂದ ಬೆಳೆಗಳಿಗೆ ರಾಸಾಯನಿಕ ಸಿಂಪಡಿಸುತ್ತಾರೆ ಎಂಬ ನೆಪವೊಡ್ಡಿ ಅರಣ್ಯ ಇಲಾಖೆಯವರು ದಬ್ಬಾಳಿಕೆ ನಡೆಸಿದ್ದಾರೆ. ಇದರಿಂದ ಇವರು ಕುಟುಂಬ ನಿರ್ವಹಣೆಗಾಗಿ ಶ್ರೀಮಂತರ ಮನೆಗಳಲ್ಲಿ ಜೀತ ಮಾಡುವ ಪರಿಸ್ಥಿತಿ ಬಂದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಸರಗೂರಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ ನಡೆಸಲಾಯಿತು.

ನಟ ಸಂದೇಶ್ ಮಾತನಾಡಿ, ಬಿದರಹಳ್ಳಿ ಗ್ರಾಮದ ಜಮೀನಿನಲ್ಲಿ ದಬ್ಬಾಳಿಕೆಯಿಂದ ಬೇಲಿ ನಿರ್ಮಿಸಿರುವುದನ್ನು ತೆರವುಗೊಳಿಸಿ ರೈತರಿಗೆ ನೀಡದಿದ್ದರೇ ಅ.21ರಂದು ತಾಲೂಕು ಕೇಂದ್ರದಿಂದ ಬಿದರಹಳ್ಳಿವರೆಗೆ ಪ್ರಗತಿಪರ ಸಂಘಟನೆಗಳೊಂದಿಗೆ ಸಾವಿರಾರು ಸಂಖ್ಯೆಯಲ್ಲಿ ಕಾಲ್ನಡಿಗೆಯಲ್ಲಿ ತೆರಳಿ ನಮ್ಮ ಬೇಡಿಕೆ ಈಡೇರುವವರೆಗೆ ಬೃಹತ್ ಹೋರಾಟ ನಡೆಸಲಾಗುವುದು ಎಂದು ತಹಸೀಲ್ದಾರ್ ರುಕಿಯಾ ಬೇಗಂಗೆ ಮನವಿ ಸಲ್ಲಿಸಿದರು.

ರೈತ ಸಂಘದ ಸಂಚಾಲಕ ಶಿವರಾಜು, ಸಂವಿಧಾನ ಸಂರಕ್ಷಣಾ ಸಮಿತಿ ಸಂಸ್ಥಾಪಕ ಮಹೇಶ್ ಮಾತನಾಡಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಶ್ರೀನಿವಾಸ್, ದೇವರಾಜು, ಜವರಯ್ಯ, ಮಹಾಲಿಂಗಯ್ಯ, ಶೈಲೇಂದ್ರ, ಮಹದೇವಸ್ವಾಮಿ, ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸದಸ್ಯರು ಇನ್ನಿತರರಿದ್ದರು.

ವಿಚಿತ್ರ ಕರು ಜನನ



ಹುಣಸೂರು ತಾಲೂಕಿನ ಹನಗೋಡು ಹೋಬಳಿಯ ಹೆಗ್ಗಂದೂರು ಗ್ರಾಮದ ನಿವಾಸಿ ಚಂದ್ರಪ್ಪ ಅವರ ಹಸು ವಿಚಿತ್ರ ಕರುವಿಗೆ ಜನ್ಮ ನೀಡಿದೆ. ಬಾಲವಿಲ್ಲದ ಕರು ಜನಿಸಿದ್ದು, ತಲೆ ವಿಪರೀತ ದಪ್ಪವಿದೆ. ಗ್ರಾಮಸ್ಥರು ತಂಡೋಪ ತಂಡವಾಗಿ ಬಂದು ಕರುವನ್ನು ನೋಡುತ್ತಿದ್ದಾರೆ.



ಉಕ್ಕಲಗೆರೆ ಡೈರಿಗೆ ಈ ವರ್ಷವೂ ಉತ್ತಮ ಲಾಭ

ಮೈಮುಲ್ ವಿಸ್ತರಣಾಧಿಕಾರಿ ಆರ್.ಪ್ರಮೋದ್



ವಾರ್ಷಿಕ ಮಹಾಸಭೆಯಲ್ಲಿ ಹೆಚ್ಚು ಹಾಲು ಪೂರೈಕೆ ಮಾಡಿದ ರೈತರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಅ.1– ಉಕ್ಕಲಗೆರೆ ಹಾಲು ಉತ್ಪಾದಕರ ಸಹಕಾರ ಸಂಘ ರೈತರಿಗೆ ಸಮಯಕ್ಕೆ ಸರಿಯಾಗಿ ಬೋನಸ್ ನೀಡುವ ಮೂಲಕ ಯಶಸ್ವಿಯಾಗಿ ಮುನ್ನಡೆದಿದ್ದು, ಪ್ರಸಕ್ತ ವರ್ಷದಲ್ಲೂ ಉತ್ತಮ ಲಾಭ ಗಳಿಸಿದೆ ಎಂದು ಮೈಮುಲ್ ವಿಸ್ತರಣಾಧಿಕಾರಿ ಆರ್.ಪ್ರಮೋದ್ ತಿಳಿಸಿದರು.

ಉಕ್ಕಲಗೆರೆ ಡೈರಿ ಆವರಣದಲ್ಲಿ ನಡೆದ ಸಂಘದ 2023–24ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಸಂಘಕ್ಕೆ ಈ ಹಿಂದೆ 700 ಲೀಟರ್ ಸರಬರಾಜಾಗುತ್ತಿತ್ತು. ಇದೀಗ ಸಾವಿರಕ್ಕೂ ಹೆಚ್ಚು ಲೀಟರ್ ಹಾಲು ಸರಬರಾಜು ಆಗುತ್ತಿದೆ. ರೈತರಿಂದ ಹಾಲು ಪಡೆದು ಅದನ್ನು ಡೈರಿಗೆ ಮಾರಾಟ ಮಾಡಿ ಅದರಲ್ಲಿ ಬರುವ ಲಾಭದಿಂದ ಡೈರಿ ನಡೆಸಿಕೊಂಡು ಹೋಗಬೇಕಾಗುತ್ತದೆ ಎಂದರು.

ಪ್ರಸಕ್ತ ಸಾಲಿನಲ್ಲಿ ಸಂಘವು ಪಶು ಆಹಾರ, ಖನಿಜ ಮಿಶ್ರಣ, ಜೋಳ, ನೆಕ್ಕು ಬಿಲ್ಲೆ ಖರೀದಿಗಾಗಿ 1,64,39,614 ರೂ. ವೆಚ್ಚ ಮಾಡಿದೆ. ಮೈಸೂರು ಡೈರಿಗೆ 1,36,06,637 ರೂ.ಗಳ ಹಾಲು ಮಾರಾಟ ಮಾಡಿದೆ. 8,59,555 ರೂ.ಗಳಷ್ಟು ಸ್ಥಳೀಯ ಹಾಲು ಮಾರಾಟ ಹಾಗೂ 65,081ರಷ್ಟು ಮಾದರಿ ಹಾಲು ಮಾರಾಟ ಮಾಡಿದೆ ಎಂದು ವಿವರ ನೀಡಿದರು.

ಸಿಇಓ ಮಣಿಕಂಠ ವಾರ್ಷಿಕ ವರದಿ ಮಂಡಿಸಿ ಪ್ರಸಕ್ತ ವರ್ಷ ಸಂಘವು 4,50,932 ರೂ. ನಿವ್ವಳ ಲಾಭಗಳಿಸಿದ್ದು, 2,13,262 ರೂ.ಗಳನ್ನು ಹಾಲು ಮಾರಾಟಗಾರರು ಬಯಸಿದಾಗ ಬೋನಸ್ ರೂಪದಲ್ಲಿ ನೀಡಲಾಗುತ್ತದೆ ಎಂದರು.

ಈ ವೇಳೆ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ನಟರಾಜು, ಮಲ್ಲಿಕಾರ್ಜುನಸ್ವಾಮಿ ಹಾಗೂ ರಾಮಲಿಂಗೇಗೌಡರಿಗೆ ಉಡುಗೊರೆ ನೀಡಿ ಸನ್ಮಾನಿಸಲಾಯಿತು.

ಈ ವೇಳೆ ಸಂಘದ ಉಪಾಧ್ಯಕ್ಷ ನಾಗೇಂದ್ರ, ನಿರ್ದೇಶಕರಾದ ಎಸ್. ಮಹದೇವಸ್ವಾಮಿ, ಎಂ.ಮಹದೇವಸ್ವಾಮಿ, ಎಂ.ಶಿವಪ್ಪ, ಪ್ರೇಮ, ಲೋಕೇಶ್, ಎಂ.ಮಹದೇವಪ್ಪ, ರುದ್ರಸ್ವಾಮಿ, ನಟರಾಜು, ಮುಖಂಡರಾದ ಎಂ.ನಾಗಣ್ಣ, ಅಡುಗೆ ಗುತ್ತಿಗೆದಾರ ಮಲ್ಲಿಕಾ, ಹಾಲು ಪರೀಕ್ಷಕ ಬಿ.ನಂದೀಶ್, ಸಹಾಯಕ ಚಂದ್ರಶೇಖರ್ ಸೇರಿದಂತೆ ಗ್ರಾಮಸ್ಥರು, ಯಜಮಾನರು ಹಾಜರಿದ್ದರು.

ಕುಪ್ಯ ಗ್ರಾಮ ಪಂಚಾಯಿತಿ ಚುನಾವಣೆ

ಗವಿಸಿದ್ದಯ್ಯ ಅಧ್ಯಕ್ಷ, ಮಂಜುಳಾ ಉಪಾಧ್ಯಕ್ಷೆಯಾಗಿ ಆಯ್ಕೆ

ತಿ.ನರಸೀಪುರ, ಅ.1– ತಾಲೂಕಿನ ಕುಪ್ಯ ಗ್ರಾಪಂ ನೂತನ ಅಧ್ಯಕ್ಷರಾಗಿ ಗವಿಸಿದ್ದಯ್ಯ(ಕೆಂಚ), ಉಪಾಧ್ಯಕ್ಷೆಯಾಗಿ ಮಂಜುಳಾ ಅವಿರೋಧವಾಗಿ ಆಯ್ಕೆಯಾದರು.

ಆಂತರಿಕ ಒಪ್ಪಂದದಂತೆ ಹಿಂದಿನ ಅಧ್ಯಕ್ಷೆ ಯಶೋಧ ಹಾಗೂ ಉಪಾಧ್ಯಕ್ಷೆ ಶಿವಮ್ಮ ಅವರು ರಾಜೀನಾಮೆ ಸಲ್ಲಿಸಿದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ಗ್ರಾಪಂ ಆವರಣದಲ್ಲಿ ಮಂಗಳವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಗವಿಸಿದ್ದಯ್ಯ, ಉಪಾಧ್ಯಕ್ಷ ಸ್ಥಾನಕ್ಕೆ ಮಂಜುಳಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯಾದ ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಕೃಷ್ಣಮೂರ್ತಿ ಪ್ರಕಟಿಸಿದರು. ಈ ವೇಳೆ ಗ್ರಾಪಂ ಎದುರು ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಸಭೆಯಲ್ಲಿ ಎಸ್.ರಾಘವೇಂದ್ರ, ಭಾಗ್ಯಮ್ಮ, ಎನ್.ಗೋವಿಂದ, ನಂದಿನಿ, ಕೆ.ಸಿ.ಪುಟ್ಟರಾಜು, ಪುಷ್ಪ, ಪಿ.ಪದ್ಮ, ಮಹದೇವಶೆಟ್ಟಿ ಯಶೋಧ, ಶಿವಮ್ಮ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷ ಗವಿಸಿದ್ದಯ್ಯ ಮಾತನಾಡಿ, ತಮ್ಮಅವಿರೋಧ ಆಯ್ಕೆಗೆ ಸಹಕರಿಸಿದ ಎಲ್ಲಾ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು. ಅಲ್ಲದೇ ಗ್ರಾಪಂಗೆ ಸರ್ಕಾರದಿಂದ ಬರಬಹುದಾದ ಎಲ್ಲಾ ಅನುದಾನಗಳನ್ನು ತಂದು ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಮೂಲ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಸಿಎಂ ಸಿದ್ದರಾಮಯ್ಯ ಹಾಗೂ ಎಂಎಲ್‌ಸಿ ಯತೀಂದ್ರ ಅವರು ಪ್ರತಿನಿಧಿಸುವ ವರುಣ ವ್ಯಾಪ್ತಿಗೆ ಗ್ರಾಪಂ ಒಳಪಡುವುದರಿಂದ ಅವರಿಂದ ಹೆಚ್ಚಿನ ಅನುದಾನ ನಿರೀಕ್ಷೆ ಮಾಡಲಾಗುತ್ತದೆ. ಗ್ರಾಪಂ ಅನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಿ ಕುಪ್ಯ ಪಂಚಾಯಿತಿಯನ್ನು ಮಾದರಿ ಮಾಡುವ ಉದ್ದೇಶ ಹೊಂದಲಾಗಿದೆ ಎಂದರು.



ಕುಪ್ಯ ಗ್ರಾಪಂ ಅಧ್ಯಕ್ಷರಾಗಿ ಗವಿಸಿದ್ದಯ್ಯ, ಉಪಾಧ್ಯಕ್ಷೆಯಾಗಿ ಮಂಜುಳಾ ಅವಿರೋಧವಾಗಿ ಆಯ್ಕೆಯಾದರು.

ಗ್ರಾಪಂ ಸದಸ್ಯ ರಾಘವೇಂದ್ರ ಮಾತನಾಡಿ, ಪಂಚಾಯಿತಿಯಲ್ಲಿ ಅವಿರೋಧ ಆಯ್ಕೆ ಮಾಡುವ ಮೂಲಕ ಎಲ್ಲರಿಗೂ ಸಾಮಾಜಿಕ ನ್ಯಾಯ ದೊರಕಿಸಿಕೊಡಲಾಗಿದೆ. ಯಾವುದೇ ಗುಂಪುಗಾರಿಕೆಗೆ ಅವಕಾಶ ಮಾಡಿಕೊಡದೇ, ಗೊಂದಲವಿಲ್ಲದೇ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅಧ್ಯಕ್ಷರ ಆಯ್ಕೆ ಮಾಡಲಾಗಿದೆ. ನೂತನ ಅಧ್ಯಕ್ಷರಿಗೆ ಎಲ್ಲಾ ಸದಸ್ಯರು ಸಹಕಾರ ನೀಡುವ ಮೂಲಕ ಅವರು ಉತ್ತಮ ಆಡಳಿತ ನಡೆಸಲು ಅವಕಾಶ ಮಾಡಿಕೊಡಬೇಕಿದೆ ಎಂದು ಮನವಿ ಮಾಡಿದರು.

ಈ ವೇಳೆ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ಜಿಪಂ ಮಾಜಿ ಸದಸ್ಯ ಕೆ.ಮಹದೇವ, ಡೈರಿ ಅಧ್ಯಕ್ಷ ಕೆ.ಬಿ.ಪ್ರಭಾಕರ್, ಮಾಜಿ ಅಧ್ಯಕ್ಷ ಅಂದಾನಿ, ಎಸ್.ಶಿವರಾಮು, ಎ.ಪಿ.ಮಾದೇಗೌಡ, ಪಿ.ಶಿವರಾಮು, ಪುಟ್ಟಸ್ವಾಮಿ, ಜೆ.ಶಿವರಾಮು, ಶಿವಮಲ್ಲುಗಾರೆ ಶಿವಣ್ಣ, ನಂಜುಂಡಸ್ವಾಮಿ, ರಂಗಸ್ವಾಮಿ, ಅನಿಲ್, ಸೀನಪ್ಪ ಹರೀಶ್, ರಾಜೇಶ್, ಟಿ.ತಮ್ಮೇಗೌಡ, ನಾಗೇಶ್, ಹೆಚ್.ಎಸ್.ಮಹದೇವ, ಅಂಗಡಿ ಮಹದೇವ, ಕಾಳಪ್ಪ, ಯಡದೊರೆ ಮರಯ್ಯ, ಮೇಗಳಪುರ ಮಹೇಶ್, ದಯಾನಂದ, ನವೀನ್, ಎಸ್‌ಡಿಎಂಸಿ ಅಧ್ಯಕ್ಷ ಉಮೇಶ್, ನಾಗರಾಜು, ಪಿಡಿಓ ಅಮ್ಜದ್ ಪಾಷ ಮತ್ತಿತರಿದ್ದರು.

ಬಯಸದೇ ಬಂದ ಭಾಗ್ಯ...!

ನೂತನ ಗ್ರಾಪಂ ಅಧ್ಯಕ್ಷರಾಗಿ ಆಯ್ಕೆಯಾದ ಗವಿಸಿದ್ದಯ್ಯ ಅವರಿಗೆ ಅಧ್ಯಕ್ಷ ಸ್ಥಾನ ಬಯಸದೇ ಬಂದ ಭಾಗ್ಯವೇ ಸರಿ. ಅಧ್ಯಕ್ಷ ಸ್ಥಾನ ಪ.ಪಂಗಡಕ್ಕೆ ಮೀಸಲಾಗಿತ್ತು. ಆದರೆ, ಪಂಚಾಯಿತಿಯಲ್ಲಿ ಪ.ಪಂಗಡಕ್ಕೆ ಸೇರಿದ ಯಾವೊಬ್ಬ ಸದಸ್ಯರು ಇಲ್ಲದ ಕಾರಣ ಕಾನೂನಿನಲ್ಲಿರುವ ಅವಕಾಶದಂತೆ ಅಧ್ಯಕ್ಷ ಸ್ಥಾನ ಪ.ಜಾತಿಗೆ ನಿಗದಿಯಾಯಿತು. ಹಾಗಾಗಿ ಪ.ಪಂಗಡಕ್ಕೆ ಮೀಸಲಾದ ಅಧ್ಯಕ್ಷ ಸ್ಥಾನ ಪ.ಜಾತಿಯ ಗವಿಸಿದ್ದಯ್ಯರ ಮಡಿಲಿಗೆ ಬಿದ್ದು ಅವರು ಅಧ್ಯಕ್ಷರಾಗಿ ಆಯ್ಕೆಯಾದರು.

ನಿಧನ



ಸಾವಿತ್ರಮ್ಮ

ಸರಗೂರು, ಅ.1– ಪಟ್ಟಣದ ಒಂದನೇ ವಾರ್ಡ್ ನಿವಾಸಿ ಲೇ. ಸಾಹುಕಾರ್ ವೀರಭದ್ರಸ್ವಾಮಿ ಅವರ ಪತ್ನಿ ಸಾವಿತ್ರಮ್ಮ(93) ಸೋಮವಾರ ನಿಧನರಾದರು. ಮೃತರು ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೈಸೂರಿನ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯರ ಪತ್ನಿ ಶ್ರೀಮತಿ ಪಾರ್ವತಿಯವರಿಂದ ಮುಡಾಕ್ಕೆ ನಿವೇಶನ ವಾಪಸ್ ನೀಡಿದ ಪ್ರಕರಣ

ಕಳ್ಳತನ ಮಾಡಿ ಆಮೇಲೆ ತಪ್ಪಾಯಿತು ಎಂದಂತಾಯ್ತು!?

● 14 ನಿವೇಶನ ಮರಳಿಸಿದ ಬಗ್ಗೆ ಕೇಂದ್ರ ಸಚಿವ ಕುಮಾರಸ್ವಾಮಿ ಲೇವಡಿ

● ಮುಡಾಕ್ಕಿಂತಲೂ ಮತ್ತೊಂದು ದೊಡ್ಡ ಹಗರಣ ಅವರ ಹೆಸರಲ್ಲಿದೆ

ಬೆಂಗಳೂರು, ಅ. 1(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ 14 ನಿವೇಶನಗಳನ್ನು ವಾಪಸ್ ಮಾಡಿರುವುದು ಕಳ್ಳತನ ಮಾಡಿ ಆಮೇಲೆ ತಪ್ಪಾಯಿತು ಎಂದು ಹೇಳಿದಂತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಲೇವಡಿ ಮಾಡಿದ್ದಾರೆ.

ಮುಖ್ಯಮಂತ್ರಿ ಅವರ ಧರ್ಮಪತ್ನಿ ನನಗೂ ಸಹೋದರಿ ಸಮಾನ, ಅವರ ಬಗ್ಗೆ ಗೌರವ ಇಟ್ಟುಕೊಂಡೇ ಈ ಮಾತನ್ನು ಹೇಳುತ್ತಿದ್ದೇನೆ ಎಂದರು.

ಸಿದ್ದರಾಮಯ್ಯ ನನ್ನ ಬಗ್ಗೆ ಯಾವಾಗಲೂ ಹಿಟ್ ಅಂಡ್ ರನ್ ಎನ್ನುತ್ತಾರೆ. ಈಗ ಇವರೇನು, ಯೂಟರ್ನಾ! ನಿವೇಶನ ವಾಪಸ್ ಕೊಡುವ ತರಾತುರಿ ನಿರ್ಧಾರ ಯಾರು ಹೇಳಿಕೊಟ್ಟಿದ್ದು.

ಸೋಮವಾರ ರಾತ್ರಿ ಏಕಾಏಕಿ ಪತ್ರ ಬರೆದು ನಿವೇಶನಗಳು ಬೇಡ, ವಾಪಸ್ ಮಾಡುತ್ತಿದ್ದೇನೆ ಎಂದಿದ್ದಾರೆ, ಮನೆ, ಚಿನ್ನ, ಒಡವೆ ಯಾವುದರ ಮೇಲೆಯೂ ಮಮತೆ ಇಲ್ಲ, ನನ್ನ ಪತಿಯ ಮುಂದೆ ಅದೆಲ್ಲ ತೃಣಕ್ಕೆ ಸಮಾನ ಎಂದು ಹೇಳಿಕೊಂಡಿದ್ದಾರೆ.



ನಾನು ಆ ಹೆಣ್ಣುಮಗಳ ಬಗ್ಗೆ ಮಾತನಾಡಲ್ಲ ಆದರೆ ಅದೇನೋ ಕಪ್ಪುಚುಕ್ಕೆ ಇಲ್ಲದಂತೆ ರಾಜಕೀಯ ಮಾಡಿದ್ದಾರಂತೆ ಸಿದ್ದರಾಮಯ್ಯ ಅವರು. ಆ ಹೆಣ್ಣು ಮಗಳು ತಮ್ಮ ಪತಿಯ ಗಮನಕ್ಕೆ ಬಾರದೆಯೇ ನಿವೇಶನಗಳನ್ನು ವಾಪಸ್ ಕೊಟ್ಟಿದ್ದಾರಾ. ವಿನಾಕಾರಣ ನನ್ನನ್ನು ಸುಳ್ಳುಗಾರ ಎನ್ನುತ್ತಾರೆ. ಇವರ ಇಂದಿನ ಮಾತು ಕೇಳಿಸಿಕೊಂಡರೆ ಸುಳ್ಳು ಎಲ್ಲಿ ಹುಟ್ಟಿದೆ ಎನ್ನುವುದು ಗೊತ್ತಾಗುತ್ತದೆ.

ಮುಡಾ ಹಗರಣ ಮಾತ್ರ ಅಲ್ಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಇನ್ನೂ ಹಲವಾರು ಅಕ್ರಮಗಳನ್ನು ಎಸಗಿದ್ದಾರೆ. ಈ ಹಿಂದೆ ಏನೆಲ್ಲ ಮಾಡಿದ್ದಾರೆ, ವೈಟ್ನರ್ ಹಾಕಿ ಎಲ್ಲ ಮುಗಿದೋಯ್ತು ಎಂದುಕೊಂಡಿದ್ದರು.

ಮುಡಾದ 14 ಸೈಟ್ ಕಥೆ ಒಂದು ಕಡೆಯಾದರೆ, ಇದಕ್ಕಿಂತ ಹಳೆ ಕೇಸ್ ಒಂದಿದೆ, ಆ ಪ್ರಕರಣ ಕುತ್ತಿಗೆಗೆ ಬಂದಾಗ ಒಂದು ಕೋಟಿ ರೂ.ಗೆ ನಿವೇಶನ ಮಾರಾಟ ಮಾಡಿಕೊಂಡರು. ಆದರೆ, ಚುನಾವಣಾ ಸಾಲಕ್ಕಾಗಿ ಮಾರಾಟ ಮಾಡಲಾಯಿತು ಎಂದು ಕಥೆ ಕಟ್ಟಿದ್ದರು. ಆ ನಿವೇಶನ ಎಲ್ಲಿಂದ ಬಂದಿತ್ತು, ಸ್ವಲ್ಪ ಹೇಳುವಿರಾ ಎಂದು ಕೇಳಿದರು.

ಬಡವರ ಮಕ್ಕಳ ವಸತಿ ಶಾಲೆ ನಿರ್ಮಾಣಕ್ಕಾಗಿ ಭೂಮಿಯನ್ನು ಡಿ–ನೋಟಿಫಿಕೇಷನ್ ಮಾಡಿಸಿಕೊಂಡು, ಅದನ್ನು ಸಿದ್ದರಾಮಯ್ಯ ಪಡೆದುಕೊಂಡಿದ್ದಾರೆ. ಈ ಪ್ರಕರಣದಲ್ಲೂ ಸಿದ್ದರಾಮಯ್ಯ ಮೊದಲ ಆರೋಪಿ. ಒಟ್ಟು 18 ಆರೋಪಿಗಳಿದ್ದಾರೆ. ನ್ಯಾಯಾಲಯದಿಂದ ಸಿದ್ದರಾಮಯ್ಯ ವಿರುದ್ಧ ತೀರ್ಪು ಬಂದಿದೆ. ಅದನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಮನವಿ ಸಲ್ಲಿಸಿ ರಿಲೀಫ್ ಪಡೆದುಕೊಂಡರು. ಇದು 14 ಸೈಟ್‌ಗಿಂತ ದೊಡ್ಡ ಹಗರಣ.


ಊರಿಗೆ ಬುದ್ಧಿ ಹೇಳೋರು ಈ ಪ್ರಕರಣದಲ್ಲಿ ಏನೇನು ಮಾಡಿದ್ದೀರಿ ಎಂಬ ಸತ್ಯ ಹೇಳಿ, ಈಗ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗಿ ಕುಂಕುಮ ಇಟ್ಟುಕೊಂಡು ರಕ್ಷಣೆ ಪಡೆಯುತ್ತಿದ್ದಾರೆ. ಇದರ ಜೊತೆಗೆ ಇನ್ನು ಎರಡು ಪ್ರಕರಣಗಳಿವೆ ಎಂದು ಕುಮಾರಸ್ವಾಮಿ ವಿವರಿಸಿದರು.

ಸಚಿವ ಕೃಷ್ಣಭೈರೇಗೌಡರೇ, ನೀವು ಮೇಧಾವಿಯಲ್ಲವೇ, ಇವನ್ನೆಲ್ಲಾ ಒಮ್ಮೆ ಪರಿಶೀಲನೆ ಮಾಡಪ್ಪಾ ನಾನು ಇಂತಹ ಕೆಲಸ ಮಾಡಿಲ್ಲ ನಾನೊಂದು ಬಗೆದರೆ ದೈವ ಮತ್ತೊಂದು ಬಗೆಯುವುದು ಎಂದರೆ ಇದೇ. ಅಧಿಕಾರ ದುರ್ಬಳಕೆ ಮಾಡಿಕೊಂಡು ನಮ್ಮನ್ನು ಮುಗಿಸಲು ಹೊರಟಿದ್ದಾರೆ ಎಂದು ಕುಮಾರಸ್ವಾಮಿ ಕಿಡಿಕಾರಿದರು.

ಮುಡಾ ನಿವೇಶನ ವಾಪಸ್ ಮಾಡುವುದರೊಂದಿಗೆ ಮತ್ತಷ್ಟು ಸಂಕಷ್ಟಕ್ಕೀಡಾದ ಸಿದ್ದರಾಮಯ್ಯ

ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯೆ

ಬೆಂಗಳೂರು, ಅ. 1(ಕೆಎಂಶಿ)– ಮುಡಾ ನಿವೇಶನಗಳನ್ನು ವಾಪಸ್ ಕೊಡುವ ಮೂಲಕ ಮತ್ತಷ್ಟು ಸಂಕಷ್ಟವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಮೇಲೆ ಎಳೆದುಕೊಂಡಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಧರ್ಮಪತ್ನಿ ಮುಡಾ ಸೈಟ್ ವಾಪಸ್ ನೀಡುವುದನ್ನು ಮೊದಲೇ ಮಾಡಬೇಕಿತ್ತು ಹೈಕೋರ್ಟ್ ನ್ಯಾಯಮೂರ್ತಿಗಳಿಂದ ತನಿಖೆ ಮಾಡಿಸಿದ್ದರೆ ಮುಖ್ಯಮಂತ್ರಿಗಳ ಪ್ರಾಮಾಣಿಕತೆ ಪ್ರಶ್ನೆ ಬರುತ್ತಿರಲ್ಲಿಲ್ಲ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟು ಪ್ರಕರಣ ದಾಖಲಾಗಿ, ತನಿಖೆ ನಡೆದಿದೆ, ಈಗ ನಿವೇಶನ ವಾಪಸ್ ಮಾಡುವುದರಿಂದ ಹಲವು ಪ್ರಶ್ನೆಗಳು ಉದ್ಭವಿಸಿವೆ ಎಂದರು.

ಎಫ್‌ಐಆರ್ ದಾಖಲಾದ ಮೇಲೆ ತನಿಖೆ ಆಗಲೇಬೇಕು, ಒಂದು ಕಡೆ ಲೋಕಾಯುಕ್ತ ತನಿಖೆ, ಮತ್ತೊಂದೆಡೆ ಇಡಿ. ತನಿಖೆ ನಡೆಯುತ್ತಿದೆ.

ಕಾಂಗ್ರೆಸ್ ನಾಯಕರು ತಪ್ಪೇ ನಡೆದಿಲ್ಲ ಅನ್ನುತ್ತಿದ್ದರು, 14 ನಿವೇಶನಗಳನ್ನು ವಾಪಸ್ ಕೊಟ್ಟು ತಪ್ಪಾಗಿರುವುದನ್ನು ಒಪ್ಪಿಕೊಂಡಿರುವುದಲ್ಲದೆ, ಕಾನೂನುಬಾಹಿರವಾಗಿ ನಿವೇಶನ ಹಂಚಿಕೆಯಾಗಿದೆ ಎಂಬುದನ್ನು ಅವರೇ ಒಪ್ಪಿಕೊಂಡಂತೆ ಆಗಿದೆ.

ಈ ಹಿಂದೆ ಯಡಿಯೂರಪ್ಪ ನಿವೇಶನ ವಾಪಸ್ ಮಾಡಿದಾಗ, ಸಿದ್ದರಾಮಯ್ಯ ಏನು ಹೇಳಿದ್ದರು ನೆನಪಿಸಿಕೊಳ್ಳಲಿ, 'ಯಡಿಯೂರಪ್ಪ ಸೈಟ್ ವಾಪಸ್ ಮಾಡುವ ಮೂಲಕ ತಪ್ಪನ್ನು ಒಪ್ಪಿಕೊಂಡಿದ್ದಾರೆ' ಅಂತ ಹೇಳಿದ್ದರು. ಈಗ ಇದೇ ಮಾತು ಸಿದ್ದರಾಮಯ್ಯ ಅವರಿಗೂ ಅನ್ವಯ ಆಗುತ್ತದೆ ಎಂದರು.

ಸಹಾನುಭೂತಿ ಪಡೆಯಲು 14 ನಿವೇಶನಗಳ ಹಿಂದಿರುಗಿಸುವ ರಾಜಕೀಯ ನಾಟಕವಿದು

● ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕೆ ● ಭಂಡತನ ಬಿಟ್ಟು ಇನ್ನಾದರೂ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲಿ

ಬೆಂಗಳೂರು, ಅ. 1(ಕೆಎಂಶಿ)– ಮುಡಾ ಹಗರಣದಲ್ಲಿ ನ್ಯಾಯಾಲಯಗಳ ತೀರ್ಪಿನಿಂದ ಕಾನೂನಿನ ಕುಣಿಕೆಗೆ ಸಿಲುಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹಾನುಭೂತಿ ಪಡೆಯಲು 14 ನಿವೇಶನಗಳನ್ನು ಹಿಂತಿರುಗಿಸುವ ರಾಜಕೀಯ ನಾಟಕ ಆಡುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ಟೀಕಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಪ್ಪು ಮಾಡದಿದ್ದರೆ ನಿವೇಶನಗಳನ್ನು ಏಕೆ ಹಿಂದಕ್ಕೆ ನೀಡುತ್ತಿದ್ದಾರೆ. ಈ ಮೂಲಕ ತಪ್ಪನ್ನು ಅಧಿಕೃತವಾಗಿ ಒಪ್ಪಿಕೊಂಡಂತಾಗಿದೆ ಎಂದರು.

ಕಾನೂನಿನ ಕುಣಿಕೆಯಿಂದ ಪಾರಾಗುವ ಉದ್ದೇಶದಿಂದ ಈ ನಾಟಕ ಆಡುತ್ತಿದ್ದಾರೆ. ಸಿದ್ದರಾಮಯ್ಯ ಯಾವುದೇ ಕ್ಷಣದಲ್ಲಿ ರಾಜೀನಾಮೆ ಕೊಡಬಹುದು. ಕೆಲವೇ ಗಂಟೆಗಳಲ್ಲಿ ಆದರೂ ಅಚ್ಚರಿಯಿಲ್ಲ.

ಆರೋಪಿ ಸ್ಥಾನದಲ್ಲಿರುವ ಸಿದ್ದರಾಮಯ್ಯ ಇನ್ನಾದರೂ ತಮ್ಮ ಭಂಡತನ ಬಿಟ್ಟು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಅದಕ್ಕೂ ಮೊದಲು ಗೌರವಾನ್ವಿತ ರಾಜ್ಯಪಾಲರ ಕ್ಷಮೆ ಕೋರಬೇಕು.

ಸಾಮಾಜಿಕ ಕಾರ್ಯಕರ್ತ, ಬಡ ಕುಟುಂಬದ ಸ್ನೇಹಮಯಿ ಕೃಷ್ಣ ಅವರ ಮೇಲೆ ದೂರು ದಾಖಲಿಸಿ ಬೆದರಿಸುವ ತಂತ್ರವನ್ನು ಮುಖ್ಯಮಂತ್ರಿಗಳು ಹಾಗೂ ಅವರ ಹಿಂಬಾಲಕರು ಮಾಡುತ್ತಿದ್ದಾರೆ.



ಗೃಹ ಸಚಿವರು ಮತ್ತು ಡಿಜಿಪಿ, ತಕ್ಷಣ ಸ್ನೇಹಮಯಿ ಕೃಷ್ಣ ಅವರಿಗೆ ಸೂಕ್ತ ಭದ್ರತೆ ಒದಗಿಸಬೇಕು.

ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನದಿಂದ ಇಳಿಯುವುದನ್ನೇ ಕಾಂಗ್ರೆಸ್‌ನಲ್ಲಿ ಕೆಲವರು ಕಾಯುತ್ತಿದ್ದಾರೆ ಎಂದು ಅವರ ಆಪ್ತರಾದ ಮಹದೇವಪ್ಪನವರೇ ಹೇಳಿದ್ದಾರೆ.

ಅದಕ್ಕೂ ಮೊದಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಸಿದ್ದರಾಮಯ್ಯನವರು ಇವತ್ತು ಇರ್ತಾರೆ, ನಾಳೆ ಹೋಗ್ತಾರೆ ಎಂದಿದ್ದಾರೆ, ಇದು ನಿರ್ಗಮನದ ಮುನ್ಸೂಚನೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗೌಪ್ಯವಾಗಿ ಡಾ.ಪರಮೇಶ್ವರ್ ಅವರನ್ನು ಭೇಟಿ ಮಾಡಿ ಅರ್ಧ ಗಂಟೆ ಚರ್ಚೆ ಮಾಡಿದ್ದಾರೆ.

ಸಿದ್ದರಾಮಯ್ಯ ಅವರನ್ನು ಇನ್ನೂ ರಕ್ಷಿಸಲು ಸಾಧ್ಯವಿಲ್ಲ, ಕಷ್ಟ ಆಗುತ್ತಿದೆ. ಪಕ್ಷಕ್ಕೂ ಮುಜುಗರ ಆಗುತ್ತಿದೆ, ಬೇಗ ರಾಜೀನಾಮೆ ಕೊಟ್ಟರೆ ಅಷ್ಟೇ ಒಳಿತೆಂಬ ವಿಚಾರ ಚರ್ಚೆ ಆಗಿದೆ ಎಂಬ ವಿಚಾರ ನಮಗೆ ಲಭಿಸಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಕಳೆದ ಮೂರ್ನಾಲ್ಕು ತಿಂಗಳುಗಳಿಂದ ನಿರಂತರ ಹೋರಾಟ ಮಾಡುತ್ತಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ರೂ. ಹಗರಣ, ಮೈಸೂರು ಮುಡಾ ಹಗರಣ, ಎಸ್‌ಇಪಿ, ಟಿಎಸ್‌ಪಿ ಹಣ ದುರುಪಯೋಗದಂತಹ ಎಲ್ಲ ವಿಚಾರಗಳನ್ನು ಮುಂದಿಟ್ಟುಕೊಂಡು ಹೋರಾಟ ನಡೆಸಿದ್ದೇವೆ.

ಮುಖ್ಯಮಂತ್ರಿಗಳ ಕುಟುಂಬದ ವಿರುದ್ಧ ಆರೋಪ ಕೇಳಿಬಂದಾಗ, ತಮ್ಮ 40 ವರ್ಷಗಳ ರಾಜಕಾರಣದಲ್ಲಿ ಕಪ್ಪು ಚುಕ್ಕಿ ಇರಲಿಲ್ಲ ಎಂದು ಬಡಾಯಿ ಕೊಚ್ಚಿಕೊಂಡಿದ್ದರು.

ಹಿಂದಿನ 5 ವರ್ಷಗಳ ಮುಖ್ಯಮಂತ್ರಿ ಅವಧಿಯಲ್ಲಿ ಸಿದ್ದರಾಮಯ್ಯ ಅವರು, ಭ್ರಷ್ಟಾಚಾರ ಆರೋಪಗಳು ಬಂದಾಗ ಲೋಕಾಯುಕ್ತಕ್ಕೆ ಬೀಗ ಹಾಕಿ, ಎಸಿಬಿ ರಚಿಸಿ, ಆರೋಪಗಳನ್ನು ಮುಚ್ಚಿಹಾಕಲು ತಮಗೆ ಬೇಕಾದ ಅಧಿಕಾರಿಗಳನ್ನು ನೇಮಿಸಿಕೊಂಡಿದ್ದರು. ಸಿದ್ದರಾಮಯ್ಯ ವಿರುದ್ಧ ಗುರುತರ ಆರೋಪಗಳನ್ನು ಕೆಂಪಣ್ಣ ಆಯೋಗ ವರದಿಯಲ್ಲಿ ಉಲ್ಲೇಖಿಸಿದ್ದರೂ ಕಣ್ಮುಚ್ಚಿ ಕುಳಿತಿದ್ದರು ಎಂದು ಟೀಕಿಸಿದರು.

ಸಿದ್ದರಾಮಯ್ಯ ಮುಖ್ಯಮಂತ್ರಿ ಆದ ನಂತರ ಮೈಸೂರು ಮುಡಾದಲ್ಲಿ ಸಾವಿರಾರು ಕೋಟಿ ರೂ. ಬೆಲೆ ಬಾಳುವ 5 ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ತಮಗೆ ಬೇಕಾದ ಪುಢಾರಿಗಳು ಹಾಗೂ ರಿಯಲ್ ಎಸ್ಟೇಟ್ ದಲ್ಲಾಳಿಗಳಿಗೆ ಕೊಟ್ಟಿದ್ದಾರೆ.

ಬಿಜೆಪಿ–ಜೆಡಿಎಸ್ ಮೈಸೂರು ಪಾದಯಾತ್ರೆಗೆ ಮುಂದಾದಾಗ, ಬೆಂಗಳೂರಿನ ಹೊರವಲಯದಲ್ಲೇ ತಡೆಯುವ ಕೆಲಸ ಮಾಡಿದ್ದರು, ನಂತರ ವಿಧಾನಮಂಡಲ ಅಧಿವೇಶನ ಆರಂಭಕ್ಕೆ ಮುನ್ನ ಏಕವ್ಯಕ್ತಿ ತನಿಖಾ ಸಮಿತಿ ರಚಿಸಿದ್ದರು.

ನಿಲುವಳಿ ಸೂಚನೆ ಮಂಡಿಸಲು ಮುಂದಾದಾಗ, ಅವಕಾಶ ಕೊಡದೆ, ಅಧಿವೇಶನ ಮೊಟಕುಗೊಳಿಸಿ ಪಲಾಯನ ಮಾಡಿದ್ದರು ಎಂದು ಟೀಕಿಸಿದರು.

ಮುಡಾದ 14 ನಿವೇಶನ ವಾಪಸ್ ಕೊಡುವ ಸಂದರ್ಭ ಬರಲಿದೆ ಎಂದು ಈ ಮೊದಲೇ ಹೇಳಿದ್ದೆವು, ಸಿದ್ದರಾಮಯ್ಯ ಅವರ ಧರ್ಮಪತ್ನಿ ಪಾರ್ವತಿಯವರು ಪತಿ ಹಾಗೂ ಪುತ್ರನ ಗಮನಕ್ಕೆ ಬಾರದೇ ಮುಖ್ಯಮಂತ್ರಿಗಳ ಅಧಿಕೃತ ನಿವಾಸದಲ್ಲಿ ಕುಳಿತು ಮುಡಾಕ್ಕೆ ಪತ್ರ ಬರೆದು 14 ನಿವೇಶನ ವಾಪಸ್ ಕೊಡುವುದಾಗಿ ಹೇಳಿದ್ದಾರೆ.

ಪಾರ್ವತಿ ಅವರೇ ಸ್ವಇಚ್ಛೆಯಿಂದ ಈ ಪತ್ರ ಬರೆದರೇ, ಅಥವಾ ಬೇರೆಯವರ ಒತ್ತಾಯಕ್ಕೆ ಬರೆದರೋ ಗೊತ್ತಿಲ್ಲ. ತಪ್ಪೇ ಮಾಡಿಲ್ಲ, ನಾನು ಜಗ್ಗುವುದಿಲ್ಲ, ನಾನು ಬಗ್ಗುವುದಿಲ್ಲ, ಇದೆಲ್ಲ ರಾಜಕೀಯಪ್ರೇರಿತ ಎಂದು ಆರ್ಭಟಿಸುತ್ತಿದ್ದ ಮುಖ್ಯಮಂತ್ರಿ ಅವರು 62 ಕೋಟಿ ರೂ. ಪರಿಹಾರ ಕೊಡುತ್ತಾರಾ, ನಾನ್ಯಾಕೆ ಸೈಟ್ ವಾಪಸ್ ಕೊಡಲಿ ಎಂದಿದ್ದರು ಎಂದು ವ್ಯಂಗ್ಯವಾಡಿದರು.

ಹೊಗಳುಭಟ್ಟರು, ಬಹುಪರಾಕ್ ಹಾಕುವವರಿಂದ ಸಿದ್ದರಾಮಯ್ಯರಿಗೆ ಈ ಸ್ಥಿತಿ ಬಂತು

● ಪಾರ್ವತಿ ಅವರ ಭಾವನಾತ್ಮಕ ಕಾರ್ಡ್ ವರ್ಕ್ ಆಗಲ್ಲ

● ಸೈಟ್ ವಾಪಸ್ ಕೊಟ್ಟರೂ ತನಿಖೆಯಾಗಲೇಬೇಕು

● ಸಿಎಂವೊಬ್ಬರು ಜೈಲಿಗೆ ಹೋಗಿದ್ದು ಪಾಠವಾಗಬೇಕಿತ್ತು

ಮಾಜಿ ಸಂಸದ ಪ್ರತಾಪ್ ಸಿಂಹ ಲೇವಡಿ

ಮೈಸೂರು, ಅ.1(ಬಿಎಲ್‌ಯು) ಹೊಗಳುಭಟ್ಟರು, ಬಹುಪರಾಕ್ ಹಾಕುವವರನ್ನು ಹತ್ತಿರ ಇಟ್ಟುಕೊಂಡ ಪರಿಣಾಮ ಮುಖ್ಯ ಮಂತ್ರಿ ಸಿದ್ದರಾಮಯ್ಯರಿಗೆ ಈ ಸ್ಥಿತಿ ಬಂದಿದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಲೇವಡಿ ಮಾಡಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ನಿಮ್ಮ ಇಷ್ಟು ವರ್ಷದ ರಾಜಕೀಯ ಜೀವನ 14 ನಿವೇಶನ ನುಂಗಬಾರದು. ಆದ ಕಾರಣ ಅಕ್ರಮ ನಿವೇಶನಗಳನ್ನು ವಾಪಸ್ ಕೊಟ್ಟುಬಿಡಿ ಎಂದು ನಾನು ಎರಡೂವರೆ ತಿಂಗಳ ಹಿಂದೆಯೇ ಸಿದ್ದರಾಮಯ್ಯರಿಗೆ ಸಲಹೆ ನೀಡಿದ್ದೆ. ಆದರೆ ಅವರು ನನ್ನ ಮಾತು ಕೇಳಲಿಲ್ಲ ಎಂದು ತಿಳಿಸಿದರು. ಆಗಲೇ ನಿವೇಶನ ವಾಪಸ್ ನೀಡಿದ್ದರೆ ಇವತ್ತು ಪ್ರಾಸಿಕ್ಯೂಷನ್, ಲೋಕಾಯುಕ್ತ ತನಿಖೆ ಸೇರಿದಂತೆ ಯಾವುದೇ ಸವಾಲುಗಳನ್ನು ಎದುರಿಸುವ ಪ್ರಮೇಯ ಬರುತ್ತಿರಲಿಲ್ಲ. ಅವರ ಮುಖ್ಯಮಂತ್ರಿ ಖುರ್ಚಿ ಕೂಡ ಅಲುಗಾಡುತ್ತಿರಲಿಲ್ಲ ಎಂದು ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು.



ಅಧಿಕಾರದಲ್ಲಿ ಇದ್ದ ಸಮಯದಲ್ಲಿ ಕುಟುಂಬಸ್ಥರನ್ನು ಹತ್ತಿರ ಇಟ್ಟುಕೊಂಡರೆ, ತಮ್ಮ ಮಕ್ಕಳ ಬೆಳೆಸಲು ಮುಂದಾದರೆ ಯಾವ ರೀತಿ ಕಳಂಕ ಅಂಟಿಕೊಳ್ಳುತ್ತದೆ ಎಂಬುದಕ್ಕೆ ಸಿದ್ದರಾಮಯ್ಯ ಅವರ ಇವತ್ತಿನ ಸ್ಥಿತಿ ಸ್ಪಷ್ಟ ನಿದರ್ಶನ ಎಂದು ಹೇಳಿದರು.

ವಿಜಯನಗರದಲ್ಲಿ ಅಕ್ರಮವಾಗಿ ಮಂಜೂರಾಗಿದ್ದ 14 ನಿವೇಶನಕ್ಕೆ 62 ಕೋಟಿ ರೂಪಾಯಿ ಕೇಳಿದ ದಿನವೇ ಸಿದ್ದರಾಮಯ್ಯ ಮೇಲಿನ ಗೌರವ ಕಡಿಮೆಯಾಯಿತು. ಪಾರ್ವತಿ ಅವರು ನಿವೇಶನ ವಾಪಸ್ ಕೊಟ್ಟಿದ್ದರೂ ತನಿಖೆ ಆಗಲೇಬೇಕು ಎಂದು ಒತ್ತಾಯಿಸಿದರು.

ಪಾರ್ವತಿ ಅವರ ಭಾವನಾತ್ಮಕ ಕಾರ್ಡ್‌ನಿಂದ ಈಗ ಯಾವುದೇ ಪ್ರಯೋಜನವಿಲ್ಲ. ಇಷ್ಟು ದಿನ ನಿವೇಶನಕ್ಕಾಗಿ ಹಠ ಹಿಡಿದು ಕುಳಿತಿದ್ದೆ ದೊಡ್ಡ ತಪ್ಪಾಗಿತ್ತು ಈಗ ನಿವೇಶನ ಕೊಡುವುದಾಗಿದ್ದರೆ ಹೈಕೋರ್ಟ್‌ನಲ್ಲಿ ಏಕೆ ಕಾನೂನು ಹೋರಾಟ ಮಾಡಬೇಕಿತ್ತು ಎಂದು ಪ್ರಶ್ನಿಸಿದರು.

ವರುಣ ವಿಧಾನಸಭಾ ಚುನಾವಣೆ ಸಂದರ್ಭದಲ್ಲೇ ನನಗೆ ದಾಖಲಾತಿ ಲಭ್ಯವಾಯಿತು. ಆದರೆ ಪಾರ್ವತಿ ಅವರ ಹೆಸರಿದ್ದ ಕಾರಣ ನಾನು ಮೌನವಾದೆ ಎಂದರು.

ರಾಜಕಾರಣಿಗಳು ತಮ್ಮ ಹೆಂಡತಿ, ಮಕ್ಕಳನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳಬೇಕು. ಈ ಹಿಂದೆ ಕುಟುಂಬದ ಕಾರಣಕ್ಕಾಗಿ ಮುಖ್ಯಮಂತ್ರಿ ಜೈಲಿಗೆ ಹೋಗಿರುವುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಎಂದು ಪ್ರತಾಪ್ ಸಿಂಹ ಸಲಹೆ ನೀಡಿದರು.

ಸಿದ್ದರಾಮಯ್ಯ, ಡಿಕೆಶಿಗೆ ಹಂದಿ ಅಂತ ಕರೆದಿದ್ದರೆ ಸುಮ್ಮನಿರುತ್ತಿದ್ದರೆ...

ಮುಖ್ಯಮಂತ್ರಿ ಸಿದ್ದರಾಮಯ್ಯ ಅಥವಾ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಅಧಿಕಾರಿಯೊಬ್ಬರು ಹಂದಿ ಎಂದು ಕರೆದಿದ್ದರೆ ಅವರು ಸುಮ್ಮನಾಗಿರುತ್ತಿದ್ದರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಪ್ರಶ್ನಿಸಿದ್ದಾರೆ. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಗ್ಗೆ ಹಂದಿ ಎಂಬ ಪದ ಉಲ್ಲೇಖಿಸಿರುವ ಎಡಿಜಿಪಿ ಚಂದ್ರಶೇಖರ್ ಪತ್ರಕ್ಕೆ ಕಿಡಿಕಾರಿದ ಪ್ರತಾಪ್ ಸಿಂಹ, ಮೊದಲು ಚಂದ್ರಶೇಖರ್ ಅಮಾನತು ಮಾಡಬೇಕು ಎಂದು ಆಗ್ರಹಿಸಿದರು.

ಚಂದ್ರಶೇಖರ್ ಬಗ್ಗೆ ಕುಮಾರಸ್ವಾಮಿ ಬಳಿ ದಾಖಲೆ ಇರಬಹುದು. ಈ ಹಿನ್ನೆಲೆಯಲ್ಲಿ ಆರೋಪ ಮಾಡಿದ್ದಾರೆ. ಒಂದು ವೇಳೆ ಕುಮಾರಸ್ವಾಮಿ ಆಧಾರರಹಿತ ಆರೋಪ ಮಾಡಿದ್ದರೆ ಅವರ ವಿರುದ್ಧ ಚಂದ್ರಶೇಖರ್ ಮಾನನಷ್ಟ ಮೊಕದ್ದಮೆ ದಾಖಲಿಸಬಹುದಿತ್ತು ಅದು ಬಿಟ್ಟು ಹೀಗೆ ಹಂದಿ ಎಂದು ಕರೆದಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಚಂದ್ರಶೇಖರ್ ಕರ್ನಾಟಕ ಕೇಡರ್ ಅಧಿಕಾರಿಯಲ್ಲ, ಹಿಮಾಚಲ ಪ್ರದೇಶದ ಕೇಡರ್ ಅಧಿಕಾರಿ. ಅವರು ಕರ್ನಾಟಕದಲ್ಲೇಕೆ ಇದ್ದಾರೆ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಮೊದಲು ಚಂದ್ರಶೇಖರ್ ರಾಜ್ಯದಿಂದ ತೊಲಗಬೇಕು, ಗೆಟ್ ಲಾಸ್ಟ್ ಎಂದು ಕಿಡಿಕಾರಿದರು.

ಕನ್ನಡಿಗರಾದ ಕುಮಾರಸ್ವಾಮಿ ವಿರುದ್ಧ ಬಾಯಿಗೆ ಬಂದಂತೆ ಮಾತನಾಡಿದರೆ ಸುಮ್ಮನೆ ಇರುವುದಿಲ್ಲ. ಮಿಸ್ಟರ್ ಚಂದ್ರಶೇಖರ್, ನಿಮ್ಮ ಭಾಷೆ ಮೇಲೆ ಹಿಡಿತವಿರಲಿ. ಅವರು ಆಂಧ್ರಕ್ಕೆ ಹೋಗಲಿ, ಏಕೆಂದರೆ ಅಲ್ಲೇ ಹೆಚ್ಚು ಹಂದಿಗಳಿರುವುದು ಎಂದು ಸಲಹೆ ನೀಡಿದರು. ನಿಮ್ಮ ಉದ್ಧಟತನ ನಮ್ಮ ಬಳಿ ನಡೆಯುವುದಿಲ್ಲ ಎಂದು ಪ್ರತಾಪ್ ಸಿಂಹ ಎಡಿಜಿಪಿ ಚಂದ್ರಶೇಖರ್‌ಗೆ ಎಚ್ಚರಿಸಿದರು.

ಸಮಸ್ಯೆಗೆ ಎದೆಗುಂದದೆ ಕಾಯಕದಲ್ಲಿ ತೊಡಗಿದರೆ ಕಾಫಿ ಉದ್ಯಮ ಯಶಸ್ಸು

● ಕಾಫಿ ದಿನಾಚರಣೆಯಲ್ಲಿ ಸುತ್ತೂರು ಶ್ರೀಗಳ ಕರೆ ● ಅ.6, 7ರಂದು ಮಡಿಕೇರಿ ದಸರಾದಲ್ಲಿ ಕಾಫಿ ಬೆಳೆಗಾರರಿಗೆ ವಿಶೇಷ ಕಾರ್ಯಾಗಾರ ● ಕಾಫಿಯಲ್ಲಿ ಅನೇಕ ಖಾಯಿಲೆ ಗುಣಪಡಿಸುವ ಶಕ್ತಿ ಇದೆ ● ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದವರಿಗೆ ಕಾಫಿ ವಿತರಣೆ

ಮೈಸೂರು, ಅ.1(ಜಿಎ)–ಕಾಫಿ ಬೆಳೆಗಾರರಿಗೆ ಸಮಸ್ಯೆ ಇದ್ದೇ ಇರುತ್ತದೆ. ಬೆಳೆಯಲ್ಲಿ ಏರುಪೇರು ಆಗಬಹುದು. ಆದರೆ, ಅದಕ್ಕೆ ಎದೆಗುಂದದೆ ನಿರಂತರವಾಗಿ ಕಾಫಿ ಬೆಳೆಯುವ ಕಾಯಕದಲ್ಲಿ ತೊಡಗಿಸಿಕೊಂಡರೆ ಯಶಸ್ಸು ಸಾಧಿಸಬಹುದು ಎಂದು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.



ಮೈಸೂರಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ನಡೆದ 10ನೇ ಅಂತರರಾಷ್ಟ್ರೀಯ ಕಾಫಿ ದಿನಾಚರಣೆಯನ್ನು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಂಗಳವಾರ ಉದ್ಘಾಟಿಸಿದರು.

ಮೈಸೂರು ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಕರ್ನಾಟಕ ಗ್ರೋವರ್ಸ್ ಫೆಡರೇಶನ್, ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘದ ವತಿಯಿಂದ ಮಂಗಳವಾರ ಆಯೋಜಿಸಿದ್ದ 10ನೇ ಅಂತಾರಾಷ್ಟ್ರೀಯ ಕಾಫಿ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಗತ್ತಿನಲ್ಲೇ ಭಾರತ ಕಾಫಿ ರಫ್ತಿನಲ್ಲಿ 6ನೇ ಸ್ಥಾನದಲ್ಲಿದೆ. ಅದಕ್ಕೆ ಕಾಫಿ ಬೆಳೆಗಾರರ ಕೊಡುಗೆ ಹೆಚ್ಚಿದೆ. ಹಾಸನ, ಸಕಲೇಶಪುರ ಭಾಗದವರೇ ಹೆಚ್ಚು ಎಂಬುದೇ ಸಂತಸ ವಿಚಾರವಾಗಿದೆ ಎಂದು ತಿಳಿಸಿದರು.

ಕಾಫಿ ಬೆಳೆಗೆ ಸಾಕಷ್ಟು ಇತಿಹಾಸವಿದ್ದು, ಕಾಫಿ ಸೇವನೆ ಮಾಡುವುದರಿಂದ ದೇಹಕ್ಕೆ ಒಳ್ಳೆಯದು ಮತ್ತು ಆರೋಗ್ಯಕ್ಕೆ ಹಾನಿಕಾರಕ ಅಂಶಗಳಿವೆ ಇದೆ ಎಂದು ಹಿಂದಿನ ಕಾಲದಿಂದಲೂ ಹೇಳುತ್ತಾ ಬಂದಿದ್ದಾರೆ. ಕೆಲವು ದೇಶದಲ್ಲಿ ಕಾಫಿಗೆ ನಿಷೇಧ ಹೇರಲಾಯಿತು. ನಂತರ ಆ ನಿಷೇಧವನ್ನು ತೆಗೆದಿದ್ದಾರೆ. ಕಾಫಿ ಬೆಳೆಯ ಬಗ್ಗೆ ನಿರಂತರವಾಗಿ ಸಂಶೋಧನೆಗಳು ನಡೆಯುತ್ತಿವೆ. ಈಗ ಬಂದ ವರದಿಯಿಂದ ಕಾಫಿ ತುಂಬಾ ಆರೋಗ್ಯಕರವಾದದ್ದು, ಅನೇಕ ಖಾಯಿಲೆ ಗಳನ್ನು ಗುಣಪಡಿಸುವ ಶಕ್ತಿ ಇದೆ ಎಂದು ತಿಳಿದು ಬಂದಿದೆ ಎಂದರು.

ಮೈಸೂರಲ್ಲಿ ನವರಾತ್ರಿ ಪ್ರಾರಂಭವಾಗುವ ಮುನ್ನ ದಿನ ಕಾಫಿ ದಿನಾಚರಣೆ ನಡೆಸುತ್ತಿರುವುದು ಸಂತಸದ ವಿಚಾರ. ಅರಮನೆ ಮತ್ತು ಕಾಫಿ ಬೆಳೆಗಾರರಿಗೆ ಅವಿನಾಭಾವ ಸಂಬಂಧವಿದ್ದು, ಮೈಸೂರಿನ ಅರಸರು ಲೋಕಕಲ್ಯಾಣಕ್ಕೆ ಶ್ರಮಿಸಿದರು ಎಂಬುದು ದೇಶಕ್ಕೆ ಗೊತ್ತಿದೆ. ಮೈಸೂರು ಅರಮನೆ ನಾಡಿಗೆ ಮಾಡದ ಕೆಲಸವೇ ಇಲ್ಲ ಎಂಬಂತೆ ಅದರ ಫಲ ಕಾಫಿ ಬೆಳೆಗಾರರಿಗೂ ಪಸರಿಸಿದೆ ಎಂದು ತಿಳಿಸಿದರು.

ಮಡಿಕೇರಿ ಶಾಸಕ ಡಾ.ಮಂಥರ್ ಗೌಡ ಮಾತನಾಡಿ, ಕಾಫಿ ಬೆಳೆಯುವ ಖುಷಿ, ರಾಜಕಾರಣದಲ್ಲಿ ಸಿಗುವುದಿಲ್ಲ. ಮಲೆನಾಡು ಭಾಗದ ಮಹಿಳೆಯರು ಕಾಫಿ ಉದ್ಯಮದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು ಎಂದರು.

ಕಾಫಿ ಬೆಳೆಗಾರರ ಪರವಾಗಿ ಸರ್ಕಾರ ಇದೆ. ದುಡ್ಡಿಗಿಂತ ಕಾಫಿ ಬೆಳೆಗಾರರನ್ನು ಪೋಷಿಸಬೇಕು. ಈಗ ಕಾಫಿಯಲ್ಲಿ ಕೂಡ ಕಾಲ ಬದಲಾಗಿದೆ. ಅದಕ್ಕೆ ತಕ್ಕಂತೆ ನಾವು ಬದಲಾಗಬೇಕು. ಇಂದಿನ ಕಾಲಘಟ್ಟದಲ್ಲಿ ಹಲವಾರು ರೀತಿಯಲ್ಲಿ ಕಾಫಿ ಬೆಳೆಗಾರರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಒಗ್ಗಟ್ಟು ಪ್ರದರ್ಶಿಸಿದರೆ ಕಾಫಿ ಬೆಳೆಗಾರರ ಪರವಾಗಿ ಹೋರಾಟ ಮಾಡಬಹುದು. ಈ ವರ್ಷ 6 ರಿಂದ 7 ತಿಂಗಳು ಉತ್ತಮ ಮಳೆ ಆಗಿದ್ದು, ಹಲವಾರು ಬೆಳೆ ಹಾನಿ ಉಂಟಾಗಿದೆ. ಅದಕ್ಕೆ ಸರ್ವೇ ಕಾರ್ಯವು ನಡೆಯುತ್ತಿದೆ. ಸಂಶೋಧನೆಗೆ ಹೆಚ್ಚು ಒತ್ತು ನೀಡಬೇಕು ಎಂದು ತಿಳಿಸಿದರು.

ಅ.6 ಮತ್ತು 7 ರಂದು ನಡೆಯುವ ಮಡಿಕೇರಿ ದಸರಾದಲ್ಲಿ ಕಾಫಿ ಬೆಳೆಗಾರರಿಗೆ ವಿಶೇಷ ಕಾರ್ಯಾಗಾರ ನಡೆಸಲಾಗುತ್ತಿದೆ. ಅಲ್ಲಿ ಕಾಫಿ ಬೆಳೆಯ ಕುರಿತು ಸಲಹೆ, ಮಾಹಿತಿಯನ್ನು ನೀಡಲಾಗುವುದು. ಆಸಕ್ತರು ಪಾಲ್ಗೊಳ್ಳಬಹುದು ಎಂದರು.

ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಸಕಲೇಶಪುರ ಶಾಸಕ ಎಸ್.ಮಂಜುನಾಥ್, ಶಾಸಕ ಟಿ.ಎಸ್.ಶ್ರೀವತ್ಸ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಭಾರತೀಯ ಕಾಫಿ ಮಂಡಳಿ ಅಧ್ಯಕ್ಷ ಎಂ.ಜೆ.ದಿನೇಶ್, ಸದಸ್ಯರಾದ ಎನ್.ಬಿ. ಉದಯ್ ಕುಮಾರ್, ಜಿ.ಕೆ.ಕುಮಾರ್, ಕರ್ನಾಟಕ ಗ್ರೋವರ್ಸ್ ಫೆಡರೇಶನ್ ಅಧ್ಯಕ್ಷ ಡಾ.ಎಚ್.ಟಿ.ಮೋಹನ್ ಕುಮಾರ್, ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘದ ಅಧ್ಯಕ್ಷ ಎ.ಎಸ್. ಪರಮೇಶ್, ಉಪಾಧ್ಯಕ್ಷ ಮಂಜುನಾಥ್ ಶೆಟ್ಟಿ, ಗೌರವ ಕಾರ್ಯದರ್ಶಿ ಕೆ.ಬಿ.ಲೋಹಿತ್, ಜಂಟಿ ಕಾರ್ಯದರ್ಶಿ ಅರುಣ್ ಕುಮಾರ್, ಖಜಾಂಚಿ ಎಂ.ಜೆ.ಸಚಿನ್ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಪೆಟ್ಟಾರಾಪ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ಕ) ದೇವರ (ಕ)	2+2 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಉಪೇಂದ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ದೇವರ (ತೆ)	4 ಪ್ರದರ್ಶನಗಳು
ರಾಜಕಮಲ್	
ಜೋಕರ್ ಪೋಲಿಕಾ ಡ್ಯೂಕ್ಸ್ (ಇಂ)	4 ಪ್ರದರ್ಶನಗಳು
ಸಂಗಂ	
ಮೆಯ್ಯರ್ಝುಗನ್ (ತ)	4 ಪ್ರದರ್ಶನಗಳು
ಲಿಡೋ	
ಹಗ್ಗ (ಕ)	2 ಪ್ರದರ್ಶನಗಳು
ಉಪೇಂದ್ರ (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
ಪೆಟ್ಟಾರಾಪ್ (ತ)	4 ಪ್ರದರ್ಶನಗಳು
ಪ್ರಭಾ	
ಸಂಜು (ಕ)	2 ಪ್ರದರ್ಶನಗಳು
ನೈಟ್ ರೋಡ್ (ಕ)	2 ಪ್ರದರ್ಶನಗಳು

ಸ್ಕ್ರೀನ್ 1	ಲುಕ್ ಬ್ಯಾಕ್ ಬಿಯಾಂಡ್ ದಿ ಬ್ಲೇಡ್ಸ್ (ಇಂ): ಬೆ.10.20ಕ್ಕೆ, ಮೆಯ್ಯರ್ಝುಗನ್ (ತ): ಮ.12.45ಕ್ಕೆ, ಸಂ.4.15ಕ್ಕೆ, ದೇವರ 1 (ತೆ): ರಾ.7.45ಕ್ಕೆ.
ಸ್ಕ್ರೀನ್ 2	ಸ್ತ್ರೀ 2 (ಹಿಂ): ಬೆ.10.10ಕ್ಕೆ, ಪೆಟ್ಟಾರಾಪ್ (ತ): ಮ.1.15ಕ್ಕೆ, ಹಿಟ್ಲರ್ (ತ): ಸಂ.4.15ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7ಕ್ಕೆ, ಮೆಯ್ಯರ್ಝುಗನ್ (ತ): ರಾ.10.05ಕ್ಕೆ
ಸ್ಕ್ರೀನ್ 3	ಕೇದಾರ್‌ನಾಥ್ ಕುರಿ ಫಾರಂ (ಕ): ಬೆ.10.40ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.10ಕ್ಕೆ, ಸಂಜು (ಕ): ಸಂ.4.25ಕ್ಕೆ, ಅನ್ನ (ಕ): ರಾ.7ಕ್ಕೆ, ಕೃಷಂ ಪ್ರಣಯ ಸಖಿ (ಕ): ರಾ.9.40ಕ್ಕೆ
ಸ್ಕ್ರೀನ್ 4	ದೇವರ 1 (ತೆ): ಬೆ.8ಕ್ಕೆ, ಬೆ.11.45ಕ್ಕೆ, ಮ.3.15ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.


ಸ್ಕ್ರೀನ್ 1	ಕೃಷ್ಣಂ ಪ್ರಣಯ ಸಖಿ (ಕ): ಮ.1.15ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.6.25ಕ್ಕೆ, ಹಿಟ್ಲರ್ (ತ): ರಾ.9.45ಕ್ಕೆ.
ಸ್ಕ್ರೀನ್ 2	ದೇವರ 1 (ತೆ): ಬೆ.8ಕ್ಕೆ, ಬೆ.11.20ಕ್ಕೆ, ಮ.2.40ಕ್ಕೆ, ಸಂ.6.05ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ದೇವರ 1 (ಕ): ಬೆ.10ಕ್ಕೆ, ಮ.1.20ಕ್ಕೆ, ಸಂ.4.40ಕ್ಕೆ, ದೇವರ 1 (ತೆ): ರಾ.8ಕ್ಕೆ.
ಸ್ಕ್ರೀನ್ 4	ಇಬ್ಬನಿ ತಬ್ಬಿದ ಇಳೆಯಲಿ (ಕ): ಬೆ.10.30ಕ್ಕೆ, ಮ.1.30ಕ್ಕೆ, ಹಿಟ್ಲರ್ (ತ): ಸಂ.4.35ಕ್ಕೆ, ದೇವರ 1 (ತೆ): ರಾ.7.15ಕ್ಕೆ

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸ್ನೇಹಮಯಿ ಕೃಷ್ಣರಿಗೆ ಜಾಮೀನು ರಹಿತ ಬಂಧನ ವಾರೆಂಟ್ ಜಾರಿ

ಮೈಸೂರು, ಅ.1(ಬಿಎಲ್‌ಯು)– ಮುಡಾ ಹಗರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕಾನೂನು ಸಮರ ಸಾರಿರುವ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ವಿರುದ್ಧ ಜಾಮೀನು ರಹಿತ ಬಂಧನ ವಾರೆಂಟ್ ಜಾರಿಯಾಗಿದೆ. ಮೈಸೂರಿನ 3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಈ ವಾರೆಂಟ್ ಜಾರಿಗೊಳಿಸಿದೆ. ಸ್ನೇಹಮಯಿ ಕೃಷ್ಣ ವಿರುದ್ಧ ಜೂನ್ 30, 2015 ರಂದು ಕುಮಾರ್ ಎಂಬುವರು ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದರು.



ಈ ಪ್ರಕರಣದ ಬಗ್ಗೆ ಇಂದು ನ್ಯಾಯಾಲಯದಲ್ಲಿ ವಿಚಾರಣೆ ಇತ್ತು. ಆದರೆ, ವಿಚಾರಣೆಗೆ ಗೈರು ಹಾಜರಾದ ಹಿನ್ನೆಲೆಯಲ್ಲಿ ಸ್ನೇಹಮಯಿ ಕೃಷ್ಣ ವಿರುದ್ಧ ಜಾಮೀನು ರಹಿತ ಬಂಧನದ ವಾರೆಂಟ್ ಜಾರಿ ಮಾಡಲಾಗಿದೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಸ್ನೇಹಮಯಿ ಕೃಷ್ಣ, ಚೆಕ್ ಬೌನ್ಸ್ ಪ್ರಕರಣ ಸಂಬಂಧ ಇಂದು ನ್ಯಾಯಾಲಯಕ್ಕೆ ಹಾಜರಾಗಬೇಕಿತ್ತು. ಆದರೆ ಸಿದ್ದರಾಮಯ್ಯ ಪ್ರಕರಣ ಸಂಬಂಧ ಇಂದು ಕೆಸರೆಯಲ್ಲಿ ಲೋಕಾಯುಕ್ತರ ಜೊತೆ ಮಹಜರು ಪ್ರಕ್ರಿಯೆಯಲ್ಲಿ ತೊಡಗಿದ್ದ ಕಾರಣ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದೆ. ಆದ ಕಾರಣ ವಾರೆಂಟ್ ಜಾರಿ ಮಾಡಲಾಗಿದೆ ಎಂದರು. ಮುಂದಿನ ವಿಚಾರಣೆ ವೇಳೆ ನ್ಯಾಯಾಲಯಕ್ಕೆ ಹಾಜರಾಗುತ್ತೇನೆ ಎಂದು ಸ್ನೇಹಮಯಿ ಕೃಷ್ಣ ಸ್ಪಷ್ಟಪಡಿಸಿದರು.

ರಾಜ್ಯಮಟ್ಟದ ಕವಿ–ಕಾವ್ಯ ಸಂಭ್ರಮ



ಹಾಸನದ ಮಾಣಿಕ್ಯ ಪ್ರಕಾಶನದ ವತಿಯಿಂದ ಶಿವಮೊಗ್ಗದ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ನಡೆದ ರಾಜ್ಯಮಟ್ಟದ ಕವಿ–ಕಾವ್ಯ ಸಂಭ್ರಮದಲ್ಲಿ ಮೈಸೂರಿನ ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಹಾಗೂ ಕವಿ ಟಿ. ಸತೀಶ್ ಜವರೇಗೌಡ ಅವರನ್ನು ಸನ್ಮಾನಿಸಲಾಯಿತು. ಸಂಭ್ರಮದ ಸರ್ವಾಧ್ಯಕ್ಷ ಅಬ್ದುಲ್ ಹೈ ತೋರಣಗಲ್ಲ, ಸಾಹಿತಿಗಳಾದ ಡಾ.ಹೆಚ್.ಕೆ. ಹಸೀನಾ, ಕೊಟ್ರೇಶ್ ಉಪ್ಪಾರ, ಪ್ರಾಧ್ಯಾಪಕ ಡಾ.ಕೆ.ಎನ್. ಮಂಜುನಾಥ್, ಪತ್ರಕರ್ತ ಶಿ.ಜು. ಪಾಶ ಮತ್ತಿತರರು ಉಪಸ್ಥಿತರಿದ್ದರು.

9ನೇ ವರ್ಷದ ಸವಿನೆನಪು



ಶ್ರೀಮತಿ ಜಯಲಕ್ಷ್ಮಿರವರು

(ಲೇಟ್ ಎಂ.ಎಲ್.ಅಪ್ಪಾಜಿಗೌಡರ ಪತ್ನಿ)

ಮಾಲೀಕರು, ಸುಪ್ರಭಾತ ಬಾರ್ & ರೆಸ್ಟೋರೆಂಟ್

ಇಂತಿ ದುಃಖತಪ್ತರು: ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಹಾಗೂ ಕುಟುಂಬವರ್ಗದವರು.

11ನೇ ವರ್ಷದ ಸವಿನೆನಪು



ಎಂ.ಡಿ. ಗಂಗಾಧರ

ಕುಮಾರ

ಜನನ: 27.1.1953

ಮರಣ: 2.10.2013

ಸದಾ ನಿಮ್ಮ ನೆನಪಿನಲ್ಲಿರುವ

ದುಃಖಿತಪ್ತರು

ಎಂ. ವಿಜಯಕುಮಾರ್

ಪತ್ನಿ: ಪಾರ್ವತಿ ಎಸ್.ಆರ್.

ಮಗ: ಎಂ.ಜಿ.ಪವನಕುಮಾರ್

ಮತ್ತು ಮಗಳು, ಮೊಮ್ಮಕ್ಕಳು

ನಂ.1015, 3ನೇ ಕ್ರಾಸ್

ಇರ್ವಿನ್ ರಸ್ತೆ, ಮೈಸೂರು

FOR SALE

A Successfully running Veg Café at VV Mohalla is for sale. Interested Person may Contact

9900252202

Teachers Required

Any Degree with B.Ed. qualified candidates required for teaching post. Immediate recruitment. Please contact:

7892351939, 9742792363

Cambridge Public School, Kikkeri, K.R. Pet, Srirangapatna

ಮನೆ ಬಾಡಿಗೆಗೆ ಅಥವಾ Lease / Sale ಇದೆ

No. 506, R.R. ನಗರ, BEML ಬಡಾವಣೆ, ಮೈಸೂರು. Cellar + Duplex house.

Mob: 7892351939

ಹೆರಿಟೇಜ್ ಹೋಮ್ಸ್ 2ನೇ ಹಂತ

MYSURU - HUNSUR HIGHWAY, MYSORE

MEGA RESIDENTIAL TOWNSHIP

MUDA LIMITS

30x40 | 30x50 | 40x60 | 50x80

ಅಚ್ಚುತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಕೆಲವೇ ಸೈಟ್‌ಗಳು ಮಾತ್ರ ಲಭ್ಯ

ಕೇವಲ ₹750/ ಪ್ರತಿ ಚದರ ಅಡಿ


ಸುಲಭ 4 ಕಂತುಗಳ ಸೌಲಭ್ಯವಿದೆ

ನಿಮ್ಮ ಕನಸಿನ ನಿವೇಶನ ನಿಮ್ಮ ಕೈಗೆಟುಕುವ ಬೆಲೆಯಲ್ಲಿ

ಅದ್ವಿಕಾ ವೆಂಚರ್ಸ್

9071386615 / 9513301854

ನಿಧನ



ಶ್ರೀಮತಿ ಪುಟ್ಟತಾಯಮ್ಮ (ಬೋರಮ್ಮ)

98ವರ್ಷ

(ಯ॥ಛೇ ದಿ.ಎಂ.ಜೆ ಸಿದ್ದೇಗೌಡರ ಧರ್ಮಪತ್ನಿ)

ಇವರು ದಿ: 01.10.2024 ಮಂಗಳವಾರ ದೈವಾದೀನರಾಗಿದ್ದು ಮೃತರ ಅಂತ್ಯಕ್ರಿಯೆಯನ್ನು ದಿ:02.10.2024 ಬುಧವಾರ ಮಧ್ಯಾಹ್ನ: 1 ಗಂಟೆಗೆ ಮರಟಿಕ್ಯಾತನಹಳ್ಳಿ ತೋಟದಲ್ಲಿ ನೆರವೇರಿಸಲಾಗುವುದು

ದುಃಖತಪ್ತರು: ಯ॥ ಎಂ.ಎಸ್.ಗಂಗಾಧರ್‌ರವರು, ಎಂ.ಎಸ್ ಜಗದೀಶ್‌ರವರು, ಎಂ.ಎಸ್.ಏಕಂಬರೀಶ್‌ರವರು ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಜೋಗೇಗೌಡರ ಕುಟುಂಬದವರು ಹಾಗೂ ಗ್ರಾಮಸ್ಥರು. ಮೊ: 9535964333

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದಲ್ಲಿ ವಾಸವಾಗಿರುವ ಲೇಟ್ ತಿಮ್ಮೇಗೌಡರವರ ಮಕ್ಕಳುಗಳಾದ ದೊಡ್ಡಮ್ಮ ಮತ್ತು ಇತರರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತಿಗೆ ಸಂಬಂಧಪಟ್ಟಂತೆ ಮೈಸೂರಿನ ಪ್ರಧಾನಸಿ.ಸಿ.ಜೆ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ವಾಸೇಗೌಡ ಮತ್ತು ಇತರರು, ಶ್ರೀಮತಿ ಗಾಯಿತ್ರಿ ರಾಜಗೋಪಾಲ್, ಸ್ಟಿರ್ಲಿಂಗ್ ಇಂಜಿನಿಯರ್ ಪ್ರೈವೇಟ್ ಲಿಮಿಟೆಡ್, ದಿ ಸಿಟಿಜನ್ ವೆಲ್‌ಫೇರ್ ಸೊಸೈಟಿ ರವರ ವಿರುದ್ಧ ಅಸಲು ದಾವಾ ಸಂಖ್ಯೆ 494/2017 ರಂತೆ ಘೋಷಣಾತ್ಮಕ ದಾವೆಯನ್ನು ಹೂಡಿದ್ದು, ಸದರಿ ದಾವೆಯು ನ್ಯಾಯಾಲಯದಲ್ಲಿ ವಿಚಾರಣಾಹಂತದಲ್ಲಿ ಇರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಈ ಪ್ರಕರಣ ಇತ್ಯರ್ಥವಾಗುವ ತನಕ ಸಾರ್ವಜನಿಕರಾಗಲೀ ಅಥವಾ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರಾಗಲೀ ಯಾರು ಸಹಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯಲ್ಲೂ ವ್ಯವಹರಿಸಬಾರದಾಗಿ ಈ ಮೂಲಕ ನನ್ನ ಕಕ್ಷಿದಾರರು ತಿಳಿಯಪಡಿಸುತ್ತಾರೆ.

ಷೆಡ್ಯೂಲ್

1. ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕೆ. ಹೆಮ್ಮನಹಳ್ಳಿ ಗ್ರಾಮದ ಹಳೆ ಸರ್ವೆ ನಂಬರ್ 16, ಹೊಸ ಸರ್ವೆ ನಂ. 16/1ರಲ್ಲಿ ವಿಸ್ತೀರ್ಣ 39 ಗುಂಟೆ ಸರ್ವೆ ನಂ. 16/2ರಲ್ಲಿ ವಿಸ್ತೀರ್ಣ 20 ಗುಂಟೆ, ಸರ್ವೆ ನಂ. 16/3ರಲ್ಲಿ 24 ಗುಂಟೆ, ಸರ್ವೆ ನಂ.16/4ರಲ್ಲಿ 1ಎಕರೆ 10 ಗುಂಟೆ ಒಟ್ಟು ವಿಸ್ತೀರ್ಣ 3ಎಕರೆ 13ಗುಂಟೆ ಜಮೀನು ಈ ನೋಟೀಸ್‌ಗೆ ಒಳಪಟ್ಟ ಜಮೀನಾಗಿರುತ್ತದೆ. ಇದಕ್ಕೆ ಚೆಕ್ಕುಬಂದಿ:- ಪೂರ್ವಕ್ಕೆ: ಸರ್ವೆ ನಂ. 17ರ ಸ್ವತ್ತು, ಪಶ್ಚಿಮಕ್ಕೆ: ಹುಯಿಲಾಳು ಗ್ರಾಮದ ಬೌಂಡ್ರಿ, ಉತ್ತರಕ್ಕೆ: ಹುಯಿಲಾಳು ಗ್ರಾಮದ ಬೌಂಡ್ರಿ, ದಕ್ಷಿಣಕ್ಕೆ: ರಾಮೇಗೌಡ ಬಿನ್ ಕಾಳೇಗೌಡರವರ ಸ್ವತ್ತು.

2. ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕೆ. ಹೆಮ್ಮನಹಳ್ಳಿ ಗ್ರಾಮದ ಹಳೆ ಸರ್ವೆ ನಂಬರ್ 17, ಹೊಸ ಸರ್ವೆ ನಂ. 17/1ರಲ್ಲಿ ವಿಸ್ತೀರ್ಣ 28 ಗುಂಟೆ ಸರ್ವೆ ನಂ. 17/2ರಲ್ಲಿ ವಿಸ್ತೀರ್ಣ 2 ಎಕರೆ 29 ಒಟ್ಟು ವಿಸ್ತೀರ್ಣ 3ಎಕರೆ 17 ಗುಂಟೆ ಜಮೀನು ಈ ನೋಟೀಸ್‌ಗೆ ಒಳಪಟ್ಟ ಜಮೀನಾಗಿರುತ್ತದೆ. ಇದಕ್ಕೆ ಚೆಕ್ಕುಬಂದಿ:- ಪೂರ್ವಕ್ಕೆ: ಸರ್ವೆ ನಂ. 19ರ ಸ್ವತ್ತು, ಪಶ್ಚಿಮಕ್ಕೆ: ಸರ್ವೆ ನಂ. 16ರ ಸ್ವತ್ತು ಉತ್ತರಕ್ಕೆ: ಹುಯಿಲಾಳು ಗ್ರಾಮದ ಬೌಂಡ್ರಿ, ದಕ್ಷಿಣಕ್ಕೆ: ಗಾಯಿತ್ರಿ ರಾಜಗೋಪಾಲ್‌ರವರ ಸ್ವತ್ತು.

ವಕೀಲರು:ಪೊರಸ್ವಾಮಿ ಆರ್.

ನಂ. 1563/1ಎ, 2ನೇ ಮಹಡಿ, ಕೆ.ಆರ್ ಮೊಹಲ್ಲಾ, ಮೈಸೂರು.

8ನೇ ವರ್ಷದ ಪುಣ್ಯಸ್ಮರಣೆ



ನಿಮ್ಮ ಅಗಲಿಕೆಯ ನೋವು ಆರದಿದ್ದರೂ ನಿಮ್ಮ ಜೀವ ಜ್ಯೋತಿ ಸದಾ ನಮ್ಮೆಲ್ಲರ ಬಾಳಿಗೆ ಬೆಳಕಾಗಿದೆ ಎಂದು, ಸದಾ ನಿಮ್ಮ ನೆನಪಿನಲ್ಲಿರುವ ಧರ್ಮಪತ್ನಿ ಶ್ರೀಮತಿ ಪದ್ಮನಾರಾಯಣ್, ಪುತ್ರ ಡಾ. ವಿನೋದ್.ಪಿ.ಎನ್., ಸೊಸೆ: ಕಾವ್ಯ ಪುತ್ರಿ ತೇಜಸ್ವಿನಿ.ಪಿ.ಎನ್., ಅಳಿಯ: ಮದನ್, ಕರಿಮಂಟಿ ತಿಮ್ಮೇಗೌಡರು ಹಾಗೂ ದಳಪತಿ ರಾಮೇಗೌಡರು ಕುಟುಂಬ ವರ್ಗದವರು.

ಬಿ.ನಾರಾಯಣ್

(ರೈಲ್ವೆ)

ಆಫೀಸ್ ಸೂಪರಿಡೆಂಟ್, ಸದರನ್ ರೈಲ್ವೆ, ಮೈಸೂರು. ಅಧ್ಯಕ್ಷರು, ಮಂಡ್ಯ ಜಿಲ್ಲಾ ಯೂನಿಯನ್ ಕೋ-ಆಪರೇಟಿವ್ ಬ್ಯಾಂಕ್, ಮಂಡ್ಯ ಜೆಡಿಎಸ್ ಮುಖಂಡರು, ಪಾಲಹಳ್ಳಿ

ಎಲ್ಲರಿಗೂ ನವರಾತ್ರಿ, ದಸರಾ ಮತ್ತು ಆಯುಧ ಪೂಜೆಗೆ ಶುಭಹಾರೈಸುತ್ತೇವೆ



ಗಾಯತ್ರಿ ಟಾಕೀಸ್ ನಲ್ಲಿ ಮಾತ್ರ

ದೇವರ (ತೆಲುಗು)

ದಿನ 4 ಪ್ರದರ್ಶನ

ಬಾಲ್ಕನಿ 150/- ಫಸ್ಟ್ ಕ್ಲಾಸ್ 100/-

ಆನ್‌ಲೈನ್ ಟಿಕೆಟ್ಸ್ bookmyshow

ಚಲನಚಿತ್ರವು ಪವರ್-ಪ್ಯಾಕ್ಡ್ ವಿಷುಯಲ್ ಸ್ಪೆಕ್ಟಾಕಲ್ ಆಗಿದೆ, ಈ ಚಿತ್ರದಲ್ಲಿ ಶಕ್ತಿ ತುಂಬುವ ದೃಶ್ಯಗಳಿವೆ

ಕರ್ನಾಟಕ ಸರ್ಕಾರ
ಪ್ರವಾಸೋದ್ಯಮ ಇಲಾಖೆ

ಉಪ ನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ಪಿಇಎಸ್ ಇಂಜಿನಿಯರಿಂಗ್ ಕಾಲೇಜು ರಸ್ತೆ, ಮಂಡ್ಯ–571401

E-Mail: ddmandyatourism@gmail.com

ದೂರವಾಣಿ ಸಂಖ್ಯೆ: 08232–238377

ಸಂಖ್ಯೆ:ಪ್ರಇ/ಉನಿ/ಮಂ/13/2022–23 ದಿ:30.09.2024

ಇ–ಟೆಂಡರ್ ಪ್ರಕಟಣೆ

ಮಂಡ್ಯ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ಕೇಂದ್ರ/ರಾಜ್ಯ ಸರ್ಕಾರದ ಪುರಸ್ಕೃತ ಯೋಜನೆಗಳ ಅನುಷ್ಠಾನ ಹಾಗೂ ಜಿಲ್ಲೆಯ ಪ್ರವಾಸಿ ತಾಣಗಳ ಸಮಗ್ರ ಅಭಿವೃದ್ಧಿ ಸಂಬಂಧ ವಿವರವಾದ ಯೋಜನಾ ವರದಿ (ಡಿ.ಪಿ.ಆರ್) ಅನ್ನು ರೂ.10.00 ಲಕ್ಷಗಳಲ್ಲಿ ಸಿದ್ಧಪಡಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಲ್ಲಿ (ಕೆಪಿಪಿಪಿ) ಇ–ಟೆಂಡರ್ ಆಹ್ವಾನಿಸಲಾಗಿದೆ.

ಕ್ರ ಸಂ : 01. ವಿವರ : ಮಂಡ್ಯ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ಕೇಂದ್ರ/ರಾಜ್ಯ ಸರ್ಕಾರದ ಪುರಸ್ಕೃತ ಯೋಜನೆಗಳ ಅನುಷ್ಠಾನ ಹಾಗೂ ಜಿಲ್ಲೆಯ ಪ್ರವಾಸಿ ತಾಣಗಳ ಸಮಗ್ರ ಅಭಿವೃದ್ಧಿ ಸಂಬಂಧ ವಿವರವಾದ ಯೋಜನಾ ವರದಿ (ಡಿ.ಪಿ.ಆರ್) ಅನ್ನು ರೂ.10.00 ಲಕ್ಷಗಳಲ್ಲಿ ಸಿದ್ಧಪಡಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಲ್ಲಿ (ಕೆಪಿಪಿಪಿ) ಇ–ಟೆಂಡರ್ ಆಹ್ವಾನಿಸಿರುವ ಬಗ್ಗೆ. ಇ.ಎಂ.ಡಿ ಮೊಬಲಗು : ರೂ.25,000/–. ನಿಗದಿಪಡಿಸಿರುವ ಅಂದಾಜು ಮೊಬಲಗು : ರೂ.10.00 ಲಕ್ಷಗಳು. (2) ಟೆಂಡರ್ ಅರ್ಜಿ ಸಲ್ಲಿಸುವ ಪೋರ್ಟಲ್ : https://kppp.karnataka.gov.in. (3) ಅರ್ಜಿದಾರರು ಟೆಂಡರ್ ಅರ್ಜಿ ಸಲ್ಲಿಸುವ ಆರಂಭಿಕ ದಿನಾಂಕ : 01.10.2024 ಬೆಳಿಗ್ಗೆ 12.00 ಗಂಟೆ. (4) ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ : 15.10.2024 ಸಂಜೆ 5.30. (5) ಟೆಂಡರ್ ತೆರೆಯುವ ಸಮಯ ಮತ್ತು ದಿನಾಂಕ : (1) ದಿನಾಂಕ : 18.10.2024,ಬೆಳಿಗ್ಗೆ 11.00 ಗಂಟೆ (ತಾಂತ್ರಿಕ ಬಿಡ್). (2) ದಿನಾಂಕ : 19.10.2024 ಬೆಳಿಗ್ಗೆ : 11.00 ಗಂಟೆ (ಆರ್ಥಿಕ ಬಿಡ್). (6) ಟೆಂಡರ್ ತೆರೆಯುವ ಸ್ಥಳ : ಉಪ ನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ಪಿಇಎಸ್ ಇಂಜಿನಿಯರಿಂಗ್ ಕಾಲೇಜು ರಸ್ತೆ, ಮಂಡ್ಯ. (7) ಟೆಂಡರ್ ತೆರೆಯುವ ಅಧಿಕಾರಿ : ಉಪನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ. ಮಂಡ್ಯ ಜಿಲ್ಲೆ. (8) ಮೇಲ್ಮನವಿ ಪ್ರಾಧಿಕಾರ : ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು. ಷರತ್ತು/ನಿಬಂಧನೆಗಳ ಮಾಹಿತಿಯನ್ನು ಉಪನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ. ಮಂಡ್ಯ ಕಛೇರಿಯಿಂದ ಪಡೆಯಬಹುದು

ಸಹಿ/–ಉಪನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮಂಡ್ಯ ಜಿಲ್ಲೆ

ವಾಸಾಸಂಇ/ಸಾ–ಮಂ/ಕಿಪಿಸ್‌ಎಂಸಿಕಿ/347/2024–25

District Health and Family Welfare Society
District Programme Management Unit, Chamarajanagar District, Chamarajanagar.

#308, 3rd Floor, District Administrative Building, Sri. B. Rachaiah Double Road, Chamarajanagar District - 571313

Email ID : rchochamarajanagar@gmail.com Telephone : 08226-355162

15th FC/DPMU/CHN/MH/RFP/03/2024-25 Dated: 01-10-2024

Request for Proposal (RFP)

To Conduct FT4, TSH & Vitamin 12 services to Pregnant Women under 15th Finance commission in Chamarajanagar District for FY 2024-2025

GOVERNMENT OF KARNATAKA

15th Finance commission

Tender No: DHFWS/2024-25/SE0939/CALL-2 Date: 01.10.2024

Name of the Tender	:	FT4, TSH & Vitamin 12 Lab services to Pregnant Women under 15th Finance Commission in Chamarajanagar District
Date and time for commencement of downloading of bidding document	:	Date:01.10.2024 Time:10:30AM
Last date and time for bid submission/ uploading of bid in E-Procurement platform	:	Date:14.10.2024 Time: 04.30PM
Date and time for opening of Technical Bids	:	Date: 15.10.2024 Time: 4.30 PM The bids will be opened online by the Authorized Officers at the appointed time
Date and time for opening of Financial Bids	:	Date:16.10.2024 Time:4:30PM
Place of opening of bids and address for communication	:	District Health & Family Welfare Office, Chamarajanagar

ಸಂ: ವಾಸಾಸಂಇ : ಚಾನಗರ : 305 :2024-25

Sd/- Vice President,
District Health & Family Welfare Society,
Chamarajanagar District, Chamarajanagar.

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

11ನೇ ವರ್ಷದ ಪುಣ್ಯಸ್ಮರಣೆ



ಶ್ರೀ. ಎಂ.ಎನ್.ಚಂದ್ರಪ್ಪ

(ಅಸಿಸ್ಟೆಂಟ್ ಕಮೀಷನರ್ ಆಫ್ ಪೊಲೀಸ್)

ನಿಮ್ಮ ಅಗಲಿಕೆಯನ್ನು ಕೇವಲ ಪದಗಳಲ್ಲಿ ವ್ಯಕ್ತಪಡಿಸಲು ಸಾಧ್ಯವಿಲ್ಲ. ನಿಮ್ಮ ಜೊತೆ ಕಳೆದ ಪ್ರತಿ ಕ್ಷಣಗಳನ್ನು ನಮ್ಮ ಹೃದಯದಲ್ಲಿ ಅತ್ಯಂತ ಗೌರವ ಮತ್ತು ಪ್ರೀತಿಯಿಂದ ನೆನೆಯುತ್ತೇವೆ. ಸಮಯ ಬದಲಾಗುತ್ತಾ ಹೋದರೂ... ನಮ್ಮ ಜೀವನದಲ್ಲಿ ನಿಮ್ಮ ಉಪಸ್ಥಿತಿ ಎಂದೂ ಅಳಿಯುವುದಿಲ್ಲ.

ಶ್ರೀಮತಿ. ವನಜಾ ಚಂದ್ರಪ್ಪ ಮತ್ತು ಮಕ್ಕಳು, ಸ್ನೇಹಿತರು ಹಾಗೂ ಕುಟುಂಬವರ್ಗದವರು

BEFORE THE COURT OF INDUSTRIAL TRIBUNAL AT MYSURU

Ref no: 34 of 2023

I Party: B Raje Urs and others, Rep by the General Secretary, Sri Ganesh Spinners Workers Union, Mysuru Industrial Workers, General Union (AITUC) No: 2 K.V Bhavana, 2nd Main Road, Saraswathipuram Mysuru **VS**

II Party: The Managing Director, M/s Ganesh Spinners, Seeguru, Periyapatna Taluk, Mysuru District.

To: The Managing Director, M/s Ganesh Spinners, Seguru, Priyapatna Taluk, Mysuru District.

Whereas, the I Party has instituted the above case/reference against you as the II Party for the relief of claiming the bonus during the period of 2021-2022. The notice served by the court returned un-served.

The above case stands posted for the issuing of summons. Hence, you are hereby called upon to appear before the Industrial Tribunal at Mysuru in person or by a pleader on 29.10.2024.11:00 AM. Take notice that, in default of your appearance on the day before mentioned,the case will be heard and determined in your absence as exparte.

Given under my hand and the seal of the court, this...23.09.2004

Date: 23.09.2024
Place: Mysuru

Sd/- Sheristedar,
The Industrial Tribunal, Mysuru

Sd/- Advocate for 1st party
Date: 17.09.2024, Place: Mysuru